1932

ಶಿವಾನುಭವ ಗ್ರಂಥಮಾಲಾ ನಂ|| ೩೩

# ನಿರಂಜನ ವಂಶರತ್ನಾಕರ.

ಸಂಪಾದಕರು.

**ರಾ|| ಸಾ|| ಫ. ಗು ಹಳಕಟ್ಟಿ.**

ಬಿ. ಎ ಎಲ್. ಎಲ್. ಬಿ. ವಿಜಾಪುರ.

ಗ್ರಂಥಾಲಯ
Q234'332wx
33 Hal
7975
೧೯೩೨
111

ಬೆಲೆ ೮ ಆಣೆ.

(ಈ ಗ್ರಂಥದ ಎಲ್ಲ ಹಕ್ಕುಗಳನ್ನು ಗ್ರಂಥಕರ್ತರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ.)

111

1932
111
7975

# ಪ್ರಸ್ತಾವನೆ.

ನಿರಂಜನ ವಂಶರತ್ನಾಕರವು ನಮಗೆ ದೊರೆತ ಒಂದು ಹಸ್ತಲಿಖಿತ ಪ್ರತಿಯ ಸಹಾಯದಿಂದ ಮುದ್ರಿಸಿದ್ದೇವೆ. ಈ ಪ್ರತಿಯು ಅಪೂರ್ಣವಾಗಿದ್ದದರಿಂದ ನಾವು ಅಷ್ಟನ್ನೇ ಮುದ್ರಣಗೊಳಿಸಬೇಕಾಯಿತು. ಪೂರ್ಣ ಪ್ರತಿಯು ಯಾರಲ್ಲಾದರೂ ಇದ್ದರೆ, ಅದನ್ನು ಅವರು ನಮ್ಮ ಕಡೆಗೆ ಕಳಿಸಿಕೊಟ್ಟಲ್ಲಿ ಅವರಿಗೆ ನಾವು ಬಹಳ ಆಭಾರಿಯಾಗುವೆವು. ಮತ್ತು ಈ ಗ್ರಂಥವನ್ನು ನಾವು ಪೂರ್ತಿಯಾಗಿ ಮುದ್ರಣಗೊಳಿಸುವೆವು.

ಈಗಿನ ಗ್ರಂಥದಲ್ಲಿ ಅನೇಕ ಐತಿಹಾಸಿಕ ವಿಷಯಗಳು ಉಲ್ಲೇಖಿಸಲ್ಪಟ್ಟಿದ್ದು ತೋರಿಬರುತ್ತದೆ. ಗ್ರಂಥಕರ್ತನು ಈ ಗ್ರಂಥವನ್ನು ಬರೆಯುವಲ್ಲಿ ಬಹಳ ಸಂಶೋಧನಮಾಡಿ ಬರೆದಿರುವನೆಂಬದು ನಿರ್ವಿವಾದವಾದದ್ದು. ಅವನು ಇದರಲ್ಲಿ ಬರೇ ಅದ್ಭುತ ಸಂಗತಿಗಳನ್ನು ವರ್ಣಿಸುವದನ್ನು ಬಿಟ್ಟುಕೊಟ್ಟು ನಿಜವಾಗಿ ವರ್ತಿಸಿದ ಐತಿಹಾಸಿಕ ಸಂಗತಿಗಳನ್ನು ವಿಶೇಷವಾಗಿ ಸಂಗ್ರಹಿಸಲು ಯತ್ನಿಸಿದ್ದು ತೋರಿಬರುತ್ತಿದೆ. ಈ ಗ್ರಂಥದ ಮೇಲಿಂದ ಮೊದಲಿನ ಮಠಾಧಿಪತಿಗಳು ವೀರಶೈವ ಮತಪ್ರಸಾರದ ಸಲುವಾಗಿ ಎಷ್ಟು ಮಹತ್ತರವಾದ ಪ್ರಯತ್ನಗಳನ್ನು ಮಾಡುತ್ತ ಬಂದರೆಂಬದು ಬಹಳ ಚನ್ನಾಗಿ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಈ ಗ್ರಂಥವು ಬಹಳ ಮಹತ್ವದ್ದಿರುತ್ತದೆ. ಈ ಗ್ರಂಥವನ್ನು ಸಂಪೂರ್ಣವಾಗಿ ಮುದ್ರಣಗೊಳಿಸುವ ಸುಸಂಧಿಯು ಬೇಗನೆ ಬರಲೆಂದು ಹಾರೈಸುತ್ತೇವೆ.

ವಿಜಾಪುರ
೩—೧೨—೩೨

ಫ. ಗು. ಹಳಕಟ್ಟಿ.
ಸಂಪಾದಕ.

The Vijay College
LIBRARY
VIJAY COLLEGE,
BIJAPUR.

# ನಿರಂಜನ ವಂಶರತ್ನಾಕರ.

ಶ್ರೀಗುರು ಬಸವಲಿಂಗಾಯನಮಃ. ಶ್ರೀಮನ್ಮಹಾಶೂನ್ಯ ಸಿಂಹಾಸನಾಧೀಶ್ವರ ಜಗದ್ಗುರುಗಳಾದ ಆಲ್ಲಮಪ್ರಭು ಚನ್ನಬಸವರಾಜೇಂದ್ರ ಸ್ವಾಮಿಗಳವರ ಶಿಷ್ಯ ಪರಂಪರ ವಂಶರತ್ನಾಕರ ಪ್ರಭುವಂಶೋದ್ಭವರಾದ ಗುರುಗಳವರ ವಿವರವು.

ಶ್ರೀಮಚ್ಚಿನ್ಮೂಲಾದ್ರಿ ಸಮಸ್ತ ಪ್ರಭು ದ್ವಾರಾವತಿ ಜಟಿಪುರ ಶೂನ್ಯ ಸಿಂಹಾಸನ ಬೃಹನ್ಮಠದ ಮಹಾಗುರು ಸನ್ನಿಧಾನದಲ್ಲಿ ಕಲ್ಯಾಣ ಆದಿಯಾಗಿ ಜಗದ್ಗುರುಗಳಾದ ಅಲ್ಲಮಪ್ರಭು ಚನ್ನಬಸವ ರಾಜೇಂದ್ರರು ಕಲಿಯುಗದಲ್ಲಿ ನಡೆವ ರಕ್ತಾಕ್ಷಿ ಸಂವತ್ಸರ ಅಂದರೆ ನೃಪ ಶಾಲಿವಾಹನ ಶಕ ಏಳನೂರ ಏಳನೆಯ ರಕ್ತಾಕ್ಷಿ ಸಂವತ್ಸರ ಫಾಲ್ಗುಣ ಶುದ್ಧ ೧೧ ಏಕಾದಶಿ ಮಂಗಳವಾರ ಉದಯ ೨೫ ಗಳಿಗೆ ವೇಳೆಯಲ್ಲು ಶ್ರೀ ಬಸವರಾಜೇಂದ್ರರು ಕಲ್ಯಾಣ ಪುರವಂ ಬಿಟ್ಟು ಕೃಷ್ಣಾ ತೀರ ಕಪ್ಪಡಿ ಸಂಗಮೇಶ್ವರ ಲಿಂಗದಲ್ಲಿ ಉದ್ಭವವಾದ ನಿರಂಜನ ಜಂಗಮ ಮುಖದಿಂದ ಲಿಂಗದಲ್ಲಿ ಐಕ್ಯವಾದ ಬಳಿಕ ಶಿವಾನುಭವ ಚರಂತಿಕೆ ಪಟ್ಟಕ್ಕೆ ಕಾರಣ ಕರ್ತರಾದ ಶ್ರೀಮನ್ಮಹಾನಿರಂಜನ ಜಗದ್ಗುರು ಅಲ್ಲಮಪ್ರಭು ಚನ್ನಬಸವರಾಜೇಂದ್ರರ ಬಳಿವಿಡಿದು ನಡೆದು ಬಂದ ನಂತರದಲ್ಲಿ ಚತುರ್ಯುಗದಲ್ಲಿ ವೀರಶೈವ ಮತಕ್ಕೆ ಷಟ್ಸ್ಥಲ ಬ್ರಹ್ಮಿಯಾದ ಮೂಲ ಗುರುವು ಮೂಲ ಪ್ರಣವಸ್ವರೂಪಿಗಳಾದ ನಿರಂಜನ ಗುರುಗಳಾದಂತಹ ಶ್ರೀ ಷಣ್ಮುಖ ಸ್ವಾಮಿಗಳವರು ಹಿಂದೆ ಕೈಲಾಸದಲ್ಲಿ ಪರಶಿವನಿಗೆ ಲೋಕ ಭಾರಕರಾದ ಶೂರಪದ್ಮ ಸಿಂಹ ವಕ್ತ್ರ ತಾರಕಾದಿ ದೈತ್ಯರ ವಧ ನಿಮಿತ್ಯಾರ್ಥವಾಗಿ ಪುತ್ರನಾಗಿ ಉದ್ಭವರಾಗಲು ಇವರನ್ನು ವಿದ್ಯಾಭ್ಯಾಸಕ್ಕೆ ಬ್ರಹ್ಮನಾರಾಯಣರ ಬಳಿಯ ಪರಶಿವನು ಕಳುಹಲು ಅವರಿಂದಾಗದೆ ಇರುವದರಿಂದ ಪರಶಿವನೆ ಶಿಷ್ಯನಾಗಿ ಷಣ್ಮುಖನೆ ಗುರುಗಳಾಗಿ ಶಿವಾನುಭವ ಮುಂತಾದ ಮೂಲ ಪ್ರಣವದರ್ಥಂಗಳ ನಿರೂಪಿಸುವದರ ಕಾರಣವಾಗಿ ಪರಶಿವನು ಶಿವಮತ ಉದ್ಧಾರಾರ್ಥವಾಗಿ ಮೃತ್ಯು ಲೋಕದಲ್ಲಿ ಕಲ್ಯಾಣ ನಗರದಲ್ಲಿ ಅವತರಿಸಿದ ಬಸವರಾಜೇಂದ್ರರ ಸಹೋದರಿಯರಾದ ಅಕ್ಕನಾಗಲೆಯರ ಗರ್ಭದಲ್ಲಿ ಉದ್ಭವವಾಗುವದೆಂದು ಷಣ್ಮು

ಖನ ಕಳಿಸಿ ತಾವು ಸೊನ್ನಲಿಗೆ ಪುರದಲ್ಲಿ ಸಂಜನಿಸಿದ ಶಿವಭಕ್ತ ಮುದ್ದನಗೌಡ ಕಂಜಮುಖಿ ಸುಗ್ಗಾಯಳೆಂಬವರಿಗೆ ಅಯೋನಿಜರಾಗಿ ಜನಿಸಿ ಪ್ರಭುಸ್ವಾಮಿಗಳಿಂ ಜ್ಞಾನೋಪದೇಶವಂ ಪಡೆದು ಕಲ್ಯಾಣಪುರಕ್ಕೈದಿ ನಾವು ನಿಮ್ಮಿಂದ ಸಿದ್ಧರಾಮೇಶ್ವರನೆಂಬಭಿದಾನದಿಂದ ಗುರುದೀಕ್ಷೆಯಂ ಪತ್ತುಕೊಂಡು ಶಿವಾನುಭವವಾದ ಪ್ರಣವದ ಪಟ್ಕೃತಿಗಳು ಮುಂತಾದ ನಿರ್ಣಯಗಳನ್ನು ಕೇಳಿ ಗುರುಶಿಷ್ಯರಾದ ಕಾರಣ ಇವರಿಗೆ ಮೂಲಗುರು ನಿರಂಜನ ಜಂಗಮ ಸ್ವರೂಪರಾದ ಷಣ್ಮುಖ ಸ್ವಾಮಿಗಳವರೆ ಕಲ್ಯಾಣ ಪುರದಿ ಅವತರಿಸಿ ಚನ್ನಬಸವರಾಜೇಂದ್ರರೆಂಬ ನಾಮವಂ ತಾಳ್ದು ವೀರಶೈವ ಮತ ಉದ್ಧಾರಕರಾದ ಕಾರಣ ಮೂಲಗುರುವು ಚನ್ನಬಸವೇಶ್ವರ ಸ್ವಾಮಿಗಳವರು.

ಈ ಕುಮಾರ ಸ್ವಾಮಿಗಳವರು ಕಲ್ಯಾಣದಲ್ಲಿ ಶ್ರೀ ಬಸವರಾಜೇಂದ್ರರ ಸಹೋದರಿಯಾದ ಅಕ್ಕನಾಗಲೆಯರ ಚಿದ್ಗರ್ಭದಲ್ಲಿ ಕಕ್ಕಯ್ಯಗಳ ಶೇಷ ರೂಪಿನಿಂದ ಚನ್ನಬಸವರಾಜೇಂದ್ರರು ನಂದನ ನಾಮ ಸಂವತ್ಸರದ ವೈಶಾಖ ಶುದ್ಧ ಪಾಡ್ಯ ಮಂಗಳವಾರ ಕೃತ್ತಿಕ ನಕ್ಷತ್ರದಲ್ಲಿ ಆಯೋನಿಜರಾಗಿ ವಿಭೂತಿ ರುದ್ರಾಕ್ಷಿ ಇಷ್ಟಲಿಂಗ ಧಾರಕರಾಗಿ ಶಿವ ಮಂತ್ರ ಸ್ಮರಣೆಯೊಡನೆ ಉದ್ಭವಿಸಿ ಬಸವರಾಜೇಂದ್ರರಿಂ ಶಿವದೀಕ್ಷೆಯಂ ಪಡೆದು ಅಲ್ಲಮ ಪ್ರಭು ಸ್ವಾಮಿಗಳವರಿಂ ಸಮಸ್ತಜ್ಞಾನೋಪದೇಶಮಂ ಪತ್ತುಕೊಂಡು ಬಸವೇಶ್ವರ ಮುಂತಾದ ಲಕ್ಷದ ಮೇಲೆ ತೊಂಭತ್ತಾರು ಸಾವಿರದ ಗಣ ಸಮೂಹಕ್ಕೆ ಗುರುಗಳಾಗಿ ಸಾಂಬನೆ ಶಿಷ್ಯನಾಗಿ ಬಂದ ಸಿದ್ಧರಾಮೇಶ್ವರನಿಗೆ ಗುರುದೀಕ್ಷೆಯಂಮಾಡಿ ಷಟ್‌ಸ್ಥಲ ಜ್ಞಾನ ಚಕ್ರವರ್ತಿಗಳೆಂಬಭಿಧಾನದಿಂದ ಅನೇಕ ಮಹಿಮೆಗಳ ತೋರುತ್ತ ಪರಮತವ ಜಯಿಸುತ್ತ ವೀರಶೈವ ಮತವನುದ್ಧಾರವ ಮಾಡುತ್ತ ಇದ್ದರು.

## ಅಲ್ಲಮಪ್ರಭು

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು ಶೂನ್ಯ ಸಿಂಹಾಸನಾಧೀಶ್ವರರಾದಂತಹ ಕಲ್ಯಾಣ ಪಟ್ಟಣದಲ್ಲಿ ಚನ್ನಬಸವರಾಜೇಂದ್ರರಾದಿ ಆಗಿ ನಡೆದು ಬಂದ ಶಿವಾನುಭವ ಚರಂತಿಗೆ ಪಟ್ಟಗಳ ವಿವರವು—ಕಲ್ಯಾಣ ಪಟ್ಟಣದಲ್ಲಿ ಸಾಂಬನಪ್ಪಣೆ ಮೇರೆಗೆ ಜೈನ ಮತೋದ್ಧಾರಕನಾದ ಬಿಜ್ಜಳನೆಂಬರಸು ಮೂರುಲಕ್ಷ ಸೈನ್ಯದಿಂದ



ಆ ಪುರಕ್ಕೆ ಅಧಿಪತಿ ಆಗಿ ರಾಜ್ಯವಾಳುತ್ತ ಇದ್ದನು. ಈ ಅರಸಿನ ಬಳಿಯ ಶ್ರೀ ಬಸವರಾಜೇಂದ್ರರು ಪ್ರಧಾನ ಪಟ್ಟಕ್ಕೆ ಅಧಿಪತಿಗಳಾಗಿ ದಿನಒಂದಕ್ಕೆ ಮೂನ್ನೂರರುವತ್ತು ಪವಾಡವನ್ನುಂಟುಮಾಡುತ್ತ ಬೇಡಿದಿಷ್ಟಾರ್ಥವಂ ಕೊಡುತ್ತ ಇರುವಲ್ಲಿ ಬಸವೇಶ್ವರನ ಭಕ್ತಿಯ ನೋಡಬೇಕೆಂದು ಸಾಕ್ಷಾತ್ ಅಲ್ಲಮಪ್ರಭು ಸ್ವಾಮಿಗಳು ಕಲ್ಯಾಣಕ್ಕೆ ದಯಮಾಡಿಸುವಲ್ಲಿ ಬಸವರಾಜೇಂದ್ರನು ಶೂನ್ಯಸಿಂಹಾಸನವ ರಚಿಸಿ ಅದರ ಮೇಲೆ ಪ್ರಭುಸ್ವಾಮಿಗಳ ಮೂರ್ತಗೊಳಿಸಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದ ಪೂಜೆಯಂಗೊಂಡು ಬಸವ ಚನ್ನಬಸವಣ್ಣ ಸಿದ್ಧರಾಮೇಶ್ವರ ದೇವರು ಮುಂತಾದ ಸಕಲ ಪ್ರಮಥರ ಭಕ್ತಿಗಳ ಕೈಕೊಂಡು ತಾವು ಸಕಲ ದೇಶದಲ್ಲಿ ಇರುವ ಭಕ್ತಮಹೇಶ್ವರರ ಭಕ್ತಿಗೋಸ್ಕರವಾಗಿ ಪ್ರಭುಸ್ವಾಮಿಗಳು ದೇಶಂಗಳ ಮೇಲೆ ದಯಮಾಡಿಸುವದನ್ನು ಬಸವಾದಿ ಪ್ರಮಥಗಣಂಗಳು ಸಕಲರು ತಿಳಿದುಕೊಂಡು ಪ್ರಭುಸ್ವಾಮಿಗಳು ದಯಮಾಡಿಸುವಾಗ್ಗೆ ಅವರ ದರ್ಶನಾಶೀರ್ವಾದವ ತೆಗೆದುಕೊಂಡು ಮುಂದೆ ನಡೆವ ಕಾರಣಾರ್ಥಗಳನ್ನು ಕೇಳಿಕೊಂಡಲ್ಲಿ ನೀವು ಸರ್ವರೂ ಷಟ್‌ಸ್ಥಲ ಬ್ರಹ್ಮಿಯಾದ ಶ್ರೀ ಚನ್ನಬಸವರಾಜೇಂದ್ರರು ನಿಮ್ಮ ಬಳಿಗೆ ಷಟ್‌ಸ್ಥಲ ಜ್ಞಾನೋಪದೇಶವಾದ ಶಿವಾನುಭವ ಶಾಸ್ತ್ರದ ಸಾರವನ್ನು ತಿಳಕೊಂಡು ನಿತ್ಯಮುಕ್ತರಾಗಿ ಈ ಕಲ್ಯಾಣ ಪಟ್ಟಣದಲ್ಲಿ ನೀವು ಸರ್ವರೂ ಇದ್ದಲ್ಲಿ ನಾವು ಈ ಹೊತ್ತಿಗೆ ೧೨ ವರುಷಕ್ಕೆ ಇಲ್ಲಿಗೆ ಬಂದು ನಿಮ್ಮಗಳಿಗೆ ಲಿಂಗಾಂಗೈಕ್ಯಭಾವವಂ ತಿಳಿಸಿ ಶಿವಸಾಯುಜ್ಯವೆಂಬ ನಿರ್ವಾಣ ಪದವನೀವೆವು ಎಂದು ನಿರೂಪಿಸಿ ಆಮೇಲೆ ಚೋಳದೇಶ ಕಂಚಿ ಕಾಳಹಸ್ತಿ ಚಿದಂಬರ ತಿರುವಣ್ಣಾಮಲೆ ಅರುಣಾಚಲ ಮುಂತಾದ ಅಷ್ಟಾಷಷ್ಟಿತೀರ್ಥಂಗಳು ಸಕಲ ದೇಶದಲ್ಲಿ ಇರುವ ಗೊಗ್ಗಯ್ಯ ಮುಂತಾದ ಸಕಲ ಭಕ್ತಗಣಂಗಳಿಗೆ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗಂಗಳಂ ಕೊಡುತ್ತ ಆ ಮೇಲೆ ಕಲ್ಯಾಣಕ್ಕೆ ದಯಮಾಡಿಸಿದಲ್ಲಿ ಬಸವಣ್ಣನವರು ಪ್ರಭುಸ್ವಾಮಿಗಳವರನ್ನು ಪೂಜಿಸುವದ ಕಂಡು ತಮಗೆ ಪೂಜಿಸಲಿಲ್ಲನೆಂದು ಕಲ್ಯಾಣದಲ್ಲಿ ಇರುವ ಕೆಲವು ಗಣಂಗಳು ತಮ್ಮ ಮಠಗಳಿಗ ದಯಮಾಡಿಸಲು ಇದ ಕಂಡು ಬಸವಣ್ಣನವರ ಮಠಕ್ಕೆ ಭೋಜನಕ್ಕೆ ಬಂದ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳು ಮುಂತಾದ ಸಮಸ್ತರು ತಮ್ಮ ವಾಸಸ್ಥಳಕ್ಕೆ ಹೋಗಲು ಇತ್ತ ನಿರಂಜನ ಗುರುಗಳಾದ ಪ್ರಭುಸ್ವಾಮಿಗಳವರಿಗೆ ಬಸವರಾಜೇಂದ್ರರು ಚನ್ನಬಸವ ಮಡಿವಾಳ

ಮಾಚಿದೇವರು ಕಿನ್ನರಿ ಬ್ರಹ್ಮಯ್ಯಗಳು ಮುಂತಾದ ಸಕಲ ಪ್ರಮಥರು
ಸಹಿತವಾಗಿ ಗಣಸಮೂಹವು ಸಲಿಸದೆ ಏನೋ ಬೇಸರದಿಂ ದಯಮಾಡಿ
ಸಿದರು, ಈಗ ಗಣ ತೃಪ್ತಿ ಹೇಗೆ ಆಗಬೇಕೆಂಬದಾಗಿ ಬಿನ್ನಪಂ ಗೈದು
ಸಾಷ್ಟಾಂಗವ ಹಾಕಲು ಗಣಂಗಳಲ್ಲಿ ಇಂತಹ ಮನಸ್ಸು ಹುಟ್ಟಿದ್ದ
ರಿಂದ ಈ ಕಲ್ಯಾಣದ ಕಡೆಭಾಗವೆಂದು ಪ್ರಭುಸ್ವಾಮಿಗಳು ತಿಳಿದುಕೊಂಡು
ಗಣಸಮೂಹಕ್ಕೆ ಮಾಡಿಸಿದ ಅಡಗಿ ಪಾಕವನ್ನು ತಾವು ಒಬ್ಬರೆ ಸಲಿ
ಸುವೆವೆಂದು ಅಪ್ಪಣೆಕೊಟ್ಟು ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಗಣಂಗಳು ಸಕಲ ಪ್ರಮಥಗಣಕ್ಕೆ ಮಾಡಿದ ಅಡಿಗೆ ಪಾಕವು ಸಾಲದೆ
ಆ ಪಟ್ಟಣದಲ್ಲಿ ಇದ್ದ ಧಾನ್ಯಗಳ ಸಹವಾಗಿ ಸಲಿಸಿದ್ದು ನೋಡಿ ತಮ್ಮಿಂದ
ಪದಾರ್ಥಗಳ ಭೋಜನಕ್ಕೆ ಒದಗಿಸುವದಾಗದೆ ಇರುವದರಿಂದ ಬಸವಣ್ಣ
ಮುಂತಾದ ಪ್ರಮಥರು ಶರಣಾಗತರಾಗಲು ಪ್ರಭುಸ್ವಾಮಿಗಳು ತೃಪ್ತ
ರಾಗಲು ಕಲ್ಯಾಣದಲ್ಲಿರುವ ಭಕ್ತಗಣಂಗಳು ಮುಂತಾದ ಬಸವೇಶ್ವರಾದಿ
ಸಕಲ ಪ್ರಮಥರು ಪ್ರಭುದೇವರ ಮಹಿಮೆಗಳ ಕೊಂಡಾಡಿ ಅವರಿಂದ
ಲಿಂಗಾಂಗೈಕ್ಯಭಾವವಂ ತಿಳಿದುಕೊಂಡು ನಿತ್ಯ ಮುಕ್ತರಾದರು. ಆ ಮೇಲೆ
ಪ್ರಭುಸ್ವಾಮಿಗಳು ಅನೇಕ ಮಹಿಮೆಗಳಂ ತೋರಿ ಮುಂದೆ ಆಗುವ
ಸೂಚನಾರ್ಥಗಳ ಬಸವಾದಿ ಪ್ರಮಥರ ಕರಿಸಿಕೊಂಡು ಅವರಿಗೆ ಅಪ್ಪ
ಣೆಯಂ ಕೊಟ್ಟು ಅವರ ಮುಂತಿಟ್ಟುಕೊಂಡು ತಮ್ಮ ವಾಸದಲ್ಲಿ ಇದ್ದ
ಸುವರ್ಣದ ಶೂನ್ಯಸಿಂಹಾಸನ ಪ್ರಣವ ಶಿಖಾ ಶೈಲ ಶಿವಾನುಭವ ಪುಸ್ತ
ಕವಂ. ಶ್ರೀ ಚನ್ನಬಸವರಾಜೇಂದ್ರರಿಗೆ ಕೊಟ್ಟು ಇವರು ನಮ್ಮ ಪ್ರಭು
ವಂಶಕ್ಕೆ ಗುರುಗಳೆಂದು ಅಪ್ಪಣೆಯಂ ಕೊಟ್ಟು ಸಕಲರಿಗು ಆಶೀರ್ವಾ
ದವಂ ಮಾಡಿ ಆ ಮೇಲೆ ಕಲ್ಯಾಣದಿಂದ ಪ್ರಭುಸ್ವಾಮಿಗಳು ಶ್ರೀಶೈ
ಲಕ್ಕೆ ದಯಮಾಡಿಸಿ ಅಲ್ಲಿರುವ ಮಲ್ಲಿಕಾರ್ಜುನನೆಂಬ ಜ್ಯೋತಿರ್ಮಯ
ಲಿಂಗ ಭ್ರಮರಾಂಬೆಯರಂ ಕಂಡು ಅದೇ ಕ್ಷೇತ್ರದಲ್ಲಿರುವ ಗೋರಕ್ಷ
ಸಿದ್ಧ ಅಕ್ಕಮಹಾದೇವಿಯರು ಮುಂತಾದ ಸಕಲ ಮುನಿಜನಂಗಳಿಗೆ
ಜ್ಞಾನೋಪದೇಶವಂ ಮಾಡಿ ನಿರ್ವಾಣ ಪದಂಗಳಂ ಕೊಟ್ಟು ಶ್ರೀಶೈ
ಲದ ಕದಳಿಯ ಬನದೊಳಗಿರುವ ಮಠದಲ್ಲಿ ರಕ್ತಾಕ್ಷಿನಾಮ ಸಂವತ್ಸ
ರದ ಪುಷ್ಯ ಶುದ್ಧ ಪಾಡ್ಯದ ಸೋಮವಾರ ಉದಯ ೨೫ ಗಳಿಗೆಗೆ
ತಮ್ಮ ಗುಹೇಶ್ವರ ಲಿಂಗದಲ್ಲಿ ನಿರ್ವಯಲಾದರು. ಇವರು ಬಯ



ಲಾದ ಮಠವು ಶ್ರೀಶೈಲ ಕದಳೀ ಬನದಲ್ಲಿ ಇರುವದು. ಪಾತಾಳಗಂಗೆ
ಯತಟಯಲ್ಲಿ ಇರುವ ಗುಡ್ಡದ ಮೇಲೆ ನಿಂತು ನೋಡಿದರೆ ಈಗ
ಕಾಣುತ್ತದೆ. ಅಲ್ಲಿ ಹೋಗುವೆವೆಂದು ಹೋದರೆ ದಾರಿ ಸಿಗುವದಿಲ್ಲ.

---

## ಚನ್ನಬಸವ.

ಶ್ರೀ ಚನ್ನಬಸವದೇವರು ಎರಡನೇ ಶಿವಾನುಭವ ಪಟ್ಟಕ್ಕೆ ಕರ್ತು
ಗಳಾಗಿ ಶೂನ್ಯಸಿಂಹಾಸನಕ್ಕೆ ಅಧಿಪತಿಗಳಾದ ಜಗದ್ಗುರುಗಳಾಗಿ ತಮ್ಮ
ಪ್ರಭುವಂಶಕ್ಕೆ ಸೇರ್ಪಟ್ಟ ೧೨ ಸಾವಿರ ಷಟ್‍ಸ್ಥಲ ಬ್ರಹ್ಮಿಗಳಾದ ಸೊನ್ನ
ಲಾಪುರದ ಸಿದ್ಧರಾಮೇಶ್ವರ ಚನ್ನಂಜಯ್ಯ ಮುಂತಾದ ಎಲ್ಲ ಪ್ರಮಥ
ರಿಗೆ ಅನುಭವ ಮಂಟಪದಲ್ಲಿ ಶಿವಾನುಭವ ಶಾಸ್ತ್ರದೊಡನೆ ಶಿವಾನಂದ
ಸುಖದೊಳು ಇರುವಾಗ್ಗೆ ಶ್ರೀ ಬಸವರಾಜೇಂದ್ರರು ತಾವು ಪೂರ್ವದಲ್ಲಿ
ನಂದೀಶ್ವರನು ಅನುಮಿಷಯ್ಯಗಳಿಗೆ ನಗರದ ಸೀಮೆ ಉಡಗಣೆಯೆಂಬ
ಉಡುತಡಿಯ ಸಮೀಪದಲ್ಲಿ ಇರುವ ಬಳ್ಳಿಗಾವಿ ಎಂಬ ಪುರದ ಗಡಿ
ಭೂಮಿಯ ವನಾಂತರದಲ್ಲಿ ತಮ್ಮ ಇಷ್ಟಲಿಂಗವಂ ಕೊಟ್ಟು ಕೈಲಾಸಕ್ಕೆ
ಹೋಗಿ ದ್ವಾರದೊಳಗೆ ಚಿತ್ತೈಸುವ ಸಮಯದಲ್ಲಿ ಸಿಂಹಕೇಶನೆಂಬ ದ್ವಾರ
ಪಾಲಕನು ಬಂದು ನಂದೀಶ್ವರಗೆ ಭವಿ ಎಂದು ನುಡಿದು ಒಳಗೆ ಇರುವ
ವರ್ತಮಾನವಂ ಸಾಂಬನು ತಿಳಿದು ದ್ವಾರದ ಬಳಿಗೆ ಬಂದು ಸಿಂಹ
ಕೇಶನಿಗೆ ನೀನು ನಂದೀಶ್ವರ ದ್ವಿತೀಯ ಶಂಭುವಾದ ಸರ್ವಾಂಗಲಿಂಗಿಗೆ
ಭವಿ ಎಂದು ನುಡಿದ ದೋಷದಿಂದ ಮೃತ್ಯುಲೋಕದಲ್ಲಿರುವ ಕಲ್ಯಾಣ
ಪುರವರಸನಾದ ಜೈನ ಕ್ಷತ್ರಿಯನಾದ ಚಾಳುಕ್ಯನ ವಂಶದಲ್ಲಿ ಬಿಜ್ಜಳ
ನೆಂಬ ನೃಪನಾಗುವದೆಂದು ಶಾಪವಂ ಕೊಡಲು ದ್ವಾರಪಾಲಕನು ಗದ
ಗದ ನಡುಗಿ ಬಹು ಚಿಂತಾಕ್ರಾಂತನಾಗಿ ಸಾಂಬನಿಗೆ ನಿಶ್ಶಾಪವಂ ಕೇಳಿ
ಕೊಂಡದ್ದಕ್ಕೆ ಕಲ್ಯಾಣದಲ್ಲಿ ನೀನು ಶಿವಶರಣರಾದ ಭಕ್ತದ್ರೋಹಂ
ಮಾಡಿಸಿದ್ದರಿಂದ ಮೃತ್ಯು ಹೊಂದಿ ನಮ್ಮ ಕೈಲಾಸಕ್ಕೆ ಬಾಹುದೆಂದು
ನಿಶ್ಶಾಪವಾದುದನ್ನು ಬಸವರಾಜೇಂದ್ರರು ತಮ್ಮ ದಿವ್ಯ ಜ್ಞಾನದಿಂದರಿದು
ಇವುಗಳನ್ನು ಸರ್ವ ಪ್ರಮಥರಿಗೆ ತಿಳಿಸಿ ಈ ಬಿಜ್ಜಳನ ಕಾಲ ಸಮೀಪಿ
ಸಿತ್ತೆಂದು ಈ ನಗರದಲ್ಲಿ ಮಹತ್ವವಾದ ಉತ್ಪಾತವು ಹೆಚ್ಚಾಗುವದೆಂದು
ಕಣ್ಣಿಲಿ ನೋಡಕೂಡದೆಂದು ಶ್ರೀ ಚನ್ನಬಸವಣ್ಣನವರಿಗೆ ತಮ್ಮ ಪ್ರಧಾನ
ಪಟ್ಟವಂ ನೇಮಿಸಿ ಕೊಟ್ಟು ಹಡಪದಪ್ಪಣ್ಣನವರ ಸಂಗಡ ಕೃಷ್ಣಾನದಿ

ಮಲಾಪಹಾರಿ ಎಂಬ ನದಿಗಳ ಸಂಗಮವಾದ ಕಪ್ಪಡಿ ಎಂಬುವ ಕ್ಷೇತ್ರಕ್ಕೆ
ಚಿತ್ರೈಸಲು ಅಲ್ಲಿರುವ ಸಂಗಮೇಶ್ವರ ಲಿಂಗವೆ ಜಂಗಮಾಕೃತಿಯಾಗಿ
ಬಂದು ಬಸವೇಶ್ವರ ದೇವರಿಗೆ ದರ್ಶನಾಶೀರ್ವಾದವ ಕೊಟ್ಟು ಕೈಲಾಸ
ದ್ವಾರವೆಂಬ ಸಂಗಮೇಶ್ವರ ಲಿಂಗದಲ್ಲಿ ನಿರ್ವಯಲಾದರು. ಇವರು
ಅನುಮಿಷಯ್ಯಗಳಿಗೆ ಲಿಂಗವಂ ಕೊಟ್ಟ ಸ್ಥಳ ನಗರದ ಸೀಮೆ ಸಿರಿ
ಯಾಳಕೊಪ್ಪದ ಸಮೀಪವಾದ ಬಳ್ಳಿಗಾವಿಯಲ್ಲಿ ಲಿಂಗವ ಕೊಟ್ಟ ಸ್ಥಳಕ್ಕೆ
ಅನುಮಿಷಯ್ಯನ ಕೊಪ್ಪಲು ಎಂತಲು ಬಸವೇಶ್ವರ ದೇವಸ್ಥಾನವು ಸಹಿ
ತವಾಗಿ ಈಗ ಪ್ರಸಿದ್ಧನಾಗಿ ಇದೆ. ಈಗ ಅಲ್ಲಿ ಅನೇಕ ನಿತ್ಯವಹ
ಭಕ್ತಗಣಂಗಳು ಗಣತೃಪ್ತಿ ಮಾಡುತ್ತಾರೆ. ಇದರಂತೆ ಬಸವೇಶ್ವರ
ದೇವರು ಐಕ್ಯವಾದ ಕಪ್ಪಡಿ ಸಂಗಮ ಕ್ಷೇತ್ರದಲ್ಲಿ ಇವೊತ್ತಿಗು ನಿತ್ಯ
ವಹ ಭಕ್ತಮಹೇಶ್ವರರ ಗಣತೃಪ್ತಿ ಆಗುತ್ತಿರುತ್ತದೆ. ಈ ಬಸವೇಶ್ವರ
ದೇವರು ಸಂಗಮ ನಾಥನಲ್ಲಿ ಐಕ್ಯವಾದದ್ದು ಶಾಲಿವಾಹನ ಶಕ ಏಳ
ನೂರ ಏಳನೆಯ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ೧೧ ಮಂಗ
ಳವಾರ ಉದಯ ೨೫ ಗಳಿಗೆಯೊಳು ಐಕ್ಯವಾದರು. ಈ ಬಸವಣ್ಣನ
ವರು ೩೬ ವರುಷಕ್ಕೆ ಐಕ್ಯವಾದರು. ಇವರ ತರುವಾಯದಲ್ಲಿ
ಬಿಜ್ಜಳರಾಯನ ಪ್ರಧಾನ ಪಟ್ಟಕ್ಕೆ ಶ್ರೀ ಚನ್ನಬಸವಣ್ಣನವರೇ ಅಧಿ
ಪತಿಗಳಾಗಿ ಕಲ್ಯಾಣ ಪಟ್ಟಣದಲ್ಲಿ ಇರುವ ಗಣ ಸಮೂಹಕ್ಕೆ ಜಗದ್ಗು
ರುಗಳಾದ ಅಲ್ಲಮಪ್ರಭು ಸ್ವಾಮಿಗಳವರ ಶೂನ್ಯಸಿಂಹಾಸನಕ್ಕೆ ಕಾರಣ
ಕರ್ತರಾಗಿ ಗುರುಲಿಂಗ ಜಂಗಮದ ದಾಸೋಹಕ್ಕೆ ದಿನಚರಿ ತೃಪ್ತಿಪಡಿಸಿ
ಬೇಡಿದಿಷ್ಟಾರ್ಥಂಗಳ ಕೊಡುವರಾಗಿ ೭೨ ಬಿರುದುಗಳಿಂದ ಉತ್ಸವಂ
ಗೊಳ್ಳುತ್ತ ಪ್ರಧಾನತ್ವದಿಂದ ರಾಜ್ಯಕಾರ್ಯವಂ ನಡೆಸುತ್ತ ಇರಲಾಗಿ
ಬಿಜ್ಜಳರಾಯನು ತನ್ನ ಕಾಲಕ್ಕೆ ಸರಿಯಾಗಿ ದುರ್ಬುದ್ಧಿ ಹುಟ್ಟಿ ಹರ
ಳಯ್ಯ ಮಧುವರಸರೆಂಬ ಶಿವಶರಣರನ್ನು ಎಳಹೂಟೆಯಂ ಕಟ್ಟಿಸಿ ಎಳಿ
ಸತಕ್ಕ ಪ್ರಯತ್ನವನ್ನು ಪಟ್ಟಿದ್ದರಿಂದ ಇಂತಹ ಉತ್ಪಾತವನ್ನು ಕಣ್ಣಿಂದ
ನೋಡಬಾರದೆಂತ ಚನ್ನಬಸವರಾಜೇಂದ್ರರು ಈ ಕಾಲಸೂಚನೆಯನ್ನು
ತಮ್ಮ ದಿವ್ಯ ಜ್ಞಾನದಿಂದ ತಿಳಿದು ಪ್ರಭುದೇವರ ಅನುಭವ ಮಂಟಪಕ್ಕೆ
ಸಕಲ ಪ್ರಮಥ ಗಣಂಗಳನ್ನು ಕರಿಸಿ ಸೂಚಿಸಿ ಮುಂದಾಗುವ ಕಾಲಜ್ಞಾನ
ಸೂಚನೆಯಂ ಸಿದ್ಧರಾಮೇಶ್ವರ ರುದ್ರಮುನಿ ಸ್ವಾಮಿಗಳು ಮುಂತಾದ ಗಣ
ಸಮೂಹಕ್ಕೆ ಅಪ್ಪಣೆಯಂ ಕೊಟ್ಟು ಸಕಲ ಪ್ರಮಥರ ಮುಂತಿಟ್ಟುಕೊಂಡು



೧೨ಸಾವಿರ ದಂಡಿಗೆ ಅಧಿಪತಿಯಾದ ಸೈನ್ಯಾಧೀಶನಾದ ಡಿಳ್ಳಿಯಿಂದ ಬಂದ
ಮಲ್ಲುಖಾನನೆಂಬ ವಜೀರನನ್ನು ಕರಿಸಿ ತಮ್ಮ ಗುರುಗಳಾದ ಅಲ್ಲಮ
ಪ್ರಭು ಸ್ವಾಮಿಗಳು ತಮಗೆ ಸುವರ್ಣ ಪೀಠವಾದ ಶೂನ್ಯಸಿಂಹಾಸನ
ಪ್ರಣವ ಶಿಖಾ ಕೈಲ ಈ ಮೂರೂ ವಸ್ತುಗಳ ಕೊಟ್ಟು ಶಕೆ ಅಂದರೆ
ಶಾಲಿವಾಹನಶಕ ಏಳುನೂರಾಏಳನೆಯ ರಕ್ತಾಕ್ಷಿ ನಾಮ ಸಂವತ್ಸರದ
ಕಾರ್ತೀಕ ಶುದ್ಧ ಪಾಡ್ಯದಲ್ಲಿ ಆ ವಸ್ತುಗಳ ಕೊಟ್ಟು ಇವುಗಳನ್ನು
ನೀನು ಡಿಳ್ಳಿಗೆ ತೆಗೆದುಕೊಂಡು ಹೋಗುವಲ್ಲಿ ಕೆಲವು ದಿವಸದಲ್ಲಿ
ನಿನಗೆ ಡಿಳ್ಳಿ ದವಲತ್ತು ಆಗಿ ಸಂಸ್ಥಾನವನ್ನು ನೀನೇ ಸುಖದಿಂದ
ಆಳುವಿ, ಮುಂದೆ ನಿನ್ನ ಸಂಸ್ಥಾನವಾದ ಡಿಳ್ಳಿಗೆ ಮುಂದೆ ನಮ್ಮ ವಂಶ
ಜರಾದ ಈರ್ವರು ಗಣಂಗಳು ಬಂದು ಮಹಿಮಾಪುರುಷರಾಗಿ ನಿಮ್ಮ
ಪಟ್ಟದ ಸತ್ತ ಆನೆಗೆ ಜೀವವಂ ಪಡೆದು ಎಬ್ಬಿಸುತ್ತಾರೆ, ಅವರಿಗೆ ಈ
ಮೂರು ವಸ್ತುಗಳ ಕೊಡುವುದೆಂದು ಅಪ್ಪಣೆಕೊಟ್ಟು ಮಲ್ಲೂಖಾನನಿಗೆ
ನಾವು ನಮ್ಮ ಗಣ ಸಮೂಹ ಸಹಿತವಾಗಿ ಉಳವಿಗೆ ದಯಮಾಡಿಸು
ವೆವು. ನಮ್ಮ ಬೆಂಬಲವಾಗಿ ಉಳವಿ ಸಮೀಪವಾದ ಕರೆಹೊಳೆಯ
ಗಟ್ಟದ ವರೆಗು ನಿನ್ನ ದಂಡು ಸಮೇತವಾಗಿ ಬಾಹುದೆಂದು ಅಪ್ಪಣೆಯಂ
ಕೊಟ್ಟು ಆ ವಜೀರನಾದ ಮಲ್ಲೂಖಾನನಿಗೆ ಉಡುಗೊರೆಯಂ ಕೊಟ್ಟು
ಆಶೀರ್ವಾದವಂ ಮಾಡಿ ಕಳುಹಿಸಿಕೊಟ್ಟು ಆ ಮೇಲೆ ತಮ್ಮ
ಶಿಷ್ಯರಾದ ಸೊನ್ನಲಪುರದ ಸಿದ್ಧರಾಮೇಶ್ವರ ದೇವರಿಗೆ ನೀವು ನಮ್ಮ
ಸಹತ್ರಿಕರಾದ ಷಟ್‌ಸ್ಥಲ ಬ್ರಹ್ಮಿಗಳಾದ ಚನ್ನಂಜೈಯ್ಯ ಕೋಲು
ಶಾಂತಯ್ಯ ಕುದುರೆ ಶಾಂತಯ್ಯಾ ಪಂಚದ ಶಾಂತಯ್ಯಾ ಮುಂತಾದ
ಮುರುಸಾವಿರ ವಿರಕ್ತರಿಗೆ ಗುರುಗಳಾಗಿರುವದೆಂದು ಆಜ್ಞಾಪಿಸಿ ತಮ್ಮ
ಶಿವಾನುಭವ ಚರಂತಿಗೆ ಪುಸ್ತಕವಂ ಕೊಟ್ಟು ಆಶೀರ್ವಾದವಂ ಮಾಡಿ ಆ
ಮೇಲೆ ಗಣ ಪರ್ವದ ಉದ್ದಿಶ್ಯ ಹೋಗುತ್ತೇವೆ ಎಂದು ಬಿಜ್ಜಳರಾ
ಯಗೆ ತಿಳಿಸಿ ಆ ನಂತರ ಗಣಪರ್ವವಂ ಮಾಡಿ ಮಲ್ಲೂಖಾನನ ದಂಡು
ಸಮೇತವಾಗಿ ಎಲ್ಲ ಗಣತಿಂಥಿಣಿಯೊಡನೆ ಉಳವಿಗೆ ದಯಮಾಡಿಸುತ್ತಿ
ರುವಲ್ಲಿ ಈ ಸಂಗತಿಯು ಬಿಜ್ಜಳರಾಯಗೆ ತಿಳಿದು ತನ್ನ ದಂಡು
ಮಾರ್ಬಲವಂ ತೆಗೆದುಕೊಂಡು ಉಗ್ರಕೋಪದಿಂದ ಬೆನ್ನ ಹತ್ತಿ ಬರುವ
ಕಾಲದಲ್ಲಿ ಹಿರಿಯ ಹೆಗ್ಗಡತಿಯ ಹೊನ್ನಮ್ಮನ ಚಾವಡಿಯ ಬಳಿಯ
ಜಗದೇವ ಮಲ್ಲಿ ಬೊಮ್ಮಯ್ಯಗಳೆಂಬ ಶರಣರು ಪಂಜುಗಾರರಾಗಿ ಶಿವ
ಶರಣ ದ್ರೋಹಿಯಾದ ಬಿಜ್ಜಳರಸನ ಇರಿಯುತ್ತೇವೆ ಎಂದು ಮೂರು

ವೇಳೆ ಸಾರಿ ರಕ್ತಾಕ್ಷಿನಾಮ ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಿಮೆ
ಮಂಗಳವಾರ ನಿಶಿರಾತ್ರಿಯಲ್ಲಿ ಬಿಜ್ಜಳರಸನನ್ನು ಸಂಹರಿಸಿ ಬುಧವಾರ
ಉದಯುವ ಮಾಡುತ್ತ ಕಲ್ಯಾಣ ಪಟ್ಟಣವನ್ನು ಬಿಟ್ಟು ದಯಮಾಡಿ
ಸುವ ಮಾರ್ಗವಲ್ಲಿ ತಡಗೋಡದಲ್ಲಿ ಅಳಿಯ ಬಿಜ್ಜಳನ ದಂಡು ತಡೆದ
ಕಾರಣ ಆ ಸ್ಥಳದಲ್ಲಿ ತಡಗೋಡೆಂಬ ಗ್ರಾಮ ನಿರ್ಮಾಣವಾಯಿತ್ತು.
ಅಲ್ಲಿಂದ ಮಾರ್ಗದಲ್ಲಿ ಗೊಡಚಿಯ ಗಿಡದ ಹತ್ತಿರದಲ್ಲಿ ಚಿಕ್ಕ ದೇವಾ
ಲಯವನ್ನು ಕಟ್ಟಿ ಆ ಗುಡಿಯಲ್ಲಿ ವೀರಗಂಟೆ ಮಡಿವಾಳೈಯ್ಯಗಳು
ತಮ್ಮ ವೀರೇಶನಂ ಸ್ಥಾಪಿಸಿ ಕಡಕೊಳ್ಳದಲ್ಲಿ ಶಿವಾರ್ಚನೆಯನ್ನು ಮಾಡಿ
ಪಾದೋದಕವಂ ಮುಗಿದು ಅಲ್ಲಿಂದ ಸತ್ತಿಗೇರಿಯಲ್ಲಿ ಸತ್ತಿಗೆಯಂ
ಹಿಡಿಸಿಕೊಂಡು ಮೊದಲೂರಲ್ಲಿ ಅಳಿಯ ಬಿಜ್ಜಳನ ದಂಡಿಗೂ ಶರಣರಿಗೂ
ಯುದ್ಧಕ್ಕೆ ಮೊದಲಾಯಿತು. ತಲೆಯೂರಲ್ಲಿ ತಲೆಯ ಕಡಿದು ಮುರ
ಗೋಡಲ್ಲಿ ಮುರಿದೋಡಿಸಿ ಶರಣರ ಬೆಂಬಲವಾದ ಮಲ್ಲೂಖಾನನ ದಂಡು
ಕೆಂಗೇರಿಯಲ್ಲಿ ರಕ್ತಗಳಾದ ಆಯುಧಗಳನ್ನು ತೊಳೆದುಕೊಂಡು ಮೂಗ
ಬಸ್ತಿಯಲ್ಲಿ ರವಡೆಜಾಗುಟೆಯಂ ಹೊಡಿಸಿ ಕಾದರವಳ್ಳಿಯಲ್ಲಿ ಕಾದಾಡಿ
ಸಾಂಬ್ರಾಣಿಯಲ್ಲಿ ಸತ್ತಿತ್ತು, ಅಲ್ಲಿಂದ ಮುಂದಕ್ಕೆ ದಯಮಾಡಿಸುವ
ಅಪ್ಪರಲ್ಲೆ ಎಲ್ಲ ಗಣಂಗಳ ಸಮೂಹವು ನಿಂತು ಅಳಿಯ ಬಿಜ್ಜಳನ
ದಂಡು ಬರುತ್ತದೋ ಇಲ್ಲವೊ ಎಂದು ಹಿಂದಕ್ಕೆ ಹಣೆಯ ಮೇಲೆ
ಕೈಹಚ್ಚಿ ನೋಡಿದ ಸ್ಥಲದಲ್ಲೆ ಮೇಲುಗೈ ಯಲ್ಲಾಪುರವೆಂಬ ಗ್ರಾಮ
ನಿರ್ಮಾಣವಾಗಿದೆ. ಈ ಗ್ರಾಮ ಮುಂತಾದ ಮೇಲೆ ಬರೆದ ಗ್ರಾಮ
ಗಳು ಶರಣರು ಯಾವ ಯಾವ ಕಾರ್ಯಗಳ ಮಾರ್ಗದಲ್ಲಿ ನಡೆಸಿ
ದ್ದಾರೋ ಆ ಹೆಸರಿನ ಗ್ರಾಮಗಳು ನಿರ್ಮಾಣವಾಗಿವೆ. ಅಲ್ಲಿಂದ
ಉಳವಿಗೆ ಹೋಗುವ ಮಾರ್ಗದಲ್ಲಿದ್ದ ಒಂದು ಬೆಟ್ಟದಲ್ಲಿ ಪ್ರಮಥರು
ಶಿವಾರ್ಚನೆಯ ಮಾಡಿದ ಸ್ಥಳದಲ್ಲಿ ಲಕ್ಷೇಪ ಲಕ್ಷ ಮಜ್ಜನ ಸಾಲೆ
ಧೂಪಾರತಿಗಳನ್ನು ಬಿಟ್ಟು ಮುಂದಕ್ಕೆ ಚಿತ್ತೈಸಿದ ಕಾರಣ ಆ ಮಜ್ಜನ
ಸಾಲೆ ಧೂಪಾರತಿಗಳು ಇದ್ದ ಸ್ಥಳಕ್ಕೆ ಹುತ್ತು ಬೆಳೆದು ರಾಶಿ ತುಂಬ
ಕಾಣುತ್ತವೆ. ಆ ಸ್ಥಳದಲ್ಲಿ ದೂಪದ ಗುಡಿ ಎಂತಲು ಹುತ್ತದ ಗುಡಿ
ಎಂತಲು ಹೀಗೆ ಆ ಸ್ಥಳಗಳಲ್ಲಿ ದೇವಾಲಯವು ಉಂಟಾಗಿದೆ. ಅಲ್ಲಿಂದ
ಮಾರ್ಗದಿ ಕರಿಯ ಹೊಳೆಯ ಮುಂತಾದ ನದಿ ಬೆಟ್ಟಗಳು ಕಾಡು
ವನಾಂತರಗಳನ್ನು ದಾಂಟಿ ದಯಮಾಡಿಸುವಲ್ಲಿ ಅಘೋರತರವಾದ ರೂಪ



ವುಳ್ಳ ಬ್ರಹ್ಮರಾಕ್ಷಸಿಯು ಬಂದು ನಿಲ್ಲಲು ಅವನ್ನು ನೋಡಿ ನೀನು
ಇಲ್ಲಿ ಕಾವಲು ಇದ್ದುಕೊಂಡು ಇರುವುದೆಂದು ಅಪ್ಪಣೆಕೊಟ್ಟು ಆ ಬೆಟ್ಟ
ವನ್ನು ಏರಬೇಕೆಂಬುವದರೊಳಗಾಗಿ ಅಲ್ಲಿಗೆ ಅಳಿಯ ಬಿಜ್ಜಳರಾಯನು
ಉಗ್ರಕೋಪದಿಂದ ತನ್ನ ದಂಡು ತಗೆದುಕೊಂಡು ಬಂದು ರಾಕ್ಷಸಿ
ಮುಂತಾದ ಮಲ್ಲೂಖಾನನ ದಂಡು ಅಲ್ಲದೆ ಶರಣರ ಕೂಡ ಸಹಿತ
ವಾಗಿ ಯುದ್ಧವನ್ನು ಮಾಡಲು ಅಪ್ಪರೊಳಗಾಗಿ ಅಳಿಯ ಬಿಜ್ಜಳನ
ದಂಡು ಆದೆ ಬೆಟ್ಟದ ಬಲಭಾಗದ ಉತ್ತರ ದಿಕ್ಕಿನ ಮಾರ್ಗವಾಗಿ ಬೆಟ್ಟ
ವನ್ನು ಹತ್ತುತ್ತ ಇರುವಲ್ಲಿ ಆ ಪ್ರಮಥ ಗಣಂಗಳೊಡನೆ ಇರ್ದ ಕಿನ್ನ
ರಿಯ ಬ್ರಹ್ಮಯ್ಯಗಳೆಂಬ ಶರಣರು ಇದಿರಿಗೆ ನಿಂತು ಆ ದಂಡಿನ
ಸಂಗಡ ಜಗಳಮಾಡಿ ದಂಡು ಮುಂದಕ್ಕೆ ಬಾರದ ಹಾಗೆ ಆ ಗುಡ್ಡದ ಸುತ್ತು
ಹೊಳೆಯ ನಿರ್ಮಿಸಿದನು. ಅದರಿಂದ ಅಳಿಯ ಬಿಜ್ಜಳನ ದಂಡು
ಮುಂದಕ್ಕೆ ಹೋಗುವದಕ್ಕೆ ಆಸ್ಪದವಾಗದ ಕಾರಣ ಶರಣರ ಕೂಡ ಅಲ್ಲೇ
ಯುದ್ಧವನ್ನು ಮಾಡಿದ್ದರಿಂದ ಆ ಬ್ರಹ್ಮರಾಕ್ಷಸಿಯು ಘೋರ ರೂಪಿ
ನಿಂದ ಸಿಡಿಲಿನೋಪಾದಿಯಲ್ಲಿ ಗರ್ಜಿಸುತ್ತ ಶರಣರ ಬೆಂಬಲವಿರ್ದ
ಈ ರಾಕ್ಷಸಿ ಸಹಿತವಾಗಿ ಕೂಗಿನ ಮಾರಿ ತಂದಿಗಳು ಮಡಿವಾಳ ಮಾಚಿ
ದೇವರು ಮುಂತಾದ ಮಲ್ಲ-ಖಾನನ ದಂಡು ಅಳಿಯ ಬಿಜ್ಜಳನ
ಆನೆ, ಕುದುರೆ, ಕಾಲಾಳು ಮುಂತಾದ ಸೇನೆಯಂ ಮಡಿಸಿ ಅಳಿಯ
ಬಿಜ್ಜಳನ ಕೈಸೆರೆಯಲ್ಲಿ ಹಿಡಿದುಕೊಂಡು ಶರಣರೊಡನೆ ಗೂಳಿಯದ
ಲ್ಲಿರ್ದ ಶ್ರೀ ಚನ್ನದಂಡನಾಯಕನಿಗೆ ಒಪ್ಪಿಸಲು ಇದ ಕಂಡು ಶ್ರೀಚನ್ನ
ಬಸವರಾಜೇಂದ್ರರ ಮಾತೆಯಾದ ಅಕ್ಕನಾಗಲಿದೇವಿಯರು ಶಿವಶರಣರಲ್ಲಿ
ಇಂಥ ಶತ್ರು ಜಯಾರ್ಥವಾದ ಪ್ರಾಣಹಿಂಸೆಯು ಸಲ್ಲದು. ಈ ಅಳಿಯ
ಬಿಜ್ಜಳನ ಸೆರೆಯಂ ಬಿಟ್ಟು ಆತನ ಆನೆ, ಕುದುರೆ, ಕಾಲಾಳು, ರಾವುತ
ರಾಣಿಯರು, ಪ್ರಧಾನರು ಮುಂತಾದ ಮಡಿದವರಿಗೆ ಪ್ರಾಣವಂ ಕೊಟ್ಟು
ರಕ್ಷಿಸಿ ಅಳಿಯ ಬಿಜ್ಜಳನಿಗೆ ಕಲ್ಯಾಣಪುರದರಸ ಬಿಜ್ಜಳನ ಪಟ್ಟವಂ ಕಟ್ಟಿ
ಕಳುಹಿಸುವುದೆಂದು ಶ್ರೀ ಚನ್ನಬಸವರಾಜೇಂದ್ರರಿಗೆ ಅಪ್ಪಣೆಯಂ ಕೊಡಲು
ದೇವಿಯವರ ನಿರೂಪ ಪ್ರಕಾರ ನೃಪತಿಗೆ ಶ್ರೀ ಚನ್ನಬಸವರಾಜೇಂದ್ರರು
ಪಟ್ಟವಂ ಕಟ್ಟಿ ಅವನ ಆನೆ, ಕುದುರೆ, ಕಾಲಾಳು ಮಂತ್ರಿ ಸೇನಾಧಿಪರು
ಮುಂತಾದ ದಂಡಿಗೆ ಪ್ರಾಣವಂ ಕೊಟ್ಟ ನೀನು ಕಲ್ಯಾಣಕ್ಕೆ ಹೋಗು
ವುದೆಂದು ಆಶೀರ್ವಾದವಂ ಮಾಡಲು ಅಳಿಯ ಬಿಜ್ಜಳನು ತನ್ನ ಚತು
ರಂಗ ಮಾರ್ಬಲವು ಬದುಕಿದ್ದುದನು ನೋಡಿ ಸಂತೋಷಿತನಾಗಿ ಶ್ರೀ ಚನ್ನ

ದಂಡೇಶನಂ ಸ್ತುತಿಸಿ, ಕೊಂಡಾಡಿ, ಶರಣಾಗತನಾಗಿ ಮುಂದೆನಗೆ ಗತಿ ಆವುದೆಂದು ನಿರೂಪಿಸುವದೆಂದು ಹೇಳಿಕೊಳ್ಳಲು ಶ್ರೀಚನ್ನದಂಡನಾಯಕರು ಅವನ ಭಾವಕ್ಕೆ ಮೆಚ್ಚಿ ನೀನು ಕಲ್ಯಾಣದರಸಾಗಿ ಸುಖದಿಂದಲ್ಲಿ ಅರುವತ್ತು ವರುಷ ಪಟ್ಟವಾಳುವಿ, ಆ ಮೇಲೆ ಹರನ ಅಪ್ಪಣೆಯಿಂ ರಾಕ್ಷಸ ಪೀತಾಂಬರರು ಮರ್ತ್ಯದಿ ಜನಿಸಿ ತುರುಕರಾಗಿ ಕಲ್ಯಾಣಕ್ಕೆ ಬಂದು ಏಳನೂರು ಮೇಲೆಪ್ಪತ್ತು ವರುಷ ಆ ಕಲ್ಯಾಣ ಪುರದರಸರಾಗಿ ಆ ದೇಶವಂ ಆಳಿ ಆ ಮೇಲೆ ಕಲ್ಯಾಣವಂ ಕೆಡಿಸಿ ಕಲಬುರಿಗೆಯಂ ಕಟ್ಟಿ ತುರಕಾಣ್ಯ ದೇಶವಾಗುವದು ಎಂದು ಅಪ್ಪಣೆಯ ಕೊಟ್ಟು ಅಳಿಯ ಬಿಜ್ಜಳರಾಯನಂ ಕಳುಹಿಸಿ ಆನಂತರ ಅಕ್ಕನಾಗಲೆ ಚನ್ನದಂಡನಾಯಕರು ಆ ಗಣ ಸಮೂಹದಲ್ಲಿರುವ ಜಗದೇವ ಮಲ್ಲಿ ಬೊಮ್ಮಣ್ಣಗಳೀರ್ವರಂ ಕರೆದು ನೀವು ಶಿವಶರಣ ಗಣಂಗಳಾದ ಕಾರಣ ನಿಮ್ಮ ಚಿತ್ತದಲ್ಲಿ ಪ್ರಾಣಹಿಂಸೆಯಾದ ಕೊಲೆಯಂ ನೆನೆಯಲಾಗದು, ನೆನೆದು ಬಿಜ್ಜಳ ರಾಯನಂ ಕೊಂದ ಕಾರಣದಿಂ ನೀವು ಈರ್ವರು ಮರ್ತ್ಯದಿ ಜನಿಸಿ ತೊರುಗಲೆಂಬ ಪುರದ ಹೊರವಳಯದಿ ಆ ಪುರದ ಸೀಮಾಂತರದಲ್ಲಿ ಪುಟ್ಟಿ ನೀವಿಬ್ಬರು ವೀರಗುಂಡ ಬ್ರಹ್ಮಯ್ಯಗಳೆಂಬ ಪೆಸರಿನಿಂದ ಅಲ್ಲಿ ಇರುವಿರಿ, ಆಗ್ಗೆ ಆ ಪುರದರಸು ಗಣಪತಿರಾಯನ ಅರಮನೆಯಲ್ಲಿ ಮಾರಾರಿ ಮನುಷ್ಯರೂಪಿನಿಂ ಬಂದು ದ್ರವ್ಯವಂ ಕದ್ದು ನಿಮ್ಮೀರ್ವರ ಮೊರೆ ಚೀಳಲು ಆತನಂ ನೀವು ಕೊಡದಿರಲು ನೃಪಾಲನು ನಿಮ್ಮಿಬ್ಬರನ್ನು ಶೂಲವನೇರಿಸಲು ನಿಮಗೆ ಸಾಂಬನು ಮೆಚ್ಚಿ ಪುಷ್ಪಕದಿಂ ಶಿವಪುರಕ್ಕೆ ಕರೆದು ಒಯ್ವನು ಎಂದು ಅಪ್ಪಣೆಯಂ ಕೊಟ್ಟು ಕಳುಹಿಸಲು ಆ ಪ್ರಕಾರ ಅವರಿಬ್ಬರಿಗೆ ಮೋಕ್ಷವಾದ ಸ್ಥಳವು ತೊರಗಲು ಬನ್ನೂರ ಬಳಿಯ ಮಧ್ಯದಲ್ಲಿ ಈಗ ಆ ಸ್ಥಲದಲ್ಲಿ ಅವರ ಹೆಸರಿನ ದೇವಾಲಯವೂ ಗ್ರಾಮವೂ ಇರುತ್ತವೆ. ಆ ನಂತರ ಮಡಿವಾಳಯ್ಯಗಳ ದೇವರ ಹಿಪ್ಪರಗಿ ಕಲ್ಲಿನಾಥ ಲಿಂಗದಿ ಐಕ್ಯವಾಗುವದೆಂದು ಶ್ರೀಚನ್ನದಂಡೇಶನು ಕಳುಹಿ ಇತ್ತ ಮರ್ತ್ಯಲೋಕದಿ ಇದ್ದ ಗಣವರರು ಮುಂತಾದ ವಜೀರ ಮಲ್ಲುಖಾನ ಅವನ ದಂಡು ೧೨ ಸಾವಿರ ಸೈನ್ಯಗಳ ಸಹಿತರಿಗೆ ಆಶೀರ್ವಾದವಂ ಮಾಡಿ ಕಳುಹಿ ತಮ್ಮ ಬೆಂಬಲವಾಗಿ ಬಂದ ರಾಕ್ಷಸಿಗೆ ಈ ಉಳವಿ ಕ್ಷೇತ್ರದಲ್ಲಿ ನಿನ್ನ ಪೂಜೆ ನಿನ್ನ ಉತ್ಸವ ಮೊದಲಾಗಿ, ನಮ್ಮ ರಥೋತ್ಸವವು ಕಡೆಗೆ ಆಗುವದೆಂದು ಅಪ್ಪ



ಣೆಯಂ ಕೊಟ್ಟು ಆ ಭಿನ್ನೈಸಿಕೊಂಡ ರಾಕ್ಷಸಿಗೆ ನಾವು ನಮ್ಮ ಗಣ ಸಮೂಹ ಸಹಿತವಾಗಿ ಈಗ ಸಾಂಬಲೋಕಕ್ಕೆ ದಯಮಾಡಿಸಿ ಮತ್ತೆ ಪುನಃ ಕರ್ಮ ಕಲಿ ನಾಶನಕಾಗಿ ಧರ್ಮಸ್ಥಾಪಿತಕಾಲಕ್ಕೆ ಈ ಲೋಕಕ್ಕೆ ದಯಮಾಡಿಸಿ ಬರುವೆವು, ಆ ಪರಿಯಂತರ ಈ ಕ್ಷೇತ್ರಪಾಲನಾರ್ಥವಾಗಿ ನೀನು ಇಲ್ಲಿ ಇರುವುದು, ನಾವು ಇಲ್ಲಿಗೆ ಬಂದ ನಂತರ ನಿನಗೆ ಮೋಕ್ಷವಂ ಕೊಡುವೆವು ಎಂತ ನಿರೂಪಿಸಿ ಈ ಕ್ಷೇತ್ರದಲ್ಲಿ ಪರಶು ಜನರು ಬಂದು ತಮ್ಮ ಹೇರುವ ಎತ್ತುಗಳ ಬಿಟ್ಟರೆ ನೀನು ಕಾಯ್ವುದೆಂದು. ಬೈಲಬಸವನಲ್ಲಿ ಕುರುಹು ಇಟ್ಟು ಅದೇ ಸ್ಥಳದಲ್ಲಿ ಪ್ರಮಥರು ಸಲಿಸಿದ ಪರ್ಣಗಳ ದಹನವಂ ಮಾಡಿದ ಭಸ್ಮ ಬೆಳೆದಲ್ಲಿ ಆ ಭಸ್ಮವ ಶಿವಭಕ್ತರು ಧರಿಸುವುದಕ್ಕೆ ಉಂಡಿಗಟ್ಟುವ ಉದ್ದಿಶ್ಯ ಹರಳಯ್ಯನವರ ಹೆಸರಿನ ಚಿಲುಮೆಯಂ ತೆಗಿಸಿ ಈ ಉದಕದಿಂದಲೆ ಆ ಭಸ್ಮವ ಕಲಿಸಿದಲ್ಲಿ ಉಂಡಿ ಆಗುವದು, ಉಳಿದ ಉದಕದಿಂದ ಆಗಬಾರದೆಂದು ಕುರುಹು ಇಟ್ಟು ಅಲ್ಲಿಂದ ಉಳಿವೆಯ ಮಹಾಮನೆಗೆ ದಯಮಾಡಿಸಿ, ಆ ಗಣಸಮೂಹದಲ್ಲಿ ರೇಚಿದೇವನ ಕರಿಸಿ. ನೀನು ಕಲ್ಯಾಣದಲ್ಲಿ ಗಣತೃಪ್ತಿ ಮಾಡಿದಾಗ್ಗೆ ಎಲ್ಲ ಗಣಸಮೂಹಕ್ಕು ಬಿಳಿ ಎಲೆಯಂ ಕೊಟ್ಟು ಒಬ್ಬರಿಗೆ ಕರೆ ಎಲೆಯಂ ಕೊಟ್ಟ ಕಾರಣದಿಂ ನೀವು ಈ ದೋಷದಿಂದ ಮರ್ತ್ಯದಿ ಜನಿಸಿ ಜಂಗಮ ದಾಸೋಹದಿಂ ದೋಷವ ಕಳೆದು ಸಾಂಬಲೋಕಕ್ಕೆ ಬರುವುದೆಂದು ರೇಚಿದೇವನಂ ಪಾವುಗೆಯಂ ತರಲು ಬೈಲಬಸವನಾಲಯಕ್ಕೆ ಕಳುಹಿಸಿ, ಬರೆದ ಪತ್ರವಂ ಮಹಾಮನೆಯ ದ್ವಾರಕ್ಕೆ ಹಚ್ಚಿ ತಮ್ಮ ನಿಯಮಾಚಾರದ ೧೨ ಸಾವಿರ ಷಟ್‌ಸ್ಥಲ ಬ್ರಹ್ಮಿಗಳಾದ ವಿರತರು ಮುಂತಾದ ಸಕಲ ಗಣ ಸಹಿತ ಹೊನ್ನರಳೆ ಮರಕ್ಕೆ ಚಿನ್ನದುಯ್ಯಾಲೆಯಂ ಕಟ್ಟಿ ಮುಕ್ತಿದ್ವಾರವೆಂಬ ಉಳಿವೆಯ ಮಹಾಮನೆಯಲ್ಲಿ ಗಮಿಸಿದರು.

ಆನಂತರ ಪಾವುಗೆಯಂ ರೇಚಿದೇವನು ತಂದು ಮಹಾಮನೆಯಲ್ಲಿ ನೋಡಲು ಅಲ್ಲಿಯ ಪತ್ರವಂ ಓದಿ ನೋಡಿ ಚಿಂತಾಕ್ರಾಂತನಾಗಿ ಮರ್ತ್ಯದಿ ಜನಿಸಿ ಜಂಗಮ ದಾಸೋಹದಿಂದ ಮುಕ್ತನಾದನು. ಈ ಉಳವಿ ಕ್ಷೇತ್ರದಲ್ಲಿ ಪ್ರಮಥರು ಮುಕ್ತರಾದರು, ಎಂಬುದಕ್ಕೆ ದೃಷ್ಟಾಂತವೇನೆಂದರೆ, ಪ್ರಮಥರು ಕರಿಯ ಹೊಳೆಯ ದಾಂಟಲು ರಾಕ್ಷಸಿಯನ್ನು ಕಂಡ ಬೆಟ್ಟಕ್ಕೆ ರಕ್ಷಿ ಬೆಟ್ಟವೆಂತಲು ಪ್ರಮಥರಿಗು ಅಳಿಯ ಬಿಜ್ಜಳನ ದಂಡಿಗು ಜಗಳವಾದ ಸ್ಥಳಕ್ಕೆ ಜಗಳ ಬೆಟ್ಟವೆಂತಲು, ದಂಡು ಬಾರದಂತೆ

ಕಿನ್ನರಿಯ ಬೊಮ್ಮಯ್ಯಗಳು ಹೊಳೆಯಂ ನಿರ್ಮಿಸಿದ ಕಾರಣ ಕಿನ್ನ
ರಿಯ ಬೊಮ್ಮಯ್ಯನ ಹೊಳೆ ಎಂತಲು, ಪ್ರಮಥರು ಕೂಡಿದ ಜೈಲಿಗೆ
ಜೈಲ ಬಸವನ ಗುಡಿಯೆಂತಲು, ಉಳಿವಿಯಲ್ಲಿ ಚನ್ನಬಸವೇಶ್ವರನ ಮಠ
ವೆಂತಲು, ಹರಳಯ್ಯನ ಚಿಲುಮೆಯು ಮಹಾಮನೆ ಗವಿಯು ಅಕ್ಕ
ನಾಗಮ್ಮನ ಗವಿಯು ಉಳಿವಿ ವಿಭೂತಿ ರುದ್ರಾಕ್ಷಿ ಕಣಜವು ಕೈಲಾಸದ
ದ್ವಾರವು ಇಂತು ಅನೇಕ ಮಹತ್ವವುಳ್ಳ ಸ್ಥಲಗಳು ಇರುವುದೆ ದೃಷ್ಟಾಂ
ತವು. ಶ್ರೀಬಸವರಾಜೇಂದ್ರರು ಸಂಗಮನಾಥನಲ್ಲಿ ಅಡಕವಾದ ಮೂರು
ತಿಂಗಳಿಗೆ ಚನ್ನಬಸವರಾಜೇಂದ್ರರು ಉಳಿವೆ ಮಹಾ ಮನೆಗೆ ದಯ
ಮಾಡಿಸಿದರು. ಇಲ್ಲಿಗೆ ಅಲ್ಲಮ ಪ್ರಭುಸ್ವಾಮಿಗಳವರ ಹಿಡಿದು ಶಿವಾನು
ಭವ ಪಟ್ಟವೆರಡು.

---

## ಸಿದ್ಧರಾಮೇಶ್ವರ.

ಮೂರನೆಯ ಶಿವಾನುಭವ ಚರಂತಿಗೆ ಪಟ್ಟದವರಾದ ಸೊನ್ನಲಾ
ಪುರದ ಸಿದ್ಧರಾಮೇಶ್ವರನು ಸೊನ್ನಲಾಪುರದಲ್ಲಿ ಕೆರೆಯಂ ರಚಿಸಿ ಗಂಗೆ
ಯಂ ತರಿಸಿ ಶ್ರೀಶೈಲ ಮಲ್ಲಿಕಾರ್ಜುನ ಮುಂತಾದ ಅನೇಕ ಶಿವಲಿಂ
ಗವಂ ಪ್ರತಿಷ್ಠಿಸಿ ಅನೇಕ ಮಹಿಮೆಗಳ ತೋರುತ್ತ ವೀರಶೈವ ಮತವಂ
ಉದ್ಧರಿಸುತ್ತ ತಮ್ಮ ಷಟ್‍ಸ್ಥಲದ ಗಣಸಮೂಹದೊಡನೆ ಆಸ್ಥಲದಲ್ಲಿ
ಬಂದ ಭಕ್ತಗಣಂಗಳಿಗೆ ಷಟ್‍ಸ್ಥಲ ಜ್ಞಾನೋಪದೇಶವಂ ಮಾಡುತ್ತ
ಕೆಲವು ದಿನಗಳಲ್ಲಿರ್ದು ಆ ಮೇಲೆ ಕಲ್ಯಾಣದ ತ್ರಿಪುರಾಂತಕ ಕೆರೆಯ
ತಟಿಸುಲ್ಲಿ ಇರುವ ಮರಿದೇವರ ಗುಡ್ಡದಲ್ಲಿರುವ ರುದ್ರಮುನಿ ಸ್ವಾಮಿ
ಗಳವರ ಬಳಿಗೆ ತಮ್ಮ ಗಣಸಮೂಹದೊಡನೆ ದಯಮಾಡಿಸಿ ಸ್ವಲ್ಪ
ದಿವಸವಲ್ಲಿರ್ದು ಆನಂತರ ರುದ್ರಮುನಿ ಸ್ವಾಮಿಗಳವರಿಗೆ ಸೊನ್ನಲಾಪು
ರದ ಸಿದ್ಧರಾಮ ಸ್ವಾಮಿಗಳವರು ತಮ್ಮ ಗುರುಗಳಾದ ಶ್ರೀಚನ್ನಬಸ
ವರಾಜದೇವರು ನಿರೂಪಿಸಿದ ಪ್ರಕಾರ ಅಪ್ಪಣೆ ಕೊಟ್ಟದ್ದೇನಂದರೆ—
ನೀವು ಹಿಂದೆ ನಿಮ್ಮ ಪಿತೃವಾದ ರೇಣುಕರು ಈ ಮರ್ತ್ಯದಿ ಪರಮೇ
ಶ್ವರನ ಆಜ್ಞೆಯಿಂದುದಿಸಿ ಶಿವಮತವನುದ್ಧರಿಸಿ ಅನೇಕ ಮಹಿಮೆಗಳಂ
ಮಾಡಿದಲ್ಲಿ ಇವರಿಗೆ ಸಕಲ ದೇಶದರಸುಗಳು ತಮ್ಮ ತಮ್ಮ ಪುತ್ರಿ
ಯರಂ ಕೊಟ್ಟು ವಿವಾಹ ಮಾಡಿದಲ್ಲಿ ಆ ರೇಣುಕರು ತ್ರಿಪುರಾಂಕ ಕೆರೆಯ



ಕಟ್ಟಿಸುವ ವೇಳೆಯೊಳು ಆ ರಾಜರಲ್ಲಿ ಸತ್ಯೇಂದ್ರ ಚೋಳನ ಪುತ್ರಿ
ಯಾದ ರೇಣುಕರ ಸತಿಯಳಾದ ಮಹಾದೇವಿಯ ಚಿದ್ಗರ್ಭದಿ ಕುಕ್ಷಿ
ಯಲ್ಲಿ ನೀವು ಇರುವಾಗ್ಗೆ ನಿಮ್ಮ ಮಾತೆಯು ಕೆರೆಗೆ ಮಣ್ಣು ಹೊರಲಾ
ರದೆ ತಾನು ತನ್ನ ತವರೂರಿಗೆ ಪೋಗುವೆನೆಂದು ತನ್ನ ಪತಿಯಂ
ಕೇಳಲು ಆ ಮಾತಿಗೆ ರೇಣುಕರು ನಮ್ಮ ವಸ್ತುವಂ ಕೊಟ್ಟು ಪೋಗು
ವುದೆಂದು ಆ ದೇವಿಯರಿಗೆ ಅಪ್ಪಣೆಯಂ ಕುಡಲು ಆ ಕೂಡಲೇ ತನ್ನ
ಚಳ್ಳುಗುರಿನಿಂ ತನ್ನ ಉದರವಂ ಸೀಳಿ ಒಳಗಿರ್ದ ಶಿಸುವಂ ಕೊಟ್ಟು
ಪೋಗಲು ಇತ್ತ ರೇಣುಕರು ಆ ಶಿಸುವನ್ನು ಪೊಸ ಪಡಗದಲ್ಲಿ ಇಟ್ಟು
ಆ ಪಡಗವನು ಈ ಕೆರೆಯ ಏರಿಯಲ್ಲಿ ಭೂಗತವಂ ಮಾಡಲು ಆ ಶಿಸು
ವಿಗೆ ಕುಕ್ಷಿಯಲ್ಲಿ ಮೂರು ತಿಂಗಳು ಭೂಮಿಯೊಳು ಆರು ತಿಂಗಳು
ನವಮಾಸ ತುಂಬಲು ಸಿಡಿಲಿನೋಪಾದಿಯಲ್ಲಿ ಭೂಮಿ ಗರ್ಜಿಸಿ ಇಬ್ಭಾಗ
ವಾಗಿ ಭೂಮಿ ಒಡೆಯಲು ಆ ಪಡಗ ಒಡೆದು ಆ ಪಡಗದ ಕಂಠ ಆ
ಶಿಸುವಿನ ಕೊರಳಲ್ಲಿ ಸಿಗಲು ಆ ಕಂಠವ ಧರಿಸಿಕೊಂಡು ಹೊರಗೆ ಬರಲು
ಈ ಶಿಸುವು ಭಸ್ಮ, ರುದ್ರಾಕ್ಷಿ, ಲಿಂಗಧಾರಣ, ಸಹಿತವಾಗಿ ಬಂದುದಂ ರೇಣು
ಕರು ಕಂಡು ಪರಮ ಸಂತೋಷಿತರಾಗಿ ಈ ಮಗುವು ಅನಾದಿ ಜಂಗಮ
ರೂಪವೆಂದು ತಿಳಿದು ರುದ್ರಮುನಿ ಎಂಬ ನಾಮವಂ ಕೊಟ್ಟು ಸಂರಕ್ಷಿಸಿ ಆ
ಮೇಲೆ ಪ್ರಭುವಂಶೋದ್ಭವರಾದ ಗುರುಲಿಂಗಣಾಚಾರ್ಯರಿಂ ಷಟ್‍ಸ್ಥಲ
ಜ್ಞಾನೋಪದೇಶವಂ ಕೊಡಿಸಿ ಆ ಮೇಲೆ ರೇಣುಕರು ತಾವು ಸಾಂಬ
ಲೋಕಕ್ಕೆ ದಯಮಾಡಿಸುವದು ಸಮೀಪಿಸಿದ ಕಾರಣ ಈ ಘನಮುನಿ
ರುದ್ರಮುನಿ ಸ್ವಾಮಿಗಳವರಿಂದ ಇವರ ಷಟ್‍ಸ್ಥಲ ಆಶ್ರಮವನ್ನು ಅನಾ
ದಿಗಣವರನಿಗೆ ಕೊಡಿಸಿ ಆ ನಂತರ ನಿಮಗೆ ರೇಣುಕಾಚಾರ್ಯರಾದ
ರೇವಣಸಿದ್ಧೇಶ್ವರನು ತಮ್ಮ ಪಟ್ಟವಂ ಮಾಡಿ ನಿಮಗೆ ಬಸವಾದಿ ಪ್ರಮ
ಥರು ಕಲ್ಯಾಣಪಟ್ಟಣವಂ ಬಿಟ್ಟು ಸಾಂಬಲೋಕಕ್ಕೆ ಹೋದ ನಂತರ
ನಿಮ್ಮ ಶಿಷ್ಯರಾದ ಮುಕ್ತಿಮುನಿಯು ತಮ್ಮ ಗಣಸಮೂಹದೊಡನೆ ಸಕಲ
ದೇಶವಂ ಸಂಚರಿಸಿ ದುಷ್ಟರಂ ಗೆಲಿದು ಶಿಷ್ಟರಂ ರಕ್ಷಿಸುತ್ತ ಶ್ರೀಶೈಲ
ಗಿರಿಗೆ ಪೋಗಿ ಅಲ್ಲಿ ಮುಕ್ತಿಮುನೀಶ್ವರನಿಗೆ ನೀವು ನಿಮ್ಮ ಪಟ್ಟವಂ ಕಟ್ಟಿ
ಆ ನಂತರ ನೀವು ಇಲ್ಲಿಗೆ ದಯಮಾಡಿಸಿ ಇದೇ ಮಠದಲ್ಲಿ ಶಿವಯೋ

ಗದಿಂ ನಿಜಸಮಾಧಿಯಲ್ಲಿ ಮೂರ್ತನ ಮಾಡುವಿರಿ. ಆ ಮೇಲೆ ಶ್ರೀಶೈಲದಲ್ಲಿ ಮುಕ್ತಿಮುನಿ ಶ್ರೀಶೈಲಸಿಂಹಾಸನಕ್ಕೆ ದೇವರ ಜಾತ ಭಿಕ್ಷಾವತಿಗಳಿಗೆ ಪಟ್ಟವಂ ಕಟ್ಟಿ ತಮ್ಮ ಪಟ್ಟವಂ ದಿಗಂಬರ ಮುಕ್ತಿಮುನಿಗೆ ಕಟ್ಟಿ, ತಾವಾಗ ಮಲ್ಲಿಕಾರ್ಜುನಲಿಂಗದಲ್ಲಿ ನಿರ್ವಯಲಾಗುವರು. ಆ ಬಳಿಕ ದಿಗಂಬರ ಮುಕ್ತಿಮುನಿ ಪ್ರಭುವಂಶೋದ್ಭೂತರಾದ ಚಿಕ್ಕ ವೀರದೇವರೆಂಬ ಕ್ರಿಯಾಮೂರ್ತಿಗಳು ಸಹವಾಗಿ ಚರಸಮೇತವಾಗಿ ಸಂಚರಿಸುತ್ತ ಮಲೆದೇಶಕ್ಕೆ ಬಂದು ಆ ದೇಶದರಸನಾದ ಜೈನಕುಲದವರು ಶಿವಭಕ್ತರಂ ದೂಷಿಸಿ ವೀರೇಶನಂ ಕಿತ್ತು ನದಿಯಲ್ಲಿ ಬಿಸುಟದ್ದುದಂ ಕೇಳಿ ಆ ಜೈನ ಪರವಾದಿಗಳಂ ಗೆಲಿದು ವೀರೇಶನಂ ಹೊಳೆಹೊನ್ನೂರಲ್ಲಿ ಸ್ಥಾಪಿಸಿ ಆ ಬಳಿಕ ಬಾಳೆಹಳ್ಳಿ ಎಂಬ ಗ್ರಾಮವಂ ರಚಿಸಿ ಅಲ್ಲಿ ಸಿಂಹಾಸನವೆಂಬ ಮಠವಂ ಕಟ್ಟಿ ಆ ಮೇಲೆ ತಮ್ಮ ಪಟ್ಟವಂ ಚನ್ನಬಸವದೇವರಿಗೆ ಕಟ್ಟಿ ಶ್ರೀಶೈಲಗಿರಿಯಲ್ಲಿ ಮುಕ್ತರಾಗುವರು, ಎಂದು ರುದ್ರಮುನಿಸ್ವಾಮಿಗಳವರಿಗೆ ಸೂಚಿಸಿ ಆ ಬಳಿಕ ಸಿದ್ಧರಾಮೇಶ್ವರಸ್ವಾಮಿಗಳು ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಆರಿಗೆ ಮಾಡಬೇಕೆಂದು ಸ್ವಾಮಿಗಳನ್ನು ಕೇಳಿಕೊಳ್ಳಲು ಅವರು ತಮ್ಮ ಷಟ್‌ಸ್ಥಲವಾದ ಪ್ರಯುಕ್ತ ಆಶ್ರಮವನ್ನು ತಗೆದುಕೊಂಡ ಅನಾದಿ ಗಣವರನಿಗೆ ಜಗದ್ಗುರುಗಳಾದ ಪ್ರಭು ಚನ್ನಬಸವರಾಜೇಂದ್ರರ ಚರಂತಿಗೆ ಪಟ್ಟವಂ ಮಾಡಬೇಕು ಎಂದು ಅಪ್ಪಣೆಯಂ ಕೊಡಲು ಅವರಪ್ಪಣೆಯ ಮೇರೆಗೆ ರುದ್ರಮುನಿಸ್ವಾಮಿಗಳು ಮುಂತಾದ ಸಕಲ ಗಣಂಗಳ ಮುಂತಿಟ್ಟುಕೊಂಡು ಅನಾದಿ ಗಣವರನಿಗೆ ಶಿವಾನುಭವ ಚರಂತಿಗೆ ಪಟ್ಟವಂಮಾಡಿ ತಾವು ಸೊನ್ನಲಾಪುರಕ್ಕೈದಿ ನಿಜಸಮಾಧಿಯಂ ಹೊಂದಿದರು. ಇವರ ತೋರಗದ್ದಿಗೆಯು ಸೊನ್ನಲಾಪುರದಲ್ಲಿ ಇರುತ್ತದೆ.

---

## ಅನಾದಿ ಗಣನಾಥ.

ಈ ನಾಲ್ಕನೆಯ ಶಿವಾನುಭವ ಚರಂತಿಗೆ ಪಟ್ಟದ ಅನಾದಿಗಣನಾಥ ಸ್ವಾಮಿಗಳವರು ತಮ್ಮ ಗಣಸಮೂಹದೊಡನೆ ೭೨ ಬಿರುದುಗಳಿಂದ ಉತ್ಸಹಂಗೊಳ್ಳುತ್ತ ಸಕಲ ದೇಶಂಗಳಂ ಸಂಚರಿಸುತ್ತ ವೈಷ್ಣವಾದಿಗಳು ಮುಂತಾದ ಜೈನ ಮತಂಗಳಂ ಗೆಲಿದು ವೀರಶೈವ ಮತವನುದ್ಧರಿಸುತ್ತ ಅಲ್ಲಮಪ್ರಭು ಸ್ವಾಮಿಗಳವರು ತಮ್ಮ ಗೊಹೇಶ್ವರ ಲಿಂಗದಭಿಧಾನದಿಂ



ಕೊಂಕಣ ದೇಶದ ಲವಣ ಸಮುದ್ರ ತೀರದ ತಟಿಯಲ್ಲಿ ರಚಿಸಿದ ಗೊಹೆ ಎಂಬ ಪುರದಿ ಇರುವ ಗೊಹೇಶ್ವರನ ಲಿಂಗದಾಲಯಕ್ಕೆ ಚಿತ್ತೈಸಿ ಆ ಕ್ಷೇತ್ರದಿ ಲಿಂಗ ಪೂಜಾ ಜಂಗಮದಾಸೋಹದೊಡನೆ ಕೆಲವು ವರುಷವಿರ್ದು ಆ ಮೇಲೆ ಈ ಕ್ಷೇತ್ರವು ಮ್ಲೇಂಛರಿಗೆ ಸೇರಿ ಶಿವ ಮತವು ಅಳಿವುದನು ನೋಡಲಾಗದೆಂದು ತಮ್ಮ ದಿವ್ಯ ಜ್ಞಾನದಿಂದರಿದು ತಾವು ತಮ್ಮ ಶಿಷ್ಯನಾದ ಆದಿಗಣವರಣಿಗೆ ಉಸುರಿ ಇವರಿಗೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವಂ ಮಾಡಿ ತಾವು ಅದೆ ಗೊಹೇಶ್ವರ ಲಿಂಗದಿ ನಿರ್ವಯಲಾದರು. ಇವರ ತೊರಗದ್ದಿಗೆ ಗೊಹೆಯಲ್ಲಿ ಇರುತ್ತದೆ. ಇದಕ್ಕೆ ಗೊಹೆಯಸ್ಥಲ ಪುರಾಣವೇ ಸಾಕ್ಷಿಯು.

---

## ಆದಿ ಗಣೇಶ್ವರ.

ಈ ೫ ನೆಯ ಪಟ್ಟದ ಆದಿ ಗಣೇಶ್ವರನು ಅದೇ ಕ್ಷೇತ್ರದ ಮಠದಲ್ಲಿ ತಮ್ಮ ಗಣಸಮೂಹದೊಡನೆ ಜಂಗಮದಾಸೋಹವ ಮಾಡುತ್ತಿರುವಲ್ಲಿ ಆ ಪಟ್ಟಣಕ್ಕೆ ಮ್ಲೇಂಛರಾದ ಭವಿಗಳು ಬಂದು ಆ ಪುರದಿ ಸೇರಲು ಅಲ್ಲಿ ಇರ್ದ ಭಕ್ತ ಮಹೇಶ್ವರರು ಆ ಸ್ಥಲವಂ ಬಿಡಲು ಇದ ಕಂಡು ತಾವಿರ್ದ ಶಿಲಾಮಯವಾದ ಮಠದ ದ್ವಾರಕ್ಕೆ ಶಿಲೆಯಿಂದ ಗುಡಿಯಂ ಕಟ್ಟಿಸಿ ಕವಾಟವಂ ಬಂಧಿಸಿ ಆ ದ್ವಾರದ ಬಳಿಯಲ್ಲಿ ಈ ಕ್ಷೇತ್ರದಲ್ಲಿ ನಮ್ಮ ಪ್ರಭುವಂಶೋದ್ಭವರಾದ ಗಣವರರು ಬಂದು ಶಿವಾರ್ಚನೆಯಂ ಮಾಡಿದರೆ ಈ ಗೊಹೆಯಲ್ಲಿ ಇರುವ ಭವಿಮತವು ಅಳಿದು ಶಿವಮತವು ಉದ್ಧಾರವಾಗಿ ಈ ಮಠವಾದ ದೇವಾಲಯದ ಬಾಗಿಲ ತೆರೆದು ಗೊಹೇಶ್ವರ ಲಿಂಗದ ಪೂಜೋಪಚಾರಂಗಳು ಆಗುವವು ಎಂದು ಶಿಲಾಲಿಪಿಯಂ ಬರೆಸಿ ಅಲ್ಲಿ ಸ್ಥಾಪಿಸಿ ಈ ಪ್ರಕಾರ ಕುರುಹಂ ಇಟ್ಟು ತಮ್ಮ ೭೨ ಬಿರುದುಗಳಿಂದ ಗಣತಿಂಥಿಣಿಯೊಡನೆ ದೇಶಂಗಳಂ ಸಂಚರಿಸುತ್ತ ಅಲ್ಲಲ್ಲಿ ಇರುವ ಶಿವಭಕ್ತಗಣಂಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡುತ್ತ ದುರಾಚಾರದಲ್ಲಿದ್ದವರ ಸದಾಚಾರದಲ್ಲಿ ತರುತ್ತ ತಾವು ಮೈಸೂರು ಸೀಮೆ ಕಪನಿ ಕಾವೇರಿ ತೀರದ ತಲಕಾಡು ಮಾನಂಗಿಗೆ ಸಮೀಪದಲ್ಲಿ ನಿಜಗುಣೇಶ ಷಡಕ್ಷರದೇವರಿದ್ದ ಶಂಭುಲಿಂಗದ ಬೆಟ್ಟದ ಸಮೀಪವಾದ ಒಂದು ಬೆಟ್ಟದಲ್ಲಿ ಆ ಸೀಮೆ ಭಕ್ತ ಮಹೇಶ್ವರರು ಮಠವಂ ಕಟ್ಟಿ ಸ್ವಾಮಿಗಳವರಿಗೆ ನಮಸ್ಕರಿಸಲು ಆ ದೇವ ಭಕ್ತರ ಭಕ್ತಿಯೊಳು ಆದಿ ಗಣ

ನಾಥ ಸ್ವಾಮಿಗಳವರು ಅಲ್ಲಿ ಲಿಂಗಪೂಜಾ ಜಂಗಮದಾಸೋಹದೊಡನೆ ಕೆಲವು ಕಾಲ ಪರಿಣಾಮಿಸಿ ಆ ನಂತರ ಆದಿಗಣವರರು ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ನಿರ್ಮಾಯ ಗಣವರರಿಗೆ ಮಾಡಿ ತಾವು ಅದೆ ಬೆಟ್ಟದಲ್ಲಿ ನಿರ್ವಯಲಾದರು. ಇವರ ತೋರಗದ್ದಿಗೆ ಅದೆ ಬೆಟ್ಟದಲ್ಲಿ ಇರುತ್ತದೆ. ಈ ಬೆಟ್ಟಕ್ಕೆ ಪ್ರಭುಸ್ವಾಮಿ ಬೆಟ್ಟವೆನ್ನುತ್ತಾರೆ.

---

## ನಿರ್ಮಾಯ ಗಣೇಶ್ವರ.

ಈ ೬ ನೆಯ ಪಟ್ಟದ ನಿರ್ಮಾಯ ಗಣವರರು ನಿರಾಶಕರಾಗಿ ಘನ ವಿರಕ್ತರಾದ್ದರಿಂದ ಗುರುವಾಜ್ಞೆಯಂ ಮೀರಲಾರದೆ ಈ ಪಟ್ಟವಂ ಒಪ್ಪಿದರಲ್ಲದೆ ಇಲ್ಲದಿದ್ದರೆ ಒಪ್ಪುವರಲ್ಲವಾದ ಕಾರಣ ಈ ಪಟ್ಟವೆಂಬ ಕಪಟವನ್ನು ಬಿಟ್ಟು ಆ ಕೂಡಲೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ನಿರಂಜನ ಗಣನಾಥನಿಗೆ ಮಾಡಿ ತಮ್ಮ ೭೨ ಬಿರುದುಗಳು ತಾವು ಹತ್ತುವ ಬಸವ ತಾವು ಶಿವಾರ್ಚನೆ ಮಾಡುವಾಗ್ಗೆ ಶಿವಲಿಂಗ ಮೂರ್ತಿಗೆ ಪೆಡೆಯನ್ನು ಎತ್ತಿ ಶಿವಾರ್ಚನೆ ಆದ ನಂತರ ಕ್ಷೀರ ಪಾನವಂ ಮಾಡಿ ಹೋಗುವ ಉರಗನನ್ನು ಸಹ ಬಿಟ್ಟು ತಮ್ಮ ಕರ ಸಂಜಾತರಾದ ಸಂಸಾರ ಸಂಗಪ್ಪನವರ ಕರೆದುಕೊಂಡು ಆ ಬೆಟ್ಟವಂ ಬಿಟ್ಟು ಅಲ್ಲಿಂದ ಇಬ್ಬರೂ ಪಾದಚಾರಿಗಳಾಗಿ ಜಾಲಾಜಿ ಮಲಯಾಳಕ್ಕೆ ಸೇರ್ಪಟ್ಟ ಎರಡು ಮೂರು ಬೆಟ್ಟದ ಹಬ್ಬುಗಳಂ ದಾಂಟಿ ಕಡೆಯಲ್ಲಿ ನಾಲ್ಕು ದಿಕ್ಕಿಗು ಬೆಟ್ಟಗಳು ಹಬ್ಬಿದ ಮಧ್ಯದಲ್ಲಿರುವ ಒಂದು ಸ್ಥಳಕ್ಕೆ ಚಿತ್ತೈಸಿ ಅಲ್ಲಿರುವ ಶೈವರಿಗೆ ಸಂಸಾರ ಸಂಗಪ್ಪನವರಿಂದ ಲಿಂಗವಂ ಧರಿಸಿ ವೀರಶೈವ ದೀಕ್ಷೆಯಂ ಮಾಡಿಸಿ ಅವರಿಗೆ ತಾವು ಶಿವಲಿಂಗದಲ್ಲಿ ನಿರ್ವಯಲಾದ ಯೋಗ ಸಮಾಧಿಯ ಮೇಲಿರುವ ತೋರಗದ್ದಿಗೆಯಂ ಪೂಜಿಸುವುದು ಎಂದು ಅಪ್ಪಣೆಯಂ ಕೊಟ್ಟು ಈಗ ನಾವು ಯೋಗ ಸಮಾಧಿಯಲ್ಲಿ ಮೂರ್ತ ಮಾಡಿವ ಈ ಬೆಟ್ಟದಿ ಮುಂದೆ ನಮಗೆ ನಡೆದುಕೊಂಬವ ದೇವಭಕ್ತರುಗಳು ಈ ಬೆಟ್ಟದಲ್ಲಿ ಬಂದ ಪರಿಸೆಯೊಳಗೆ ಜನರು ತಮ್ಮ ಪತ್ನಿಯರಾದಾಗ್ಯೂ ಸ್ತ್ರೀ ಸಂಪರ್ಕವಂ ಮಾಡಕೂಡದು, ಮಾಡಿದಲ್ಲಿ ಅವರುಗಳ ಹುಲಿಯು ಬಂದು ಸಂಹರಿಸಲಿ, ಮತ್ತು ಈ ಸ್ಥಳದಿ ಸುರಾಮಾಂಸ ಮಾರಕೂಡದು, ಮಾರಿದಲ್ಲಿ ಅವರು ನಾಶವಾಗಲಿ ಎಂದು ಕುರುಹಿಟ್ಟು ತಾವು



ಸಮಾಧಿಗತರಾಗಬೇಕೆಂಬುವದರೊಳಗಾಗಿ ಆ ನಿರಂಜನ ಗಣವರರ ಬಳಿಯಲ್ಲಿರ್ದ ಬಸವನು ನಾಗರಸರ್ಪನು ಈ ಎರಡು ಅಲ್ಲಿರದೆ ನಿರ್ಮಾಯ ಗಣವರರ ಬಳಿಗೆ ಬರಲು ಇವೆರಡಕ್ಕಂ ಮೋಕ್ಷವಂ ಕೊಟ್ಟು ಸಂಸಾರ ಸಂಗಪ್ಪನವರಿಗೆ ನೀವು ಇನ್ನು ಕೆಲವು ದಿವಸ ಮರ್ತ್ಯದಿ ಜಂಗಮದಾಸೋಹ ಲಿಂಗ ಪೂಜೆಯಂ ಮಾಡಿ ನೀವು ದಂಪತಿಗಳು ಸಾಂಬಲೋಕಕ್ಕೆ ಬರುವಿರಿಯೆಂದು ಅಪ್ಪಣೆಯಂ ಕೊಟ್ಟು ಆಶೀರ್ವಾದವಂ ಮಾಡಿ ಕಳುಹಿಸಿ ತಾವು ನಿರ್ವಯಲಾದರು. ಇವರ ತೋರಗದ್ದಿಗೆ ಅದೆ ಬೆಟ್ಟದಲ್ಲಿ ಇರುತ್ತದೆ. ಆ ಬೆಟ್ಟಕ್ಕೆ ಮಹದೇಶ್ವರನ ಬೆಟ್ಟವೆನ್ನುತ್ತಾರೆ. ಆ ಬೆಟ್ಟದಲ್ಲಿ ಕೂಡಿದ ಪರಿಸೆಯಲ್ಲಿ ಆವನಾದರೊಬ್ಬ ಮನುಷ್ಯನು ಸ್ತ್ರೀ ಸಂಪರ್ಕ ಮಾಡಿದರೆ ಇವೊತ್ತಿಗು ಆ ಸ್ಥಳದಲ್ಲಿ ಹುಲಿಯು ಒಯ್ಯುತ್ತದೆ. ವರುಷ ಒಂದಕ್ಕೆ ಎರಡು ವೇಳೆ ಪರಿಸೆ ಕೂಡುತ್ತದೆ. ಸುರಾಮಾಂಸ ಮಾರುವದಿಲ್ಲ. ಲಿಂಗ ಧಾರಣವಾದ ಶೈವರಿಗೆ ತಂಬಿಡಿಗಳೆನ್ನುತ್ತಾರೆ. ಈ ಬೆಟ್ಟಕ್ಕೆ ಪರಿಸೆ ಹೋಗುವ ಮಾರ್ಗವು ಇವೊತ್ತಿಗೂ ಎರಡು ಇವೆ. ಒಂದು ದಾರಿಗೆ ಸರ್ಪನ ಹಾದಿ ಎನ್ನುತ್ತಾರೆ. ಮತ್ತೊಂದು ಹಾದಿಗೆ ಬಸವನ ಹಾದಿ ಎನ್ನುತ್ತಾರೆ. ಸಂಸಾರ ಸಂಗಪ್ಪನವರು ನಿರ್ವಯಲಾದ ಬೆಟ್ಟದಲ್ಲಿ ಅವರ ಹೆಸರಿನಲ್ಲಿ ದೇವಾಲಯವು ನಿರ್ಮಾಣವಾಗಿ ಆ ಬೆಟ್ಟವು ಈ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಇರುತ್ತದೆ. ನಿರ್ಮಾಯನ ಬೆಟ್ಟವೆಂಬುವ ಬದಲು ಮಹದೇಶ್ವರನ ಬೆಟ್ಟವೆಂದು ಲೋಕದ ರೂಢಿನಾಮವಾಗಿದೆ. ಇದಕ್ಕೆ ಇದರ ಸ್ಥಲ ಪುರಾಣವೆ ಸಾಕ್ಷಿಯು.

---

## ನಿರಂಜನ ಸ್ವಾಮಿಗಳು

೭ ನೆಯ ಶಿವಾನುಭವ ಚರಂತಿಗೆ ಪಟ್ಟದ ನಿರಂಜನ ಸ್ವಾಮಿಗಳವರು ಲಿಂಗ ಪೂಜಾ ಜಂಗಮದಾಸೋಹದೊಡನೆ ಅದೇ ಬೆಟ್ಟದ ತಮ್ಮ ಮಠದಲ್ಲಿ ವಾಸಿಸಿ ಆ ಮೇಲೆ ೭೨ ಬಿರುದುಗಳು ಸಹಿತವಾಗಿ ಗಣಸಮೂಹದೊಡನೆ ಬಾಣಾಸುರನ ಬೆಟ್ಟಕ್ಕೆ ದಯ ಮಾಡಿಸಿ ಆ ನೆಲ್ಯಾಳ ಸೀಮೆಯ ಅರಸನಿಗೆ ಶಾಸ್ತ್ರ ಮುಖದಿಂದ ಒಡಂಬಡಿಸಿ ಆ ಸೀಮೆಯಲ್ಲಿ ಇರುವ ವೈಷ್ಣವ ಮತವಂ ಗೆಲಿದು ಆ ಅರಸನಿಗೆ ಅವನ ಬಂಧು ಬಾಂಧವರಿಗೆ ಲಿಂಗಧಾರಣವಂ ಮಾಡಿಸಿ, ಅಲ್ಲಿಂದ ನೀಲಗಿರಿ ಮುಂತಾದ ದೇಶಂಗಳಂ ಸಂಚರಿಸುತ್ತ ಶಾಲಿವಾಹನ ಶಕ

ಎಂಟನೂರಸೆಯ ವಿಳಂಬಿ ಸಂವತ್ಸರದ ಚೈತ್ರ ಶುದ್ಧ ೧೦ ಗುರುವಾರ ದುದಯ ೧೨ ಗಳಿಗೆಯಲ್ಲಿ ಹೊಯ್ಸಳ ದೇಶದ ಹಳೇ ಬೀಡು ವೇಲಾಪುರದರಸನು ವಿಷ್ಣುವರ್ಧನನೆಂಬ ಬಲ್ಲಾಳನಿಗೆ ಆ ದೇಶದ ರಾಜ ಪಟ್ಟವಾಗಲು ಈತನಾಳಿಕೆಯಲ್ಲಿ ಹರಿಹರಾಚಾರ್ಯರು ರಾಘವಾಂಕಯ್ಯ ಕೆರೆಯ ಪದ್ಮರಸರು ಸೋಸಲೆಯ ಭೈರವರಾಜ ಒಕ್ಕಲೂರ ನುಲಿಯ ಕಲ್ಲಪ್ಪ ಮುಂತಾದ ಸಕಲ ದೇವಭಕ್ತರುಗಳಾದ ಈ ವರ ಕವಿಗಳಿಗೆ ಸ್ವಾಮಿಗಳವರು ಈ ದೇಶಕ್ಕೆ ದಯಮಾಡಿಸಿ ದರ್ಶನಾಶೀರ್ವಾದವಂ ಕೊಟ್ಟು ಇವರ ಭಕ್ತಿಯಂ ಕೈಕೊಳ್ಳುತ್ತ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡುತ್ತ ಅಲ್ಲಿಂದ ಕಲ್ಯಾಣಕ್ಕೆ ದಯ ಮಾಡಿಸಿ ಅಲ್ಲಿರುವ ತ್ರಿಪುರಾಂತಕ ಕೆರೆಯ ತಟಿಯಲ್ಲಿರುವ ರುದ್ರಮುನಿ ಸ್ವಾಮಿಗಳವರ ಮಠದಲ್ಲಿ ಈಗ ಸಮಾಧಿಯಂ ಮಾಡಿಸಿ ಆ ಕಲ್ಯಾಣದಲ್ಲಿ ಇರುವ ಭಕ್ತ ಗಣಂಗಳನ್ನು ಕರಿಸಿ ಅವರ ಮುಂತಿಟ್ಟುಕೊಂಡು ತಮ್ಮ ಶಿವಾನುಭವ ಚರಂತಿಗೆ ಪಟ್ಟವಂ ಜ್ಞಾನಾನಂದ ಸ್ವಾಮಿಗಳವರಿಗೆ ಮಾಡಿ ತಾವು ಆ ಮಠದ ಹತ್ತಿರ ಸಾಸಿರ ಬಿಲ್ವವೃಕ್ಷಂಗಳಂ ಹಾಕಿಸಿ ಅದೆ ಮಠದಲ್ಲಿ ನಿರ್ವಯಲಾದರು. ಇವರ ತೋರಗದ್ದಿಗೆ ಕಲ್ಯಾಣ ತ್ರಿಪುರಾಂತಕ ಕೆರೆಯ ತಟಿಯಲ್ಲಿ ಇರುತ್ತದೆ. ಆ ಮಠದಲ್ಲಿ ಎರಡು ಗದ್ದಿಗೆಗಳು ಇರುತ್ತವೆ. ಒಂದು ರುದ್ರಮುನಿ ಸ್ವಾಮಿಗಳ ಗದ್ದಿಗೆ ಒಂದು ನಿರಂಜನ ಸ್ವಾಮಿಗಳವರ ಗದ್ದಿಗೆ. ಅವು ಈಗ ಅಲ್ಲಿ ಇವೆ. ಈ ಮಠವಿರುವ ಸ್ಥಳಕ್ಕೆ ಮರಿದೇವರ ಗುಡ್ಡವೆನ್ನುತ್ತಾರೆ.

---

## ಜ್ಞಾನಾನಂದ ಸ್ವಾಮಿಗಳು

ಈ ಎಂಟನೆಯ ಪಟ್ಟದ ಜ್ಞಾನಾನಂದ ಸ್ವಾಮಿಗಳವರ ಕಡೆಯಿಂದ ಇವರ ಘನದಲ್ಲಿ ಇದ್ದ ಕೋಲು ಶಾಂತಯ್ಯ, ಕುದುರೆ ಶಾಂತಯ್ಯ, ಪಂಚದ ಶಾಂತಯ್ಯ ಮುಂತಾದ ಕೆಲವು ವಿರಕ್ತಮೂರ್ತಿಗಳು ಆಶೀರ್ವಾದವಂ ತೆಗೆದುಕೊಂಡು ಪಂಪಾಕ್ಷೇತ್ರ ಮುಂತಾದ ಕ್ಷೇತ್ರಂಗಳಿಗೆ ದಯಮಾಡಿಸಲು ಇತ್ತ ಜ್ಞಾನಾನಂದ ಸ್ವಾಮಿಗಳು ಕಲ್ಯಾಣದಲ್ಲಿ ಇರುವ ಪ್ರಭುಸ್ವಾಮಿಗಳವರ ಮಠವಂ ಕಟ್ಟಿಸಿ ಆ ಮಠದಲ್ಲಿ ಪ್ರಭುಸ್ವಾಮಿಗಳವರು ಬಸವಾದಿ ಸಕಲ ಪ್ರಮಥರು ಶೂನ್ಯಪೀಠದಿ ಮೂರ್ತಮಾ



ಡಿಸಿ ಪೂಜೆಯಂ ಮಾಡಿದ ಸ್ಥಳದಿ ಶೂನ್ಯಸಿಂಹಾಸನವಂ ರಚಿಸಿ ಅಲ್ಲಿ ಮಹಾಘನವಾದ ಜಂಗಮಾರಾಧನೆಯಂ ಮಾಡಿಸಿ ಆ ಮಠದಲ್ಲಿ ಲಿಂಗ ಪೂಜೆ ಜಂಗಮ ದಾಸೋಹವಂ ಮಾಡುತ್ತ ಅಲ್ಲಿ ಇದ್ದು ಆ ಮೇಲೆ ತಮ್ಮ ಘನಸಹಿತವಾಗಿ ೭೨ ಬಿರುದುಗಳೊಡನೆ ದೇಶಾಂತರವಂ ಮಾಡುತ್ತ ಶಾಸ್ತ್ರಮುಖದಿಂ ಪರವಾದಿಗಳಂ ಗೆಲಿದು ವೀರಶೈವ ಮತವಂ ಉದ್ಧರಿಸುತ್ತ ಶ್ರೀಶೈಲಕ್ಕೆ ದಯಮಾಡಿಸಿ ತಮ್ಮ ಶಿವಾನುಭವ ಚರಂತಿಗೆ ಪಟ್ಟವಂ ಆತ್ಮ ಗಣವರರಿಗೆ ಮಾಡಿ ತಾವು ಅದೆ ಕ್ಷೇತ್ರದಿ ನಿರ್ವಯಲಾದರು. ಇವರ ತೊರಗದ್ದಿಗೆ ಶ್ರೀಶೈಲದಲ್ಲೇ ಇರುತ್ತದೆ. ಇವರ ಗದ್ದಿಗೆ ಇರುವ ಮಠಕ್ಕೆ ಪ್ರಭುದೇವರ ಮಠವೆಂದು ಎನ್ನುತ್ತಾರೆ.

---

## ಆತ್ಮಗಣವರ

ಈ ೯ ನೆಯ ಪಟ್ಟದ ಆತ್ಮಗಣವರರು ಈ ಪಟ್ಟದಿಂದ ಜನಗೋಷ್ಠಿ ಅಲ್ಲದೆ ಬೇರೆ ಫಲವಿಲ್ಲವೆಂಬುದಂ ತಿಳಿದು ಆ ಕೂಡಲೆ ಶಿವಾನುಭವ ಚರಂತಿಗೆ ಪಟ್ಟವಂ ಅಧ್ಯಾತ್ಮ ಗಣನಾಥರಿಗೆ ಮಾಡಿ ತಾವು ಪ್ರಭು ಸ್ವಾಮಿಗಳು ದಯಮಾಡಿಸಿದ ಕದಳೀ ಬನಕ್ಕೆ ಚಿತ್ತೈಸಿ ಅಲ್ಲೆ ನಿರ್ವಯಲಾದರು.

---

## ಅಧ್ಯಾತ್ಮ ಗಣನಾಥ

ಈ ೧೦ ನೆಯ ಪಟ್ಟದ ಅಧ್ಯಾತ್ಮ ಗಣನಾಥರು ತಮ್ಮ ಗಣಸಮೂಹದೊಡನೆ ೭೨ ಬಿರುದುಗಳಿಂದ ಚೋಳ ದೇಶಕ್ಕೆ ದಯಮಾಡಿಸಿ ಆ ದೇಶದಲ್ಲಿರುವ ಜೈನ ಮತಸ್ತರಿಗೆ ಶಾಸ್ತ್ರಮುಖದಿಂದ ಒಡಂಬಡಿಸಿ ಲಿಂಗ ಧಾರಣವಂ ಮಾಡಿಸಿ ಆ ಸೀಮೆಯಲ್ಲಿರುವ ಚಿದಂಬರ ಮುಂತಾದ ಸಕಲ ಕ್ಷೇತ್ರಂಗಳಿಗೆ ದಯಮಾಡಿಸಿ ಅಲ್ಲಿರುವ ಭಕ್ತಮಹೇಶ್ವರರಿಗೆ ಷಟ್ ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವಂ ತೋರುತ್ತ ಅರುಣಾಚಲ ಪರ್ವತಕ್ಕೆ ಚಿತ್ತೈಸಿ ಅಲ್ಲಿರುವ ಅರುಣಾಚಲೇಶ್ವರ ಉಣ್ಣಾಮಲೆ ಅಮ್ಮನವರ ಬಳಿಗೆ ಹೋಗಲು ಅಮ್ಮನವರು ಪ್ರತ್ಯಕ್ಷವಾಗಿ ನೀವು ನಿಮ್ಮ ಗಣಸಮೂಹದೊಡನೆ ನಮ್ಮ ಕ್ಷೇತ್ರದಲ್ಲಿರಬೇಕೆಂದು ಅಪ್ಪಣೆಯಂ ಕೊಟ್ಟು ಅದೃಶ್ಯವಾಗಲು ಅದರಿಂದ ಅದೇ ಪರ್ವತದಲ್ಲಿರುವ ಗವಿಯಲ್ಲಿ ತಮ್ಮ

ಗಣಂಗಳ ಸಮೇತನಾಗಿ ಅಲ್ಲಿರ್ದು ಲಿಂಗಪೂಜಾ ಜಂಗಮದಾಸೋ
ಹವಂ ಮಾಡುತ್ತ ಇರುವಲ್ಲಿ ಆ ಗಣಂಗಳಲ್ಲಿ ರುದ್ರಮುನಿಸ್ವಾಮಿಗಳಿಗೆ
ತಮ್ಮ ಶಿವಾನುಭವ ಚರಂತಿಗೆ ಪಟ್ಟವಂ ಮಾಡಿ ತಾವು ಅಲ್ಲಿಯೇ ನಿರ್ವ
ಯಲಾದರು. ಇವರ ತೋರಗದ್ದಿಗೆಯು ತಿರುಣಾಮಲೆಯಲ್ಲಿ ಇರುತ್ತದೆ. ಆ
ಗವಿಗೆ ಕೆಂಗ ನಮಶ್ಶಿವಾಯರ ಗವಿ ಎನ್ನುತ್ತಾರೆ. ಉಣ್ಣಾಮಲೆ ಅಮ್ಮ
ನವರ ಅಪ್ಪಣೆಯಿಂದ ಸ್ವಾಮಿಗಳು ಗುಡ್ಡದ ಸಿಲೆಯಲ್ಲಿ ಆ ಗವಿಯ
ಮುಂದೆ ಬಾವಿ ತೆಗೆಯಿಸಲು ಆ ಬಾವಿಯಲ್ಲಿ ಉದಕವು ಬಂದಿದ್ದರಿಂದ
ಇವತ್ತಿಗು ಆ ಉದಕಕ್ಕೆ ಉನ್ನಾಮಲೆ ತೀರ್ಥವೆನ್ನುತ್ತಾರೆ. ಆ ತೀರ್ಥ
ದಲ್ಲಿ ಅನೇಕ ಜನರು ಇವೊತ್ತಿಗೂ ಸ್ನಾನವಂ ಮಾಡಿ ಪಾಪವಂ ಕಳೆ
ದುಕೊಳ್ಳುತ್ತಾರೆ. ಇದಕ್ಕೆ ಆ ಕ್ಷೇತ್ರದ ಸ್ಥಲಪುರಾಣವೇ ಸಾಕ್ಷಿಯು.

---

## ರುದ್ರಮುನಿಸ್ವಾಮಿಗಳು

ಈ ೧೧ ನೆಯ ಪಟ್ಟದ ರುದ್ರಮುನಿಸ್ವಾಮಿಗಳು ತಮ್ಮ ಗಣಸ
ಮೂಹದಲ್ಲಿ ಗುರುನಮಃಶ್ಶಿವಾಯರೆಂಬ ಗುರುಬಸವದೇವರನ್ನು ಚಿದಂಬ
ರದಲ್ಲಿರುವ ಮಠದಲ್ಲಿರುವುದೆಂದಾಜ್ಞಾಪಿಸಿ ಮತ್ತೊಬ್ಬ ಶಿವಜ್ಞಾನಿ ಎಂಬ
ವರಿಗೆ ಸಂಜಿರುಜನ ಭಕ್ತಮಠದಲ್ಲಿರುವುದೆಂದು ನಿರೂಪಿಸಿ ತಿರುಣಾಮಾಲೆ
ಯಲ್ಲಿರುವ ತಮ್ಮ ಮಠದಲ್ಲಿ ಶಂಕರೇಶನೆಂಬವರಿಗೆ ಇರುವುದೆಂದಾಜ್ಞಾ
ಪಿಸಿ ಆ ಮೇಲೆ ಬಮ್ಮಯ್ಯಪಾಳ್ಯದ ಪಾಲೈಯ್ಯದೇವರು ಪುಲಚೇರಿಯ
ಪಾದಪೂಜ ಅಂಬಲರೆಂಬ ಶಿವಪ್ರಕಾಶರು ಮುಂತಾದ ಗಣಂಗಳಿಗೆ
ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವನಿತ್ತು ಆ ದೇಶ
ದಲ್ಲಿ ಅನೇಕ ಮಹಿಮೆಗಳಂ ತೋರಿ ಪರಮತಸ್ತರಂ ಗೆಲಿದು ಶಿವಮ
ತವಂ ಉದ್ಧರಿಸುತ್ತ ಆ ದೇಶವಂ ಸಂಚರಿಸಿ ಆ ಮೇಲೆ ತೀರ್ಥಮಲೆಗೆ
ಬಂದು ಅಲ್ಲಿಯ ಶೈವಗಣವರಗೆ ವೀರಶೈವ ದೀಕ್ಷೆಯಂ ಮಾಡಿಸಿ ಅಲ್ಲಿಂದ
ಹದ್ದನಾಡಸೀಮೆ ಎಳಂದೂರು ಮುಂತಾದ ದೇಶಂಗಳನ್ನು ನೋಡುತ್ತ
ಅಲ್ಲಿಯ ಶಿವಭಕ್ತರಿಂ ಕಾಣಿಕೆಯಂ ಒಪ್ಪಿಸಿಕೊಂಡು ಆ ನಂತರ ನಿಡು
ಗಲ್ಲಿಗೆ ದಯಮಾಡಿಸಿ ಅಲ್ಲಿಯ ವಾಲ್ಮೀಕಿಯ ಕುಲದರಸು ಭಕ್ತನಾಗಲು
ಅವನ ಭಕ್ತಿಯಿಂದ ಆ ಸ್ಥಲದಿ ಲಿಂಗಪೂಜಾ ಜಂಗಮದಾಸೋಹದೊ
ಡನೆ ಇದ್ದು ಅಲ್ಲಿಯ ಬಸವೇಶ್ವರನ ವರ ಕರುಣದಿಂದ ಶರಣಲೀಲೆಯಂ



ಪೇಳಿದ ಚನ್ನಪ್ಪಯ್ಯಗೆ ಜ್ಞಾನೋಪದೇಶವಂ ನಿತ್ತು ಆ ಬಳಿಕ ಅನೇಕ ಮಹಿಮೆಗಳಂ ತೋರಿ ಅಲ್ಲಿಂದ ನಾಯಕನ ಹಟ್ಟಿಗೆ ದಯಮಾಡಿಸಿ ಅಲ್ಲಿಯ ವಾಲ್ಮೀಕ ಕುಲದವರಿಗೆ ಒಲಿದು ಅಲ್ಲಿಯ ಶಿವಭಕ್ತರ ಭಕ್ತಿಯಿಂ ಅಲ್ಲಿ ಇರ್ದು ಅಲ್ಲಿಯೇ ಚತುರ್ವರ್ಣದವರಿಗೆ ಮಹತ್ವವಂ ತೋರಿ ಅವರನ್ನು ಭಕ್ತರನ್ನಾಗಿ ಮಾಡಿಕೊಂಡು ಅಲ್ಲಿಯೇ ತಮ್ಮ ಶಿವಾನುಭವ ಚರಂತಿಗೆ ಪಟ್ಟವಂ ಬಸವ ಪ್ರಭುಸ್ವಾಮಿಗಳಿಗೆ ಮಾಡಿ ತಾವು ಅದೇ ಸ್ಥಲದಿ ನಿರ್ವಯಲಾದರು. ಇವರ ತೊರಗದ್ದಿಗೆ ನಾಯಕನಹಟ್ಟಿಯಲ್ಲಿ ಇರುತ್ತದೆ. ಇವರು ಮಹಿಮಾಪುರುಷರಾದ್ದರಿಂದ ಇವರ ರಥೋತ್ಸವವು ಇವೊತ್ತಿಗು ಆಗುತ್ತದೆ. ಇವರು ಆ ಊರಲ್ಲಿ ತಿಪ್ಪೆ ಇದ್ದ ಸ್ಥಲದಲ್ಲಿಯೇ ಮಠವಂ ಕಟ್ಟಿಸಿ ಯೋಗಸಮಾಧಿಯಲ್ಲಿ ಮೂರ್ತ ಮಾಡಿದ ಕಾರಣದಿಂ ತಿಪ್ಪೆ ರುದ್ರಸ್ವಾಮಿಗಳೆಂಬ ರೂಢನಾಮವಾಗಿದೆ. ಇದಕ್ಕೆ ನಾಯಕನ ಹಟ್ಟಿಯಸ್ಥಲದಲ್ಲಿ ಇವರ ಸ್ಥಲಪುರಾಣವೆ ಸಾಕ್ಷಿಯು.

---

## ಬಸವ ಪ್ರಭು ಸ್ವಾಮಿಗಳು.

ಈ ೧೨ ನೆಯ ಶಿವಾನುಭವ ಚರಂತಿಗೆ ಪಟ್ಟದ ಬಸವಪ್ರಭುಸ್ವಾಮಿಗಳು ೭೨ ಬಿರುದುಗಳು ಮುಂತಾದ ಗಣ ಸಂದಣಿಯಿಂದ ಕೆಳದಿ ದೇಶ ಮುಂತಾದ ಸಕಲ ದೇಶಂಗಳಂ ಸಂಚರಿಸುತ್ತ ತಿರುಗಿ ಬಿದ್ದ ಭಕ್ತರಿಗೆ ಬಹಿಷ್ಕಾರವಂ ಕೊಡಿಸುತ್ತ ಮತ್ತವರು ಶರಣಾಗತರಾದಲ್ಲಿ ಅಪರಾಧಗಾಣಿಕೆಯಂ ತಕ್ಕೊಳ್ಳುತ್ತ ಶಿವಭಕ್ತರು ಮುಂತಾದ ಗಣಂಗಳಿಗೆ ಸದಾಚಾರವಂ ನೆಲೆಗೊಳಿಸಿ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷ ಮಾರ್ಗವನೀವುತ್ತ ಅನೇಕ ಮಹಿಮೆಗಳಂ ತೋರಿ ಹಿರೆಸೂರು ಕಿರೆಸೂರಿಗೆ ಚಿತ್ತೈಸಿ ಅಲ್ಲಿ ತಮ್ಮ ಕುರುಹುಗಳಂ ಇಟ್ಟು ಅಲ್ಲಿಂದ ಹುಕ್ಕೇರಿ ನಾಡಿಗೆ ದಯಮಾಡಿಸಿ ಅಲ್ಲಿರುವ ಜೈನ ಮತಸ್ತರಿಗೆ ಶಾಸ್ತ್ರ ಮುಖದಿಂ ಶಿವಮತವೆ ವಿಶೇಷವೆಂದು ಒಡಂಬಡಿಸಿ ಅವರುಗಳ ಭಕ್ತರಂ ಮಾಡಿಕೊಂಡು ಅಲ್ಲಿಂದ ಹನಗಂಡಿಯೆಂಬ ಗ್ರಾಮಕ್ಕೆ ಚಿತ್ತೈಸಿ ಅಲ್ಲಿರುವ ಜೈನ ಅರಸನಿಗೆ ಲಿಂಗಧಾರಣವಂ ಮಾಡಿಸಿ ಆ ಮೇಲೆ ತೇರಿದಾಳವೆಂಬ ಊರಿಗೆ ದಯ ಮಾಡಿಸಿ ಅಲ್ಲಿಯ ಭಕ್ತಗಣಂಗಳನ್ನು ಕರೆ

ಯಿಸಿಕೊಂಡು ತಮ್ಮಯ ಶಿವಾನುಭವ ಚರಂತಿಗೆಯನ್ನು ಆದಿ ಲಿಂಗೇಶ
ನೆಂಬ ಗಣವರರಿಗೆ ಮಾಡಿ ಅವರಿಗೆ ತಮ್ಮಯ ೭೨ ಬಿರುದುಗಳು
ಗಣಸಮೂಹವಂ ಕೊಟ್ಟು ಕಳುಹಿಸಿ ಆ ನಂತರ ಅಲ್ಲಿಯ ಭಕ್ತರ
ಭಕ್ತಿಯೊಳು ಸ್ವಲ್ಪ ದಿವಸವಿರ್ದು ಆ ಬಳಿಕ ಅಲ್ಲಿಯ ದೇವಭಕ್ತರ ಕರೆ
ಯಿಸಿಕೊಂಡು ಅವರಿಗೆ ತಾವು ಕಾಯ ಸಹಿತವಾಗಿ ಈ ಸ್ಥಳದಿ ನಿರ್ವ
ಯಲಾಗುವೆವು. ನಾಳಿನ ಉದಯಕ್ಕೆ ನೀವು ಸರ್ವರೂ ಬಾಹುದು ಎಂದು
ನಿರೂಪವಾಗಲು ಆ ಕೂಡಲೆ ಸಮಸ್ತರು ಸಾಷ್ಟಾಂಗವೆರಗಿ ಸ್ವಾಮಿ
ಪಾದವು ಕಾಯ ಸಹಿತವಾಗಿ ನಾಳಿನ ಉದಯಕ್ಕೆ ಸಾಂಬ ಲೋಕಕ್ಕೆ
ದಯ ಮಾಡಿಸಿದರೆ ತಮ್ಮಯ ಕುರುಹು ಏನಾದರೂ ಒಂದು ದಯಪಾ
ಲಿಸಿದರೆ ಅವನ್ನು ನಾವು ಪೂಜಿಸಿಕೊಂಡು ನಮ್ಮ ವಂಶ ಪರಂಪರೆಯಾಗಿ
ಕೃತಾರ್ಥರಾಗುವೆವು. ಎಂದು ಬಿನ್ನಯಿಸಿಕೊಳ್ಳಲು ನಿರ್ವಯಲಾಗುವ ಸಮ
ಯದಿ ತಮ್ಮಯ ಕಮಂಡಲುವಾದ ಮಗಿಯನ್ನು ಪಾವುಗೆ ಬೆತ್ತವ ಸಹಿತವಾಗಿ
ಕೊಟ್ಟು ಸಮಸ್ತರಿಗೆ ಆಶೀರ್ವಾದವಂ ಮಾಡಿ ಉರಿಕರ್ಪೂರದಂತೆ ನಿರ್ವಯ
ಲಾದರು. ಆದೆ ಸ್ಥಳದಿ ಮಠವಂ ಕಟ್ಟಿ ಶೂನ್ಯ ಪೀಠವೆಂಬ ಗದ್ದುಗೆಯಂ
ನಿರ್ಮಿಸಿ ಅದರ ಮೇಲೆ ಮಗಿಯಂ ಬೆತ್ತಪಾವುಗೆಯಂ ನಿರಿಸಿ ಇವೊತ್ತಿಗು
ಪೂಜಿಸುವರು. ಆ ಸ್ಥಳದಲ್ಲಿ ಈವೊತ್ತಿಗು ಅನೇಕ ಪೂಜೋತ್ಸಾಹಂಗಳು
ನಡೆಯುವವು. ಇವರ ತೊರಗದ್ದಿಗೆ ತೇರಿದಾಳದಲ್ಲಿರುತ್ತದೆ. ಆ ಮಠದಲ್ಲಿ
ಪ್ರಭುಸ್ವಾಮಿಗಳವರ ಹೆಸರಿನಿಂದ ಮಗಿಯನ್ನಿಟ್ಟು ಪೂಜಿಸುವದರಿಂ
ಮಗಿಪ್ರಭುವೆಂಬ ರೂಢನಾಮವಾಗಿದೆ. ಇದಕ್ಕೆ ಇವರ ಸ್ಥಲಪುರಾಣವೆ
ಸಾಕ್ಷಿಯು.

---

## ಆದಿಲಿಂಗ ಸ್ವಾಮಿಗಳು

ಈ ೧೩ ನೆಯ ಪಟ್ಟದ ಆದಿಲಿಂಗ ಸ್ವಾಮಿಗಳವರು ತಮ್ಮ ಗಣತಿಂಥಿಣಿ
ಯೊಡನೆ ಆ ದೇಶವಂ ಸಂಚರಿಸುತ್ತ ಸೂಗಲು ಕ್ಷೇತ್ರಕ್ಕೆ ದಯಮಾ
ಡಿಸಿ ಅಲ್ಲಿ ಮುರುಗೋಡು ಮುಂತಾದ ಸಮೀಪ ಗ್ರಾಮದ ಭಕ್ತರ
ಭಕ್ತಿಯೊಡನೆ ಲಿಂಗ ಪೂಜಾ ಜಂಗಮದಾಸೋಹವಂ ಮಾಡುತ್ತ ಅಲ್ಲಿ
ಇರ್ದು ಆ ಮೇಲೆ ಕಡಕೊಳ್ಳದ ಸಮೀಪದಲ್ಲಿರುವ ಗೊಡಚಿಯ ಹಳ್ಳದ
ದಂಡೆಯಲ್ಲಿರುವ ಗಿಡದ ಹುತ್ತದಲ್ಲಿ ಮಡಿವಾಳ ಮಾಚಿದೇವರು ಕಲ್ಯಾ



ಣದಿಂ ಶ್ರೀ ಚನ್ನಬಸವ ರಾಜ ದೇವರು ಮುಂತಾದ ಪ್ರಮಥರಂ ಉಳಿ
ವೆಗೆ ಕಳುಹಿಸಿ ಅವರ ಅಪ್ಪಣೆಯಂ ತೆಗೆದುಕೊಂಡು ದೇವರಹಿಪ್ಪರಿಗೆಗೆ
ದಯಮಾಡಿಸುವಾಗ ಆ ಹುತ್ತದಿ ಚಿಕ್ಕ ಗುಡಿಯಂ ಕಟ್ಟಿ ಆ ಗುಡಿ
ಯಲ್ಲಿ ಮಡಿವಾಳೈಯ್ಯಗಳು ತಮ್ಮ ವೀರೇಶನಂ ಸ್ಥಾಪಿಸಿ ದಯಮಾಡಿ
ಸಿದ ಆ ಗೊಡಚಿ ವೀರೇಶನ ಸ್ಥಲಕ್ಕೆ ಚಿತ್ತೈಸಿ ಆ ವೀರೇಶನ ದೇವಾಲಯದಿ
ಗಣಪರ್ವವಂ ಮಾಡಿಸಿ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವಂ ಚನ್ನ
ವೀರಸ್ವಾಮಿಗಳವರಿಗೆ ಮಾಡಿ ಆ ಮೇಲೆ ತೊರಗಲ್ಲಿಗೆ ಸಮೀಪವಾದ
ಮೇಗುಂಡಿಕೊಳ್ಳವೆಂಬ ಸರೋವರದಲ್ಲಿರುವ ತಿರುಕಾಮೇಶ್ವರನೆಂಬ ಲಿಂಗದ
ಕ್ಷೇತ್ರದಿ ಶಿವಪೂಜಾನುಷ್ಠಾನದಲ್ಲಿ ನಿಷ್ಠಾಪರರಾಗಿ ಅಲ್ಲಿ ಇರಲು ಈ
ವಾರ್ತೆಯಂ ಆ ಸೀಮೆಯ ಭಕ್ತರು ಕೇಳಿ ದಿನಚರಿ ಅಲ್ಲಿಗೆ ಬಂದು
ಗಣತೃಪ್ತಿಯಂ ಮಾಡಿ ಮಾಡಿ ಹೋಗುತ್ತಿರಲು ಆ ಸೀಮೆಯಲ್ಲಿ ಮಕ್ಕ
ಳಿಲ್ಲದ ಬಂಜೆಯರು, ಕ್ಷಯರೋಗ ಮುಂತಾದ ಅನೇಕ ರೋಗ ಪೀಡಿ
ತರು, ಪಿಶಾಚ ಬ್ರಹ್ಮಹತ್ಯ ಹಿಡಿದ ಜನರು ಬಂದು ಸ್ವಾಮಿಗಳವರಿಗೆ
ಬೇಡಿಕೊಂಡು ಅಪ್ಪಣೆ ಪ್ರಕಾರ ಕೂಪಗಳಲ್ಲಿಯ ಸರೋವರದ ಉದ
ಕದಿ ಸ್ನಾನವಂ ಮಾಡಿ ಭಸ್ಮವಂ ಧರಿಸಿಕೊಳ್ಳಲು ದೋಷವು ಪರಾಭ
ವವಾಗಲು ಮಕ್ಕಳಿಲ್ಲದವರಿಗೆ ಮಕ್ಕಳಾಗಲು, ಈ ವಾರ್ತೆಯಂ ಕೇಳಿ
ಜನರು ಪರಿಸೆಯಾಗಿ ಬಹಳ ಬರಲಿಕ್ಕೆ ಕಾರಣವಾದ್ದರಿಂದ ಆ ಸ್ಥಳವಂ
ಬಿಟ್ಟು ಕಲ್ಲೂರ ಬಳಿಯಲಿರುವ ಗುಡ್ಡಕ್ಕೆ ದಯಮಾಡಿಸಿ ಆ ಸೀಮೆಯ
ಭಕ್ತರುಗಳಂ ಕರತರಿಸಿ ಅವರಿಗೆ ತಾವು ಕಾಯಗೂಡಿ ಕೈಲಾಸಕ್ಕೆ
ನಾಳಿನ ದಿನದಿ ಪೋಗುವೆವು ಎಂದು ಅಪ್ಪಣೆಯಂ ಕೊಡಲು ಅಲ್ಲಿಯ
ಭಕ್ತರುಗಳು ಶರಣಾಗತರಾಗಿ ತಾವು ನಮಗೆ ಪೂಜೆಮಾಡಿ ಪಾದದ
ಸ್ಮರಣೆ ಮಾಡುವುದಕ್ಕೆ ಏನಾದರೂ ಒಂದು ಕುರುಹಂ ಕೊಟ್ಟು
ಚಿತ್ತೈಸುವುದೆಂದು ಬಿನ್ನಯಿಸಿಕೊಳ್ಳಲು ಆ ಕೂಡಲೇ ತಾವು ಧರಿಸುವ
ಭಸ್ಮದ ಗಟ್ಟಿಯಾದ ಸಿದ್ಧೇಶನನ್ನು ಆಶೀರ್ವಾದವಂ ಮಾಡಿ ತಾವು
ಅದೇ ಗುಡ್ಡದಲ್ಲಿ ನಿರ್ವಯಲಾದರು. ಅದೇ ಸ್ಥಳದಲ್ಲಿ ಭಕ್ತರುಗಳು
ಗದ್ದಿಗೆಯಂ ರಚಿಸಿ ಅದರ ಮೇಲೆ ಆ ಭಸ್ಮದ ಗಟ್ಟಿಯಾದ ಸಿದ್ಧೇಶ್ವ
ರನಂ ಪ್ರತಿಷ್ಠಿಸಿ, ಕಲ್ಲು ಮಠವಂ ಕಟ್ಟಿಸಿ ಆ ಸಿದ್ಧೇಶ್ವರನನ್ನು ಪೂಜೋ
ತ್ಸಾಹಂಗಳಂ ಮಾಡಲು ಆ ಸಿದ್ಧೇಶ್ವರನು ಶಿಲಾಮೂರ್ತಿಯಾಯಿತು.
ಇವೊತ್ತಿಗೂ ಆ ಸೀಮೆ ಭಕ್ತರುಗಳು ಆ ಮಠದಲ್ಲಿರುವ ಲಿಂಗದ
ಪೂಜೆ ಮುಂತಾದ ಗಣತೃಪ್ತಿಗಳಂ ಮಾಡುತ್ತಾರೆ. ಈ ಸಿದ್ಧೇಶ್ವರನಾದ

ಲಿಂಗಕ್ಕೆ ಸಿದ್ಧಲಿಂಗವೆಂಬ ನಾಮವಾಯಿತು. ಇವರ ತೋರ ಗದ್ದಿಗೆಯು ಕಲ್ಲೂರಲ್ಲಿರುತ್ತದೆ. ಇದಕ್ಕೆ ಇವರ ಸ್ಥಲಪುರಾಣವೇಸಾಕ್ಷಿಯು.

---

## ಚನ್ನವೀರಸ್ವಾಮಿಗಳು

ಈ ೧೪ ನೆಯ ಪಟ್ಟದ ಚನ್ನವೀರಸ್ವಾಮಿಗಳವರು ತಮ್ಮ ಘನಸಹಿತ ೭೨ ಬಿರುದುಗಳಿಂದ ಮಲೆದೇಶಕ್ಕೆ ದಯಮಾಡಿಸಿ ಅಲ್ಲಿಯ ಭಕ್ತಮಹೇಶ್ವರರಿಗೆ ಷಟ್‌ಸ್ಥಲಜ್ಞಾನೋಪದೇಶವಂ ಮಾಡಿ ಭಕ್ತಮಾಹೇಶ್ವರರ ಭಕ್ತಿಗಳಿಂದ ಕೊಟ್ಟ ದ್ರವ್ಯಂಗಳಂ ಗಣತೃಪ್ತಿಗಳಿಗೆ ವೆಚ್ಚಮಾಡುತ್ತ ತಾವು ಭಕ್ತಿಜ್ಞಾನ ವೈರಾಗ್ಯವುಳ್ಳ ಘನಮಹಿಮೆಯುಳ್ಳವರಾಗಿ ದೇಶಂಗಳನ್ನು ಸಂಚರಿಸುತ್ತ ಸುಗೋಲಾಶ್ರಮವಾದ ಸೊಗಲಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿಯ ದೇವಭಕ್ತರ ಭಕ್ತಿಯಿಂದ ಆ ಕ್ಷೇತ್ರದಿ ಲಿಂಗಪೂಜಾ ಜಂಗಮದಾಸೋಹದೊಡನೆ ಲಿಂಗನಿಷ್ಠಾಪರರಾಗಿ ಇದ್ದ ಈ ವಾರ್ತೆಯಂ ಅಗಸ್ತ್ಯಾಶ್ರಮವಾದ ಮುನಿಪಲ್ಲಿಯೆಂಬ ಗ್ರಾಮವಿರುವ ಹಾಸ್ಯಕಟಪರ್ವತದ ತಟಯಲ್ಲಿರುವ ಪಂಚಲಿಂಗೇಶ್ವರನ ದೇವಾಲಯವನ್ನು ಆ ಸೀಮೆ ಭಕ್ತರ ಭಕ್ತಿಯಿಂದ ದ್ರವ್ಯವಂ ಸಂಪಾದಿಸಿ ಜೀರ್ಣೋದ್ಧಾರವಂ ಮಾಡಿಸಿದ. ಕಕುದ್ಗಿರಿಯೆಂಬ ಶಿವಗಂಗೆಯ ಹೊನ್ನಮ್ಮನ ಗವಿಯಮಠದ ಸೂತ್ರಿಕರಾದ ರುದ್ರಮುನಿದೇವರೆಂಬ ಚರಮೂರ್ತಿಗಳು ಆ ದೇವಸ್ಥಾನದಲ್ಲಿಯೇ ಆ ಸ್ಥಲದ ದೇವಭಕ್ತರ ಭಕ್ತಿಯಿಂದ ಮಠವಂ ಕಟ್ಟಿಸಿಕೊಂಡು ಅದೇ ಮಠದಲ್ಲಿ ಲಿಂಗಪೂಜಾ ಜಂಗಮತೃಪ್ತಿಯಂ ದಿನಚರಿಯಲ್ಲಿ ಮಾಡುತ್ತ ಒಂದು ದಿವಸ ಆ ಸೀಮೆಯ ಭಕ್ತರುಗಳಂ ಕರೆತರಿಸಿ, ಜಗದ್ಗುರುಗಳಾದ ಪ್ರಭುವಂಶೋದ್ಭೂತರಾದ ಶೂನ್ಯಸಿಂಹಾಸನಾಧೀಶ್ವರ ಚನ್ನವೀರಸ್ವಾಮಿಗಳು ಸೊಗಲ ಕ್ಷೇತ್ರದಿ ಇರುವರು ಎಂದು ಈ ವಾರ್ತೆಯನ್ನು ತಾವು ಕೇಳಿರ್ದುದಂ ಪೇಳಿ ಆ ಮೇಲೆ ರುದ್ರಮುನಿದೇವರು ಸಮಸ್ತ ಭಕ್ತರುಗಳಂ ಕರಕೊಂಡು ಸೊಗಲ ಕ್ಷೇತ್ರಕ್ಕೆ ಹೋಗಿ ಫಲಪುಷ್ಪಂಗಳಂ ಸ್ವಾಮಿಗಳವರ ಸನ್ನಿಧಿ ಸಮ್ಮುಖದಿ ಇಟ್ಟು ಸಾಷ್ಟಾಂಗವೆರಗಿ ಬಿನ್ನಹಂ ಮಾಡಿ ಸ್ವಾಮಿಗಳವರ ಆಂದೋಳಿಕ, ವ್ಯಾಸನತೋಳು, ಹಗಲುದೀವಟಿಗೆ, ಮುಖತೋರಣ, ಶ್ವೇತಛತ್ರ, ಮುಂತಾದ ೭೨ ಬಿರುದುಗಳಿಂದ ಗಣಸಂದಣಿಯಿಂದ ಉತ್ಸಾಹಂಗೊಳ್ಳುತ್ತ ಮುನಿಪಲ್ಲಿಯ ಪಂಚಲಿಂಗೇಶ್ವರನ ದೇವಸ್ಥಾನದಿ ಇರುವ ತಮ್ಮ ಮಠಕ್ಕೆ ಕರಕೊಂಡು ಹೋಗಿ ಮಹಾಪ್ರಸ್ತವಂ ಮಾಡಿಸಿ ಸ್ವಾಮಿಗಳವರ ಶೋಡಶೋಪಚಾರಂಗಳಿಂ ಪೂಜೆಯಂ ಮಾಡಿ ಗಣತೃಪ್ತಿಯಾದ ಬಳಿಕ ಆ ಪಂಚಲಿಂಗೇಶನ ದೇವಾಲಯದಲ್ಲಿ ಬಸವೇಶ್ವರನ ಪುರಾಣ ಪ್ರಾರಂಭವಂ ಮಾಡಿಸಿ ದಿನಚರಿ ಭಕ್ತಗಣಂಗಳು ಪುರಾಣಶ್ರವಣದುದ್ದಿಶ್ಯ ಬರಲು ನಿತ್ಯದಲ್ಲು ಸಾವಿರಾರು ಗಣತೃಪ್ತಿ ನಡೆವಂತೆ ಹುಪ್ಪಾಲಿಯೆಂಬ ಹೂಲಿಯ ಮಠಸ್ಥರಾದ ಪಂಚವಣ್ಣಿಗೆಯ ನಂಜನಾಚಾರ್ಯರೆಂಬ ಗಣವರನಿಗೆ ನೇಮಿಸಲು ಆ ಸೀಮೆ ಭಕ್ತರುಗಳು ಪುರಾಣದ ವೆಚ್ಚ ನೇಮಿಸಿಕೊಂಡು ದಾಸೋಹ ನಡೆವುದಕ್ಕೆ ಅನುಕೂಲವಾಯಿತು. ಆ ಮೇಲೆ ರುದ್ರಮುನಿದೇವರು ಮಹಾಸ್ವಾಮಿಗಳಾದ ಚನ್ನವೀರಸ್ವಾಮಿಗಳವರಿಂದ ಷಟ್‌ಸ್ಥಲಜ್ಞಾನೋಪದೇಶವಂ ಪಡೆದು ಅಂಗಲಿಂಗೈಕ್ಯ ಸಾಮರಸ್ಯವಂ ತಿಳಿಯಪಟ್ಟವರಾಗಿ ಗುರುಸೇವೆಯಲ್ಲಿ ತತ್ಪರರಾಗಿ ಗುರುಶಿಷ್ಯರೀರ್ವರು ಭಕ್ತಗಣಸಮೂಹದೊಡನೆ ಪುರಾಣಶ್ರವಣವಂ ಮಾಡುತ್ತ ಲಿಂಗಪೂಜಾ ಜಂಗಮದಾಸೋಹವ ಮಾಡುವಲ್ಲಿ ಒಂದುದಿನ ಸಾವಿರಾರು ಗಣತೃಪ್ತಿಗೆ ಘೃತವು ಸಾಲದಿರಲು ಈ ವಾರ್ತೆಯ ಸ್ವಾಮಿಗಳವರು ಕೇಳಿ ತಮ್ಮ ದೇವಾಲಯದ ಹತ್ತಿರ ಇರುವ ಮಲಾಪಹರಿ ಎಂಬ ನದಿಯ ಉದಕವಂ ತರಿಸಿ ತಮ್ಮ ಪರುಷದೃಷ್ಟಿಯಿಂ ನೋಡಲು ತುಪ್ಪವಾಯಿತು. ಆ ತುಪ್ಪದಿಂದಲೆ ಭಕ್ತಗಣವರರ ತೃಪ್ತಿ ಆಗಲು ಈ ವಾರ್ತೆಯು ಲೋಕಪ್ರಸಿದ್ಧವಾಗಲು ಇದನು ಸಕಲರು ಕೇಳಿ ಬ್ರಹ್ಮಹತ್ಯ ಪಿಶಾಚಪೀಡಿತರು, ಕುಷ್ಠರೋಗ ಮುಂತಾದ ಅನೇಕ ರೋಗಪೀಡಿತರು ಕ್ಷೇತ್ರಕ್ಕೆ ಬಂದು ಸ್ವಾಮಿಗಳ ಅಪ್ಪಣೆ ಮೇರೆಗೆ ನದಿಯಲ್ಲಿ ಸ್ನಾನವಂ ಮಾಡಿ ದಾಸೋಹದಲ್ಲಿ ಪ್ರಸಾದವಂ ತೆಗೆದುಕೊಳ್ಳಲು ರೋಗಗಳು ಮುಂತಾದ ಬ್ರಹ್ಮಹತ್ಯ ಪಿಶಾಚಗ್ರಹ ದೋಷಂಗಳು ದೂರವಾಗಿ ತಮ್ಮ ತಮ್ಮ ಗ್ರಾಮಗಳಿಗೆ ಜನಂಗಳು ಪೋದರು. ಇಂತಹ ಮಹಿಮೆಗಳು ಅನೇಕ ಸ್ವಾಮಿಗಳವರು ಮಾಡಿ ಪುರಾಣ ಮುಗಿದು ಕಡೆ ಪ್ರಸ್ತ ಮೆರವಣಿಗೆ ಆದನಂತರ ಸ್ವಾಮಿಗಳವರು ಭಕ್ತಗಣಂಗಳನ್ನು ಕರೆತರಿಸಿ ರುದ್ರಮುನಿದೇವರು ಮುಂತಾದ ಸಕಲರಿಗೆ ತಾವು ಸಾಂಬಲೋಕಕ್ಕೆ ದಯಮಾಡಿಸುವ ಸೂಚನೆಯಂ ತಿಳುಹಿಸಿ ತಮ್ಮಯ ಶಿವಾನುಭವ ಚರಂತಿಗೆ ಪಟ್ಟವನ್ನು ಗೋಸ

ಲಯುತೀಶ್ವರನೆಂಬ ಗೋಸಲಿಯ ಸಿದ್ಧೇಶ್ವರ ಸ್ವಾಮಿಗಳವರಿಗೆ ಮಾಡಿ ತಾವು ದೇವಾಲಯದಿ ಇರುವ ಮಠದಲ್ಲಿ ನಿರ್ವಯವಾಗಲು ಇದನು ನೋಡಿ ಸ್ವಾಮಿಗಳವರ ಕರಸಂಜನಿತರಾದ ರುದ್ರಮುನಿದೇವರು ಸ್ವಾಮಿಗಳವರ ಪಾದವಂ ಪಿಡಿದು ತಮ್ಮ ಲಿಂಗದಲ್ಲೆ ನಿರ್ವಯಲಾದರು. ಈ ಗುರು ಶಿಷ್ಯರೀರ್ವರ ತೋರಗದ್ದಿಗೆಗಳು ಎರಡು ಒರಗಲ್ಲೆಂಬ ತೊರಗಲ್ಲಿಗೆ ಸೇರಿದ ಮುನಿಪಲ್ಲಿಯ ಪಂಚಲಿಂಗೇಶ್ವರನ ದೇವಾಲಯದಲ್ಲಿರುವ ಮಠದಲ್ಲಿ ಇರುತ್ತವೆ. ಈಗಳೂ ನಿತ್ಯವಹ ಎರಡು ಗದ್ದಿಗೆಗಳ ಪೂಜೋತ್ಸಹಂಗಳು ನಡೆಯುತ್ತವೆ. ಇದಕ್ಕೆ ಇವರ ಸ್ಥಲಪುರಾಣವೇ ಸಾಕ್ಷಿಯು.

---

## ಗೋಸಲ ಸಿದ್ಧೇಶ್ವರ ಸ್ವಾಮಿಗಳು.

೧೫ ನೆಯ ಪಟ್ಟದ ಗೋಸಲಸಿದ್ಧೇಶ್ವರ ಸ್ವಾಮಿಗಳವರು ತಮ್ಮ ೭೨ ಬಿರುದುಗಳು ಮೊದಲಾದ ಗಣಸಂದಣಿಯಿಂದ ದೇಶಂಗಳಂ ಸಂಚರಿಸುತ್ತ ವೈಷ್ಣವಾದಿಗಳಂ ಗೆಲಿದು ಶಿವಮತವ ಉದ್ಧಾರಂಗೈವುತ್ತಿರುವಲ್ಲಿ ಅಯ್ಯಾವಳ್ಳಿ ಪುರಾಧೀಶ್ವರನಾದ ಪಂಚವಕ್ತ್ರ ಗಣೇಶ್ವರ ಈತನು ಪಟ್ಟವಕಲ್ಲು ಅಯ್ಯಾವಳ್ಳಿ ಪುರದರಸನಾದ ಗೋಮುಖ ದೈತ್ಯನು ತನ್ನ ಸೇನೆಯಿಂದ ಲೋಕಪೀಡಿತನಾದ ಕಾರಣದಿಂ ಆತನಂ ಸಂಹರಿಸಲು ಸಕಲ ದೇಶದ ರಾಜರುಗಳು ಗಣವರನ ಪ್ರತಾಪ ಮಹಿಮೆಗಳಂ ಕಂಡು ತಮ್ಮಯ ಪುತ್ರಿಯರ ಗಣವರಗೆ ಕೊಡಲು ವೀರಶೈವ ದೀಕ್ಷೆಯಂ ಮಾಡಿಸಿ ಶತಕನ್ನೆಯರಂ ವಿವಾಹವಾದನು.

### ಶೆಟ್ಟಿಗಳ ವಿವರಣೆ.

ಈ ಗಣವರನಿಂದ ಪಂಚವಾಣಿಜರು ಜನಿಸಿದರು. ಇವರ ನಾಮವು ಕೋರಿಶೆಟ್ಟಿ ೧. ಮಹಾನಾಡ ಶೆಟ್ಟಿ ೨. ವಾಲಿಶೆಟ್ಟಿ ೩. ಪಟ್ಟಣಶೆಟ್ಟಿ ೪. ಮೆಂಡಗುದ್ದಲಿಶೆಟ್ಟಿ ೫ ವಾಣಿಜರು ಪುಟ್ಟಿದರು. ಇವರಲ್ಲದೆ ಗಣವರನಿಂದ ಗುಡಾರದ ಶೆಟ್ಟಿ, ಬಣಕಾರಶೆಟ್ಟಿ, ಗುಣಹಾರಿ ಶೆಟ್ಟಿ ಇವರು ಮೂರು ವಾಣಿಜರು ಪುಟ್ಟಿದರು. ಈ ಅಷ್ಟವಾಣಿಜರು ಅವರವರ ಕಸಬುಗಳನ್ನು ಮಾಡುತ್ತ ಈಗ ಇದ್ದಾರೆ. ಇದಕ್ಕೆ ಸ್ಕಂದ ಪುರಾಣದಲ್ಲಿ ಪಂಚಮಸೃಷ್ಟಿಗ್ರಂಥ॥ಭರ್ಗೋಕರ್ಮಸ್ಯ ಸಂಭೂತೊ



ಪಂಚವಕ್ತ್ರಗಣೇಶ್ವರಃ। ಗೋಮುಖಸ್ಯ ಪರಾರ್ಥಂಚ ನೈವಗಚ್ಛಂತೀತಿ ವರ್ತಿತಃ। ತತೋದಾನವಶ್ಚೈವ ವೀರಗಂಧರ್ವ ಮಾತ್ರಜಃ। ಬಲದೇವೀ ಮಹಾರಾಣೀ ಹಸ್ತಿಜಾತೆ ಮುಖಾಲಿನಃ। ತನ್ಮುಖಾ ಲೀನ ಮಹಾಲೋಕೆ ಗಚ್ಛತಿ ಚತುರಾರ್ಥಕಂ ತದ್ವಾಣಿಜ್ಯಪ್ರಮಾಯಧಂ ಜಾಯತೆ ತದ ವಾಂಛಿತಂ ಯಥಾದರ್ವೀಕರೊಚಾತ್ರ ನಾಗಕನ್ಯ ಫಣಾಮಣಿಃ। ಶತಕನ್ಯಾಂ ಚಸಂಭೋಗಂ। ಪಂಚವಾಣಿಜ್ಯವರ್ತಿನಃ। ಕುಲಂಶಿವಕುಲಂ ಪ್ರೋಕ್ತಂ। ಗೊತ್ರಂನದಿಶಾವರ್ತಿನಃ। ಪ್ರವರಂವೀರಶೈವಶ್ಚ ಶಿಖಾಯಾಂ ಪ್ರಮಥಾನ್ವಿತಂ।

ಇವರೊಳಗೆ ಪಂಚವಾಣಿಜರೇ ಪ್ರಸಿದ್ಧರಾದರು. ಇವರ ಕಸಬಿನ ವಿವರವು, ಕೋರೀಶೆಟ್ಟಿಯು ಬಸವನ ಮುದ್ರೆ ಮುರಿಗೆಜೊಣ್ಣೆ ಸರ್ವಸಂಬಾರದ ಹಸುಬೆ ಇವುಗಳಿಂದ ವ್ಯಾಪಾರವಂ ಮಾಡಿ ತನ್ನ ಕುಟುಂಬ ಸಂರಕ್ಷಣೆ ಮುಂತಾದ ಜಂಗಮಾರ್ಚನೆ ತೃಪ್ತಿಮಾಡುವುದು. ಮಹಾನಾಡಶೆಟ್ಟಿಯು ದೇಸಾಯಿ, ದೇಶಮುಖಿ, ನಾಡಗೌಡಕಿ ನಾಡಕರಣಿಗಳಾಗಿ ಕುಟುಂಬ ಸಂರಕ್ಷಣೆ ಜಂಗಮಾರ್ಚನೆ ತೃಪ್ತಿಮಾಡುವುದು. ವಾಲಿಶೆಟ್ಟಿಯು ಬಾಸಿಂಗ ಮಹಾಲು ಮಂಟಪ ಮುಂತಾದ ಚಿತ್ರ ಕೆಲಸಂಗಳಂ ಮಾಡಿ ಕುಟುಂಬ ರಕ್ಷಣೆ ಮುಂತಾದ ಗುರುಲಿಂಗ ಜಂಗಮಾರ್ಚನೆ ಮಾಡುವುದು. ಪಟ್ಟಣಶೆಟ್ಟಿಯು ಸರಕಾರದಿಂ ಕೌಲು ಹಿಡಿದು ಪಟ್ಟಣಶಹರ ಸಂತೆಗಳ ನೆರಪಿ ವ್ಯವಹಾರವಂ ಮಾಡಿಸಿ ಕುಟುಂಬ ರಕ್ಷಣೆ ಗುರುಲಿಂಗ ಜಂಗಮಾರ್ಚನೆ ತೃಪ್ತಿಯಂ ಮಾಡುವುದು. ಮೆಂಡಗುದ್ದಲಿ ಶೆಟ್ಟಿಯು ಹೊಲತೋಟಗಳನ್ನು ಮಾಡಿ ಕುಟುಂಬ ರಕ್ಷಣೆಯಂ ಮಾಡಿ ಗುರುಲಿಂಗಜಂಗಮಾರ್ಚನೆ ತೃಪ್ತಿಯಂ ಮಾಡುವುದು. ಇನ್ನುಳಿದ ತ್ರಿವಾಣಿಜರಾದ ಗುಡಾರದ ಶೆಟ್ಟಿಯು ಶಾಲು, ಸಕಲಾತಿ ಮುಂತಾದ ಜವಳಿಗಳ ತರಿಸಿ ವ್ಯಾಪಾರವಂ ಮಾಡಿ ಕುಟುಂಬ ರಕ್ಷಣೆ ಮುಂತಾದ ಗುರುಲಿಂಗಜಂಗಮಾರ್ಚನೆ ತೃಪ್ತಿಯಂ ಮಾಡುವುದು. ಬಣಕಾರನೆಂಬ ಬಣಜಿಗಶೆಟ್ಟಿಯು ಕುಲಾಲ ರಜಕ ಮುಂತಾದ ೧೮ ಕುಲದ ಬಣಕ್ಕೆ ಸಖನಾಗಿ ಕೋಮಟಿಗಿ, ಜೋಗಾರ, ಪಾಂಚಾಳದವರು ಮುಂತಾದ ಒಂಬತ್ತು ಬಣದವರಿಗೆ ವಿರೋಧಿಯಾಗಿ ೧೮ ಕುಲ ನೂರು ಒಂದು ಜಾತಿ ನಾಲ್ಕು ವರ್ಣದವರಿಗೆ ನಿಷ್ಪಕ್ಷಪಾತಿಯಾದ ನ್ಯಾಯಾಧೀಶನಾಗಿ ಅನೇಕ ವ್ಯವಹಾರದಿಂದ ತನ್ನ ಕುಟುಂಬ ರಕ್ಷಣೆ ಮುಂತಾದ ಗುರುಲಿಂಗಜಂಗಮಾರ್ಚನೆ ತೃಪ್ತಿಯಂ ಮಾಡುವುದು. ಈ ಬಣದ ಶೆಟ್ಟಿಗೆ ಜನಿಸಿದ ಶೆಟ್ಟಿಗಳಿಗೆ ಬಣಜಿಗರೆಂಬ ನಾಮವಾಯಿತು.

ಗುಣಹಾರಿಶೆಟ್ಟಿಯು ಸದ್ಗುಣಸಂಪನ್ನನಾದ ಕಾರಣ ಇವನಿಗೆ ಪಂಚಮು ರಾದ ಶೆಟ್ಟಿಗಳು ತಮ್ಮೊಳಗೆ ಯಜಮಾನತ್ವವಂ ಕೊಟ್ಟರು. ಈ ಯಜ ಮಾನನಾದ ಶೆಟ್ಟಿಯು ವ್ಯವಹಾರವಂ ಮಾಡಿ ತನ್ನ ಕುಟುಂಬವ ರಕ್ಷಿಸಿ ಕೊಂಡು ಗುರುಲಿಂಗಜಂಗಮಾರ್ಚನೆ ಗಣ ತೃಪ್ತಿಯಂ ಮಾಡುವುದು. ಕಾರಣ ಪೇಟೆ ಮನೆಗಳಲ್ಲಿ ಶೆಟ್ಟಿ ಯಜಮಾನರೆಂಬುವರು ಇದ್ದಾರೆ. ಸಕಲ ಸೀಮೆಗಳಲ್ಲಿ ಗಣವರನ ವಂಶಸ್ಥರಾದ ಅಷ್ಟವಾಣಿಜರ ವಂಶ ಸ್ಥರು ತಮ್ಮ ತಮ್ಮ ಕಸಬುಗಳ ಮಾಡುತ್ತ ದೇಶಗಳಲ್ಲಿರುವುದೇ ಸಾಕ್ಷಿಯು.

ಈ ಹರದರಾದ ವಾಣಿಜರ ವಂಶಸ್ಥರಾದ ಬಣಜಿಗಶೆಟ್ಟರು ಬಣಕ್ಕೆ ಸಾವಿರ ಎತ್ತುಗಳ ಬೀಡಿಕೆಗಳನ್ನು ಮಾಡಿ ಗಟ್ಟಬೆಟ್ಟದ ವ್ಯಾಪಾರವಂ ಮಾಡಿಸುತ್ತಿರುವಲ್ಲಿ ದಕ್ಷಿಣದೇಶದಲ್ಲಿರುವ ಇವರ ದಲ್ಲಾಲನಾದ ಶೆಟ್ಟಿಯು ಆ ಸಾವುಕಾರರಾದ ಶಟ್ಟರಿಗೆ ಅಡಿಕೆ ಯಾಲಕ್ಕಿ ನೆಣಸು ಮುಂತಾದ ಸರಕುಗಳನ್ನು ಮೂಲಿಮಾಡಿ ಕಳಿಸಿದರೆ ಬಹಳ ಲಾಭವಾದೀತು ಎಂದು ಪತ್ರವಂ ಬರೆದ ಕಾರಣ ಕೋಟ್ಯಾವಧಿ ರೂಪಾಯಿಯ ಜೀನಸುಗಳನ್ನು ಮೂಲಿಮಾಡಿ ಎತ್ತಿನ ಬೀಡಿಕೆಗಳಿಂದ ಹರದರಾದ ಬಣಜಿಗ ಶೆಟ್ಟಿಗಳು ದಕ್ಷಿಣದೇಶವಾದ ಗಟ್ಟಗಳಿಗೆ ಹೊರಟರು. ಇವರ ಮಾರ್ಗದಲ್ಲಿರುವ ಕರ್ನಾಟಕದೇಶ ಮೈಸೂರು ಸೀಮೆಯಲ್ಲಿರುವ ಕಾವೇರಿ ನದಿಗ ಸಮೀ ಪಸ್ತವಾದ ಜಲತೃಣ ಕಾಷ್ಟಪೂರಿತವಾದ ಒಂದು ಸ್ಥಳದ ಬೈಲಿನಲ್ಲಿ ರುವ ವೃಕ್ಷಗಳ ಆಶ್ರಯದಿ ಬೀಡಿಕೆಯಾದ ಎತ್ತುಗಳ ಒಜ್ಜೆಯಂನಿಳುಹಿ ಗುಡಾರವಂ ನಿಲ್ಲಿಸಿ ಒಲೆಗಳಂ ಮಾಡಿ ಅಕ್ಕಿಗಳ ಪಾತ್ರೆಗಳಲ್ಲಿ ಹಾಕಿ ನೀರಿಂದ ಅನ್ನದ ಎಸರಿಟ್ಟು ಉರಿಹಚ್ಚಿ ಆ ನಂತರ ಆ ವಾಣಿಜರು ಎತ್ತುಗಳ ವ್ಯವಸ್ಥೆಗೆ ಹೋಗಲು ಇತ್ತ ಒಲೆಗುಂಡುಗಳಲ್ಲಿ ಒಂದು ಗುಂಡಿನಲ್ಲಿ ಹಾಲು ಹೊರಟು ಉರಿ ನಂದಿ ಆ ಹಾಲುಗಳು ಒಲೆಯಂ ಬಿಟ್ಟು ಹೊರಗೆ ಹರಿದವು. ಈ ಒಲೆ ನಂದಿದ್ದುದಂ ಹರದರು ನೋಡಿ ಈ ಒಲೆಯ ಮೇಲೆ ಇರುವ ಅನ್ನದ ಪಾತ್ರೆಯ ಉದಕವು ಉಕ್ಕಿದ ಕಾರಣ ಅಲ್ಲಿರುವ ಕಿಚ್ಚು ನಂದಿ ಇದೆ, ಉರಿಮಾಡುವ ಎಂದು ಆ ಒಲೆಯ ಬಳಿಗೆ ಒಬ್ಬ ಸೆಟ್ಟಿಯು ಬಂದು ನೋಡುವಲ್ಲಿ ಒಲೆಯಲ್ಲಿ ಇರುವ ಮೂರು ಗುಂಡುಗಳಲ್ಲಿ ಒಂದು ಅಡ್ಡಗುಂಡು ಹಾಲು ಹೊರಟು ಕಿಚ್ಚು ನಂದಿದರೂ ಆ ಗುಂಡಿನಲ್ಲಿ ಹಾಲು ಹೊರಟು ಪರಿವುತ್ತಿರಲು



ಇದ ಕಂಡು ಆ ಶೆಟ್ಟಿಯು ತನ್ನ ಬೀಡಿಕೆಯಲ್ಲಿರುವ ಸರ್ವ ಶೆಟ್ಟಿ ಗಾರರಂ ಕರೆದು ತೋರಿಸಲು ಅವರುಗಳು ನೋಡಿ ಆಶ್ಚರ್ಯವಂ ಬಟ್ಟು ಇದು ಏನು ಕಾರಣ ಒಲೆಗುಂಡಿಲಿ ಹಾಲು ಹೊರಡುತ್ತಿದೆ ಎಂದು ಮಾತಾಡುವಲ್ಲಿ ಅವರಲ್ಲಿ ವಯೋವೃದ್ಧರಾದವರು ಇದು ಅನಾದಿ ಲಿಂಗವಿದ್ದು ದೇವಾಲಯುವು ಹಾಳಾಗಿ ಈ ಲಿಂಗಕ್ಕೆ ಪೀಠವಿಲ್ಲದೆ ಗೋಳ ಕವಾದ ಈ ಗುಂಡು ಕಾಡುಗಲ್ಲೊಳಗೆ ಇದು ಒಂದು ಕಲ್ಲಾಗಿ ಇದ್ದ ಕಾರಣ ಇದು ತಿಳಿಯದೆ ಈ ಗುಂಡನು ಒಲಿಗಿಟ್ಟು ಉರಿಯಂ ಮಾಡಲು ಬೆಂಕಿಯ ಜಳಕ್ಕೆ ಈ ಗುಂಡೆಂಬ ಲಿಂಗದಿ ಅಮೃತವು ಪೊರಮಟ್ಟಿದು ಇದು ಅಮೃತೇಶ್ವರಲಿಂಗವೆಂದು ಹೆಸರನ್ನಿಟ್ಟು ಆ ಹರದರು ಆ ಲಿಂಗವಂ ತೆಗೆದು ಬೇರೆ ಗುಂಡನು ಇಟ್ಟು ಅಡಿಗೆಯನು ಮಾಡಿ ಆ ಲಿಂಗವಂ ಒಂದು ವೃಕ್ಷದ ಕೆಳಗೆ ಇಟ್ಟು ಪೂಜಿಸಿ ಜಂಗಮಾರ್ಚನೆಯಂ ಮಾಡಿ ಪಾದೋದಕ ಪ್ರಸಾದವಂ ಸಲಿಸಿ ಲಿಂಗಕ್ಕೆ ನೈವೇದ್ಯವಂ ಮಾಡಿ ಸರ್ವರ ಭೋಜನವಾದ ನಂತರ ತಾಂಬೂಲವ ಸಕಲರು ಹಾಕಿಕೊಳ್ಳುವುದಕ್ಕಾಗಿ ಅಡಿಕೆಗಳ ತರುವದಕ್ಕೆ ಒಬ್ಬ ಶೆಟ್ಟಿಯು ಅಡಿಕೆಗಳಿರ್ದ ಹೇರುಗಳಲ್ಲಿ ಕೈಹಾಕಲು ಅಡಕಿಗಳೆಲ್ಲ ಅರಳೆಯ ಕಾಯಿಗಳಾಗಿರುವುದಂ ಕಂಡು ತಮ್ಮಯ ಹೇರುಕಾರರಾದ ಶೆಟ್ಟಿಗಳಿಗೆ ಸೂಚಿಸಲು ಅವರು ತಮ್ಮ ತಮ್ಮಯ ಅಡಿಕೆಯ ಹೇರುಗಳ ಬಾಯ ಬಿಚ್ಚಿಸಿ ನೋಡಲು ಅವು ಅರ ಳೆಯ ಕಾಯಿಗಳಾಗಿದ್ದವು. ಇದ ಕಂಡು ಸಕಲ ಹರದರು ತಮ್ಮಯ ಸಮಯಾಚಾರದ ವಿರಕ್ತರಾದ ಪ್ರಭುದೇವರಿಗೆ ಸಾಷ್ಟಾಂಗವೆರಗಿ ಈ ವಿವರವಂ ಬಿನ್ನೈಸಿಕೊಳ್ಳಲು ಆ ವಿರಕ್ತರು ಆ ಲಿಂಗದ ಬಳಿಗೆ ಸಕಲ ಭಕ್ತರಾದ ವಾಣಿಜರ ಕರೆದುಕೊಂಡು ಪೋಗಿ ಆ ಲಿಂಗಮೂರ್ತಿಯ ಸಮ ಕ್ಷಮದಲ್ಲಿ ಮುಹೂರ್ತವಂ ಮಾಡಿ ಆ ಭಕ್ತರಿಗೆ ಹೇಳಿದ್ದೇನಂದರೆ, ಈ ಲಿಂಗದ ಮಹಿಮೆಯಿಂದ ನಿಮ್ಮಯ ಹೇರುಗಳಲ್ಲಿರ್ದ ಅಡಿಕೆಗಳು ಏನು ಕಾರಣ ಅರಳೀಕಾಯಿಗಳಾದವು ಎಂದರೆ ನೀವು ನಿಮ್ಮಯ ಶೆಟ್ಟಿಸಾ ಹುಕಾರರು ಬಂಧುಬಾಂಧವರು ಸಹವಾಗಿ ಈ ಸ್ಥಳಕ್ಕೆ ಕರೆಸಿಕೊಂಡು ಇಲ್ಲಿ ಈ ಲಿಂಗಕ್ಕೆ ಗುಡಿ ಗೋಪುರ ಪೇಟೆ ಬಾಜಾರ ಮುಂತಾದ ನಿಮ್ಮ ಹೆಸರಿನ ಪಟ್ಟಣವಾಗಬೇಕಾದ ಕಾರಣ ಈ ಲಿಂಗದ ಮಹತ್ವದಿಂದ ಹೀಗಾಗಿದೆ, ಪ್ರಾರ್ಥನೆ ಮಾಡಿಕೊಂಬುವುದು ಎಂದು ಅಪ್ಪಣೆ ಆಗಲು ಹರದರು ಆ ಲಿಂಗಕ್ಕೆ ಮೊದಲಿನ ಪ್ರಕಾರ ಈ ಅರಳೆಕಾಯಿಗಳು ಅಡಿ

ಕೆಗಳು ಆದರೆ ಇವುಗಳ ಲಾಭದಿಂದ ನಿನಗೆ ಗುಡಿಗೋಪುರ ಈ ಸ್ಥಳದಿ
ನಮ್ಮ ಹೆಸರಿನ ಗ್ರಾಮ ಈ ನಮ್ಮ ಸಮಯಾಚಾರದ ವಿರಕ್ತರಾದ
ಪ್ರಭುದೇವರು ಗುರುಗಳಾದ ಗೋಸಲಿಯ ಸಿದ್ಧೇಶ್ವರಸ್ವಾಮಿಗಳವರ
ಮಠವಂ ಕಟ್ಟಿಸಿ ನಿಮ್ಮ ದೇವಾಲಯ ಜಗದ್ಗುರುಗಳ ಮಠ ಇವು ಎರ
ಡಕ್ಕು ಭೂಮಿಗಾಣಿಕೆ ಮುಂತಾದವುಗಳನ್ನು ಮಾಡಿಕೊಟ್ಟು ಪೂಜೋತ್ಸ
ವಂಗಳಂ ಮಾಡುತ್ತೇವೆಂದು ಪ್ರಾರ್ಥಿಸಿ ಹರಕೆಯಂ ಕಟ್ಟಿ ಆ ಬಳಿಕ
ಪ್ರಭುದೇವರ ಅಪ್ಪಣೆಯಂ ತೆಗೆದುಕೊಂಡು ಹೇರುಗಳಲ್ಲಿ ನೋಡಲು
ಅರಳೇಕಾಯಿಗಳು ಹೋಗಿ ಅಡಕೆಗಳು ಆಗಲು ಈ ವೃತ್ತಾಂತವಂ
ತಮ್ಮ ಬಂಧುಬಾಂಧವರಿಗೆ ಪತ್ರಗಳಂ ಬರೆದು ಕಳುಹಿಸಿ ಇತ್ತಕಡೆಗೆ
ಸರಕುಗಳ ಹೇರಿಕೊಂಡು ಬೀಡಿಕೆಗಳಂ ಹೊರಡಿಸಿ ಆ ಸೀಮೆಗಳಲ್ಲಿ
ಮಾರಲು ಒಂದಕ್ಕೆ ಮೂರು ಇಮ್ಮಡಿಯಾಗಿ ಲಾಭವು ಬಂದ ಕಾರಣ
ಆ ದೇಶದ ರಾಜನಿಂ ಪಟ್ಟಣವಂ ಕಟ್ಟಲಿಕ್ಕೆ ಆ ಲಿಂಗವಿರುವ ಬೈಲು
ಸ್ಥಳವಂ ಕೌಲು ಹಿಡಿದು ತಮ್ಮಯ ಬಂಧುಬಾಂಧವರ ಕರೆಯಿಸಿ ಅನೇಕ
ದ್ರವ್ಯಗಳ ತರಿಸಿ ಆ ಸ್ಥಳದಿ ಗುಡಿ, ಗೋಪುರ, ಮಠ, ಕೆರೆ, ಬಾವಿ,
ತೋಟ, ಉಪವನ, ಪಟ್ಟಣವಂ ಕಟ್ಟಿ ಆ ಪುರಕ್ಕೆ ವಾಣಿಜ್ಯಪುರವೆಂಬ
ನಾಮವಂ ಇಟ್ಟು ಆ ಪುರದ ಹರದರಾದ ಬಣಜಿಗಶೆಟ್ಟಿ ಯಜಮಾನ
ಮುಂತಾದ ಸಕಲ ದೈವದವರು ಆ ದೇಶಮಧ್ಯದಲ್ಲಿರುವ ಗೋಸಲಿಯ
ಯತೀಶ್ವರರಾದ ಸಿದ್ಧೇಶ್ವರ ಸ್ವಾಮಿಗಳವರಿಗೆ ೭೨ ಬಿರುದುಗಳೊಡನೆ
ಉತ್ಸಹಂಗೊಳಿಸಿ ತಾವು ಕಟ್ಟಿಸಿದ ಮಠವಂ ಒಪ್ಪಿಸಿ ಆ ಮಠಕ್ಕೆ ಭೂಮಿ
ಗಾಣಿಕೆಯಂ ಮಾಡಿಕೊಟ್ಟು ಸ್ವಾಮಿಗಳವರ ಪೂಜೋತ್ಸಹಂಗಳಂ ಮಾ
ಡುತ್ತ ತಮ್ಮ ಭಕ್ತಿಯಿಂದ ಬಿಟ್ಟುಕೊಂಡರು. ಆ ನಂತರ ಸ್ವಾಮಿಗಳವರು
ಲಿಂಗಪೂಜಾ ಜಂಗಮದಾಸೋಹದೊಡನೆ ಆ ಮಠದಲ್ಲಿ ಕೆಲವು ದಿವ
ಸವಿರ್ದು ಆ ಬಳಿಕ ಆ ಹರದನಹಳ್ಳಿ ಎಂಬ ವಾಣಿಜ್ಯಪುರದ ಗೃಹ
ಸ್ಥರ ಕರೆತರಿಸಿ, ತಮ್ಮ ಶಿಷ್ಯರಾದ ಆ ಪುರದ ಶಿವಾಲಯಕ್ಕೆ ನೇಮಿ
ಸಿದ ಕ್ರಿಯಾಮೂರ್ತಿಗಳಾದ ಶಂಕರಾಚಾರ್ಯ ಸ್ವಾಮಿಗಳವರಿಗೆ ತಮ್ಮಯ
ಶಿವಾನುಭವ ಚರಂತಿಗೆ ಪಟ್ಟವಂ ಮಾಡಿ ಆ ನಂತರ ಗೋಸಲಿಯ ಸಿದ್ಧೇಶ್ವರ
ಸ್ವಾಮಿಗಳವರು ತಮ್ಮ ಕರಸಂಜಾತರಾದ ನೂರುಒಂದು ಷಟ್‌ಸ್ಥಲ ಬ್ರಹ್ಮ
ಗಳಾದ ವಿರಕ್ತಮೂರ್ತಿಗಳೊಡನೆ ಅಲ್ಲಿಂದ ದೇಶಾಟಣವಂ ಮಾಡುತ್ತ
ಶಿವಗಂಗೆ ಕ್ಷೇತ್ರಕ್ಕೆ ದಯಮಾಡಿಸಿ ಆ ಸೀಮೆಯ ಭಕ್ತರ ಭಕ್ತಿಗಳಿಂದ



ಅಲ್ಲಿ ೬೩ ಪುರಾತನರ ಏಕಾದಶ ರುದ್ರರ ಪೂಜಾರಾಧನೆಯಂ ಮಾಡಿಸಿ
ಅಲ್ಲಿಂದ ತುಮಕೂರು ಬೆಂಗಳೂರು ಸೀಮೆಯ ಪ್ರಾಂತವಲ್ಲಿರುವ ಒಂದು
ಬೆಟ್ಟಕ್ಕೆ ತಮ್ಮ ಗಣಂಗಳ ಸಮೇತವಾಗಿ ಅಲ್ಲಿಗೆ ದಯಮಾಡಿಸಿ ಆ
ಬೆಟ್ಟದ ಸಮೀಪವಾದ ಆ ತುಮಕೂರ ಮೊದಲಾದ ಸೀಮೆಯ ದೇವ
ಭಕ್ತರ ಭಕ್ತಿಯಂ ಕೈಕೊಳ್ಳುತ್ತ ಲಿಂಗಪೂಜಾ ಜಂಗಮದಾಸೋಹದೊ
ಡನೆ ಆ ಬೆಟ್ಟದಲ್ಲಿರ್ದು ಆ ಬಳಿಕ ಆ ಬೆಟ್ಟದಿ ತಮಗೆ ಒಂದು ಮಠವಂ
ಕಟ್ಟಿಸಿಕೊಂಡು ತಮ್ಮ ನೂರೊಂದು ಗಣಂಗಳಿಗು ನೂರೊಂದು ಗವಿ
ಗಳಂ ತೆಗೆಯಿಸಿ ಆ ಗವಿಗಳಲ್ಲಿ ಒಬ್ಬೊಬ್ಬ ಗಣವರರು ತಮ್ಮಯ ಇಷ್ಟ
ಲಿಂಗಪೂಜಾನೈಷ್ಠೆ ಎಂಬ ಶಿವಯೋಗದಲ್ಲಿ ದಿನಕ್ಕೆ ಒಂದು ವೇಳೆ
ಸನ್ನಿಧಿಯಲ್ಲಿ ಶಿವಾರ್ಚನೆಯಂ ತೀರಿಸಿಕೊಂಡು ಲಿಂಗಾರ್ಪಿತವಂ ಮಾಡಿ
ಕೊಂಡಿರುವುದೆಂದು ಅಪ್ಪಣೆಯಂ ಕೊಟ್ಟು ಕಳುಹಿಸಿ ತಮ್ಮಯ ಲಿಂಗ
ಪೂಜಾ ನೈಷ್ಠೆಯಿಂದ ಇರುವಲ್ಲಿ ಒಂದು ದಿವಸವು ಸ್ವಾಮಿಗಳವರ
ಶಿಷ್ಯರಾದ ಒಬ್ಬ ಗಣಂಗಳು ತಮ್ಮಯ ಗವಿಯಲ್ಲಿ ಯಾರೂ ಇಲ್ಲದೆ
ಇರುವ ವೇಳೆಯಲ್ಲಿ ತಮ್ಮ ಬಳಿಯಲ್ಲಿ ಉದಕವಿಲ್ಲದೆ ನಡುರಾತ್ರಿಯಲ್ಲಿ
ಅಗ್ಗಣೆಯ ತೃಷೆಯಾಗಿ ಕತ್ತಲಲ್ಲಿ ಉದಕದ ಬಾವಿಗೆ ಹೋಗುವುದಕ್ಕೆ
ವಯೋವೃದ್ಧರಾದ ಕಾರಣ ತ್ರಾಣವಿಲ್ಲದೆ, ಬೆಂಕಿ ಇದ್ದರೂ ದೀಪಹ
ಚ್ಚುವದಕ್ಕೆ ತೈಲವಿಲ್ಲದೆ ಅನಾನುಕೂಲವಾದ್ದರಿಂದ ಆ ವೇಳೆಗೆ ಆ ಗಣಂ
ಗಳ ದೇಹದಲ್ಲಿ ಆತ್ಮಲಿಂಗವು ಕಳವಳಗೊಂಡು ಪ್ರಾಣಾಂತ್ಯವು ಸಮೀಪಿ
ಸಲು ಆ ಗಣವರರು ತಮ್ಮಯ ಗುರುಧ್ಯಾನವಂ ಮಾಡಿದರು. ಇದು
ಮಹಾಸ್ವಾಮಿಗಳವರಿಗೆ ಅರುಹು ಆಗಿ ಕೂಡಲೆ ಸ್ವಾಮಿಗಳವರು ತಮ್ಮಯ
ಶಿಷ್ಯರಂ ಕರೆದುಕೊಂಡು ಅತಿ ಜಾಗ್ರತೆಯಿಂದ ಆ ಗಣವರನ ಬಳಿಗೆ
ದಯಮಾಡಿಸಿ ನೋಡುವಲ್ಲಿ ದೀಪ ಉದಕವಿಲ್ಲದೆ ತೃಷೆಯಿಂದ ಪ್ರಾಣಾಂತ್ಯ
ಸಮಯವಾದುದಂ ತಿಳಿದು ಉದಕವ ತರಿಸುವನಕ ವಸ್ತುವು ಇರ
ದೆಂದು ಪರಮೇಶ್ವರನ ಜಟಾಗಂಗೆಯಂ ನೆನೆದು ತಮ್ಮಯ ಮಣಪಾದದಿ
ಗುದ್ದದಿ ಇರುವ ಗವಿ ಒಳಗಿನ ಪಡೆಗೆ ಹೊಡೆಯಲು ಆ ಪಡೆಯಲ್ಲಿ
ಒಂದು ಚೆಂಬು ಹಿಡಿವಷ್ಟು ಪಡುವು ಬಿದ್ದು ಭಾಗೀರಥಿಗೆ ಸಮವಾದ
ಉದಕವು ಹೊರಡಲು ಆ ಉದಕದಿಂದ ದೀಪವಂ ಹಚ್ಚಿಸಿ ಆ ಗಣ
ವರರಿಗೆ ಸ್ನಾನ ಲಿಂಗಾಭಿಷೇಕವಂ ಮಾಡಿಸಿ ಭಸ್ಮವಂ ಧರಿಸಿ ಶಿವಮಂ
ತ್ರದೊಡನೆ ಲಿಂಗಮುಖದಿಂದ ಉದಕವಂ ಪಾನವಂ ಮಾಡಿಸಿ ಪ್ರಾಣವಂ

ಉಳಿಸಿ ಆ ನಂತರ ಅದೇ ಬೆಟ್ಟದಲ್ಲಿ ಆ ಗಣಂಗಳು ಮುಂತಾದ ಸ್ವಾಮಿಗಳವರು ನಿರ್ವಯಲಾದರು. ಇವರ ತೋರಗದ್ದಿಗೆಯು ಅದೇ ಬೆಟ್ಟದಲ್ಲಿ ಇರುತ್ತದೆ. ಈ ಬೆಟ್ಟಕ್ಕೆ ಆ ಸಿದ್ಧೇಶ್ವರ ಸ್ವಾಮಿಗಳಿಂದ ಗಂಗೆಯು ಉದ್ಭವಿಸಿದ ಕಾರಣದಿಂದ ಸಿದ್ಧಗಂಗೆಬೆಟ್ಟವೆನ್ನುತ್ತಾರೆ. ಆ ಗಂಗೋದಕದಿಂದ ಸ್ವಾಮಿಗಳು ಸಾಂಬಲೋಕ ಪ್ರಾಪ್ತವಾದ ನಂತರ ಬ್ರಹ್ಮಹತ್ಯಾದಿ ಗ್ರಹಂಗಳು ದೂರಾದವು, ಕುಷ್ಠರೋಗ ಮುಂತಾದ ಸಕಲ ರೋಗಂಗಳು ಆ ಸೀಮೆಯ ಪ್ರಜೆಗಳು ಆ ಗಂಗೆಯಿಂದ ಸ್ನಾನಪಾನಂಗಳಂ ಮಾಡಿದ್ದರಿಂದ ದೂರಾದವು. ಈ ಹೊತ್ತಿಗೂ ಆ ಬೆಟ್ಟದಲ್ಲಿ ಗಣತೃಪ್ತಿಗಳು ಅನೇಕ ಭಕ್ತಗಣಂಗಳು ಮಾಡುತ್ತಾರೆ. ಆ ಗಂಗೆಯನ್ನು ಸ್ನಾನಮಾಡದ ಅನುಚಿತ ಜನರು ಮುಟ್ಟಿದರೆ ಬತ್ತುತ್ತದೆ. ಆ ಉದಕವು ಬತ್ತಿದಲ್ಲಿ ಸ್ನಾನವಂ ಮಾಡಿದ ಭಕ್ತಗಣಂಗಳು ಪೂಜಿಸಿ ಸಿದ್ಧೇಶ್ವರಸ್ವಾಮಿಗಳವರ ಭಜಿಸಿದಲ್ಲಿ ಮೊದಲಿನಂತೆ ಉದಕವು ಬರುತ್ತದೆ. ಆ ಉದಕದಿಂದ ಹತ್ತುಸಾವಿರ ವರೆಗೂ ಗಣತೃಪ್ತಿ ಮಾಡಬಹುದು. ಇದಕ್ಕೆ ಆ ಗಂಗೆಯೇ ಸಾಕ್ಷಿಯು. ಈ ಸಿದ್ಧೇಶ್ವರ ಸ್ವಾಮಿಗಳು ಅನೇಕ ಮಹಿಮೆಯುಳ್ಳವರು ಎಂಬುದಕ್ಕೆ ಇವರ ಸ್ಥಲಪುರಾಣವೇ ಸಾಕ್ಷಿಯು.

## ಶಂಕರಾಚಾರ್ಯ ಸ್ವಾಮಿಗಳು.

೧೬ ನೆಯ ಪಟ್ಟದ ಶಂಕರಾಚಾರ್ಯ ಸ್ವಾಮಿಗಳು ಲಿಂಗಪೂಜಾ ಜಂಗಮದಾಸೋಹದೊಡನೆ ವಾಣಿಜ್ಯಪುರದ ಭಕ್ತರ ಭಕ್ತಿಯೊಡನೆ ಪ್ರಜೋತ್ಸವಂಗಳಂ ಕೈಕೊಳ್ಳುತ್ತ ಅನೇಕ ಮಹಿಮೆಗಳನುಂಟುಮಾಡಿ ಆ ನಂತರ ತಮ್ಮಯ ಶಿವಾನುಭವ ಚರಂತಿಗೆ ಪಟ್ಟವನ್ನು ದಿವ್ಯಲಿಂಗ ಸ್ವಾಮಿಗಳವರಿಗೆ ಮಾಡಿ ಆಬಳಿಕ ಶಂಕರಗಣೇಶ ಸ್ವಾಮಿಗಳವರು ತಮ್ಮಯ ಗಣಸಮೂಹದೊಡನೆ ಪಂಪಾಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿಯ ಶಾಲಿವಾಹನ ಶಕ ಸಾವಿರದ ಇನ್ನೂರು ಐವತ್ತೆಂಟನೆಯ ಧಾತು ಸಂವತ್ಸರದ ವೈಶಾಖಶುದ್ಧ ಸಪ್ತಮಿಯಲ್ಲಿ ಹರಿಹರ ನೃಪಗೆ ಆನೇಗುಂದಿ ನಗರದ ರಾಜ್ಯಪಟ್ಟವಾಗಲು ಈತನ ವಂಶಜರು ಹದಿಮೂರು ಪಟ್ಟವಾಳಿದರು. ಇವರು ನೂರು ಐವತ್ತು ವರುಷವಾಳಲು ಇವರಲ್ಲಿ ಪ್ರೌಢದೇವೇಂದ್ರನು ಪಂಪಾವಿರುಪಾಕ್ಷನಾಲಯಕ್ಕೆ ಸಮೀಪವಾದ ವಿದ್ಯಾನಗರವಂ ಕಟ್ಟಿ



ಆ ಪುರವ ಆ ನೃಪಾಲನು ಆಳುವ ಕಾಲದಲ್ಲಿ ಶ್ರೀ ಪರಮೇಶ್ವರನ ಆಜ್ಞೆಯಿಂದ ಕೈಲಾಸದಿಂ ಮೃತ್ಯುಲೋಕಕ್ಕೆ ದಯಮಾಡಿಸಿ ಲೀಲೆಯಂ ಮಾಡಿ ಶಿವ ಭಕ್ತಿಯಂ ನೆಲೆಗೊಳಿಸಿದ ನೂರೊಂದು ವಿರಕ್ತರಾದ ಗುರುಗಳು ಕರಸ್ಥಲದ ವೀರಣ್ಣ ಒಡೆಯರು ಕರಸ್ಥಲದ ನಾಗಿದೇವರು ಗುರುಬಸವ ದೇವರು ಬತ್ತಲೇಶ್ವರ ನಿರ್ವಾಣಿ ಜೋಳೇಶ ಮುಂತಾದ ಗಣವರರಿಗೆ ಶಂಕರೇಶ್ವರ ಸ್ವಾಮಿಗಳವರು ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಅಲ್ಲಿ ಭಕ್ತಗಣವರರ ಭಕ್ತಿಯಂ ಕೈಕೊಳ್ಳುತ್ತಿರುವಲ್ಲಿ ಆ ನೃಪವರನು ಈ ವಾರ್ತೆಯಂ ಕೇಳಿ ಆಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಉತ್ಸವಂಗೊಂಡು ತನ್ನಯ ಪುರವರ ಮನೆಯಲ್ಲಿ ಪೂಜೆ ಮುಂತಾದ ಸನ್ಮಾನವಂ ಮಾಡಿ ಕಾಣಿಕೆಯಂ ಒಪ್ಪಿಸಿದಲ್ಲಿ ಆ ದ್ರವ್ಯದಿಂದ ಪಂಪಾ ವಿರುಪಾಕ್ಷೇಶ್ವರನ ದೇವಾಲಯವಿರುವ ಹೇಮಕೂಟದಿ ಮಹಾಪ್ರಸ್ತವಂ ಮಾಡಿಸಿ ರಾಜ ಮುಂತಾದ ನೂರೊಂದು ಗಣವರರಿಗೆ ಆಶೀರ್ವಾದವಂ ಮಾಡಿ ಅಲ್ಲಿಂದ ತಮ್ಮಯ ಗುರುಗಳು ಶಿವಯೋಗದೊಡನೆ ತಪವಂಗೈದ ಕಾರಣದಿಂ ಗೋಸಲ ಸಿದ್ಧೇಶ್ವರನ ಹೆಸರಾದ ಬೆಟ್ಟಕ್ಕೆ ದಯಮಾಡಿಸಿ ಅದೇ ಬೆಟ್ಟದಲ್ಲಿ ನಿರ್ವಯಲಾದರು. ಇವರ ತೋರಗದ್ದಿಗೆಯು ಪೆನುಗೊಂಡೆ ಸೀಮೆ ಕೊರಟಗೆರೆ ಸಮೀಪವಾದ ಸಿದ್ದರ ಬೆಟ್ಟದಲ್ಲಿ ಇರುತ್ತದೆ. ಅವರು ಮಹಿಮೆಯುಳ್ಳ ಗುರುಗಳು ಆದ ಕಾರಣ ಆ ಬೆಟ್ಟದಲ್ಲಿ ಬೆಂಗಳೂರು ಮೈಸೂರು ಮುಂತಾದ ಸಕಲ ದೇಶದ ದೇವಭಕ್ತರು ತಮಗೆ ರೋಗ ಮುಂತಾದ ಅನೇಕ ಕಂಟಕಗಳು ಬಂದಲ್ಲಿ ದೂರಾದರೆ ಆ ಬೆಟ್ಟದಲ್ಲಿ ಗಣತೃಪ್ತಿಯಂ ಮಾಡುವೆವು ಎಂದು ಇವೊತ್ತಿಗೂ ಪ್ರಾರ್ಥನೆ ಮಾಡಿಕೊಂಡು ತಮ್ಮ ಮನೋಭೀಷ್ಟ ಸಿದ್ಧಿ ಆದಕಾರಣ ಇವೊತ್ತಿಗೂ ಪ್ರಸ್ತವಗಳು ಆಗುತ್ತವೆ. ಇದಕ್ಕೆ ಇವರ ಸ್ಥಲಪುರಾಣವೇ ಸಾಕ್ಷಿಯು. ನೃಪಾಲ ಮುಂತಾದ ನೂರೊಂದು ವಿರಕ್ತ ಮೂರ್ತಿಗಳು ಪಂಪಾಕ್ಷೇತ್ರದಲ್ಲಿ ಅವತರಿಸಿದರೆಂಬುದಕ್ಕೆ ಅವರಿದ್ದ ಸ್ಥಲಗಳೇ ಸಾಕ್ಷಿಯು.

## ದಿವ್ಯಲಿಂಗೇಶ್ವರ ಸ್ವಾಮಿಗಳು.

೧೭ ನೆಯ ಪಟ್ಟದ ದಿವ್ಯಲಿಂಗೇಶ್ವರ ಸ್ವಾಮಿಗಳು ತಮ್ಮಯ ವಾಣಿಜ್ಯಪುರದ ಮಠದಲ್ಲಿ ಲಿಂಗಪೂಜಾ ಜಂಗಮದಾಸೋಹವಂ ಮಾಡುತ್ತ ಅಲ್ಲಿಯ ಭಕ್ತರ ಭಕ್ತಿಯಿಂದ ೭೨ ಬಿರುದುಗಳಿಂದ ಉತ್ಸಹಂಗೊಳ್ಳುತ್ತ ಇರುತ್ತಿರುವಲ್ಲಿ ಅದೇ ಸೀಮೆಯ ಕಾವೇರಿ ನದೀ ತಟದಲ್ಲಿರುವ ತಲಕಾಡೆಂಬ ಕ್ಷೇತ್ರದಲ್ಲಿ ಜೈನರು ಮುಂತಾದ ವೈಷ್ಣವರ ಮತವು ಪ್ರಬಲವಾಗಿ ಶಿವಮತಸ್ತರಂ ಪ್ರಬಲವ ಮಾಡಗೊಡದೆ ಆ ಕ್ಷೇತ್ರದಿ ೧೨ ವರುಷಕ್ಕೆ ಒಂದು ವೇಳೆ ಸಕಲ ದೇಶದ ಪರಿಸೆಯು ಲಕ್ಷೋಪಲಕ್ಷ ಕೂಡಿ ಮುಡುಕುದೊರೆ ಮಲ್ಲೇಶ್ವರ ವೈದ್ಯನಾಥ ಪಾತಾಳೇಶ ಮುಂತಾದ ಪಂಚಲಿಂಗಗಳ ದರ್ಶನವನ್ನು ನದಿಯ ಸ್ನಾನ ಮಾಡಿ ತೆಗೆದು ಕೊಂಡಲ್ಲಿ ಬ್ರಹ್ಮಹತ್ಯ ಮುಂತಾದ ಪಂಚದ್ರೋಹ ಗುರುತಲ್ಪಕ ಮಾತಾಪಿತೃ ಭ್ರಾತೃ ಮುಂತಾದ ಹತವ ಮಾಡಿದ ದೋಷವು ದೂರಾಗಿ ಕಡೆಯಲ್ಲಿ ಮೋಕ್ಷವಾಗುವುದೆಂದು ವ್ಯಾಸೋಕ್ತ ದಶ ಶಿವ ಪುರಾಣದಲ್ಲಿ ಈ ಕ್ಷೇತ್ರದ ಮಹಿಮೆಯು ಇದ್ದ ಕಾರಣ ಈ ಹೊತ್ತಿಗೂ ಅದೇ ರೀತಿ ಪಂಚಲಿಂಗದ ದರ್ಶನವಂ ತೆಗೆದುಕೊಳ್ಳುತ್ತಾರೆ. ಇಂತಹ ಲಿಂಗದ ಮಹಿಮೆಯಂ ಕಂಡು ಆ ಎರಡು ಮತಸ್ತರು ಆ ಲಿಂಗಗಳ ಗುಡಿಗಳ ದ್ವಾರವಂ ಬಲಿದು ಕವಾಟವಂ ಬಂಧಿಸಿ ಶಿವ ಪೂಜೆಯಂ ನಿಲ್ಲಿಸಿ ತಮ್ಮಯ ವಿಷ್ಣು ಜಿನ್ನಗಳ ದೇವಾಲಯವಂ ಪ್ರಬಲವ ಮಾಡಿಕೊಂಡಿರುವುದಂ ವಾಣಿಜ್ಯಪುರದ ಜಗದ್ಗುರು ಶೂನ್ಯ ಸಿಂಹಾಸನಾರೂಢರಾದ ಆ ದಿವ್ಯಲಿಂಗ ಸ್ವಾಮಿಗಳವರು ತಲಕಾಡು ಶಿವಭಕ್ತರಿಂದ ಕೇಳಿ ತಮ್ಮಯ ಆಂದೋಳಿಕ ನಂದೀಧ್ವಜ ವ್ಯಾಸನತೋಕು ಮುಂತಾದ ೭೨ ಬಿರುದುಗಳೊಡನೆ ತಲಕಾಡ ಪುರಕ್ಕೆ ದಯಮಾಡಿಸಿ ಶಾಸ್ತ್ರ ಮುಖದಿಂ ಜೈನ ವೈಷ್ಣವರಂ ಗೆಲಿದು ಶಿವಮತಸ್ತರಂ ಮಾಡಿ ಆ ಸ್ಥಲದಿ ಉತ್ಸಹಂಗೊಂಡು ಸಕಲರಿಂ ಕಾಣಿಕೆಯ ಒಪ್ಪಿಸಿಕೊಂಡು ಆ ಬಳಿಕ ಪಂಚಲಿಂಗದ ದೇವಾಲಯದ ದ್ವಾರಂಗಳಂ ತೆಗೆಯಿಸಿ ಆ ಲಿಂಗಗಳ ಪೂಜೆಗಳನ್ನು ಸಾಗು ಮಾಡಿಸಿ ಆ ನಂತರ ವಾಣಿಜ್ಯಪುರಕ್ಕೆ ದಯಮಾಡಿಸಿದಲ್ಲಿ ಆ ಸೀಮೆಯ ಯಳಂದೂರ ಗ್ರಾಮದ ವೈಷ್ಣವರು ಆ ಸ್ವಾಮಿಗಳವರ ಮಹಿಮೆಗಳಂ ಕೇಳಿ ಸೈರಿಸಲಾರದೆ ಸ್ವಾಮಿಗಳವರ ಬಳಿಗೆ ಪ್ರಸಂಗವನ್ನು ಮಾಡುವೆವು ಎಂದು ವಾಣಿಜ್ಯಪುರದ ಮಠಕ್ಕೆ ಬಂದು ತಮ್ಮಯ ಗ್ರಾಮದಲ್ಲಿ ಇದ್ದ ಕುರುಡರು, ಕುಂಟರು, ಮೂಕರು, ಕಿವುಡರು, ಇವರನ್ನು ಕರೆದುಕೊಂಡು ಬಂದು ಸ್ವಾಮಿಗಳವರಿಗೆ ಆ ವೈಷ್ಣವಾದಿಗಳು ವಿನಂತಿ ಮಾಡಿಕೊಂಡದ್ದೇನೆಂದರೆ— ನಾವು ಕರೆದುಕೊಂಡು ಬಂದವರಿಗೆ ತಾವು ಕಣ್ಣು. ಕಾಲು, ಕಿವಿ, ಬಾಯಿ ಇವುಗಳನ್ನು ಕೊಟ್ಟರೆ, ತಾವು ಮಹಿಮಾವುಳ್ಳವರು ಎನ್ನುತ್ತೇವೆ. ಆ ಮೇಲೆ ನಮ್ಮ ಕೂಡ ಪ್ರಸಂಗವ ಮಾಡಿ ನಮ್ಮನ್ನು ಗೆಲಿದರೆ ನಮ್ಮ ಮತವನ್ನು ಬಿಟ್ಟು ಶಿವಮತಕ್ಕೆ ಹೊಂದಿ ತಮಗೆ ಶಿಷ್ಯರಾಗುವೆವು ಎಂದು ಹೇಳಿಕೊಳ್ಳಲು ಅದಕ್ಕೆ ಸ್ವಾಮಿಗಳವರು ಒಡಂಬಟ್ಟು ಆ ಕಿವುಡು, ಕುಂಟರು, ಕುರುಡರು, ಇವರಿಗೆ ಸ್ನಾನವಂ ಮಾಡಿಸಿ ಭಸ್ಮರುದ್ರಾಕ್ಷಿಗಳಂ ಧಾರಣವಂ ಮಾಡಿಸಿ, ಆ ನಂತರಲ್ಲಿ ತಮ್ಮ ಕರುಣ ದೃಷ್ಟಿಯಿಂದ ನೋಡಲು ಎಲ್ಲ ಜನರಂತೆ ಕಣ್ಣು, ಕಾಲು, ಕಿವಿಗಳು, ಬಂದವು. ಆ ಬಳಿಕ ಮೂಕರಿಗೆ ಸ್ನಾನವಂ ಮಾಡಿಸಿ ಭಸ್ಮ ರುದ್ರಾಕ್ಷಿಯಂ ಧಾರಣ ಮಾಡಿಸಿ ತಮ್ಮ ಹಸ್ತದಿಂದ ಶಿವಮಂತ್ರದೊಡನೆ ವಿಭೂತಿಯಂ ಅವರ ಬಾಯೊಳಗೆ ಹಾಕಲು ಅವರಿಗೆ ನಾಲಿಗೆಯು ಬಂದು ಅವರ ಹೃದಯದಿ ಸ್ವಾಮಿಗಳವರ ಕೃಪೆಯಿಂದ ವೇದಶಾಸ್ತ್ರಾಗಮೋಪನಿಷತ್ತು ಪುರಾಣೇತಿಹಾಸಗಳು ತಿಳಿದು ಇವರುಗಳೇ ಆ ವೈಷ್ಣವಾದಿಗಳಂ ಗೆಲಿದು ಅವರ ಶಿವಭಕ್ತರಂ ಮಾಡಿ ಶಿವಮತವನ್ನುದ್ಧರಿಸಿ ಆ ಬಳಿಕ ಸ್ವಾಮಿಗಳವರು ತಮ್ಮಯ ಶಿವಾನುಭವ ಚರಂತಿಗೆ ಪಟ್ಟವನ್ನು ಗೋಸಲ ಚನ್ನಬಸವರಾಜೇಂದ್ರರಿಗೆ ಮಾಡಿ ನಿರ್ವಯಲಾದರು. ಈವರ ತೋರಗದ್ದಿಗೆ ಹರಪನಹಳ್ಳಿಯೆಂಬ ವಾಣಿಜ್ಯ ಪುರದಿ ಇರುತ್ತದೆ. ಈ ಪ್ರಕಾರ ಇವರು ಅನೇಕ ಮಹಿಮೆಗಳಂ ಮಾಡಿದರು ಎಂಬುದಕ್ಕೆ ಸ್ಥಲ ಪುರಾಣವೇ ಸಾಕ್ಷಿಯು.



---

## ಚನ್ನಬಸವ ರಾಜೇಂದ್ರರು

೧೮ ನೆಯ ಪಟ್ಟದ ಶ್ರೀ ಚನ್ನಬಸವ ರಾಜೇಂದ್ರರು ವಾಣಿಜ್ಯಪುರದ ಸದುಭಕ್ತರ ಭಕ್ತಿಯೊಡನೆ ಲಿಂಗಪೂಜಾ ಜಂಗಮದಾಸೋಹವಂ ಮಾಡುತ್ತ ಆ ದೇಶದಲ್ಲಿ ತಮ್ಮಯ ಸದ್ಗಣಚಾರಿ ಮುಂತಾದ ಚರರ ಕಳುಹಿಸಿ ದೇಶದ ಭಕ್ತರ ಕಡೆಯಿಂ ಕಾಣಿಕೆ ತರಿಸಿಕೊಳ್ಳುತ್ತ ಅನಾಚಾರವುಳ್ಳ ಶಿವಭಕ್ತರ ಸದಾಚಾರದಲ್ಲಿ ತರುತ್ತ ತಿರುಗಿ ಬಿದ್ದ ಜನರಿಗೆ

ಬಹಿಷ್ಕಾರವಂ ಕೊಡುತ್ತ ಶರಣಾಗತರಾದರೆ ಅಪರಾಧಗಾಣಿಕೆಯಂ ಒಪ್ಪಿಸಿ
ಕೊಳ್ಳುತ್ತ ದುಷ್ಟರಂ ಶಿಕ್ಷಿಸಿ ಶಿಷ್ಟರಂ ರಕ್ಷಿಸುತ್ತ ಸದು ಹೃದಯವುಳ್ಳ ಶಿವಭಕ್ತ
ಗಣವರರಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷ ಮಾರ್ಗವಂ
ನೀವುತ್ತ ೭೨ ಬಿರುದುಗಳೊಡನೆ ಅಲ್ಲಿಯ ಭಕ್ತಗಣವರರಿಂದ ಪೂಜೋ
ತ್ಸವಂಗೊಳ್ಳುತ್ತ ವಾಣಿಜ್ಯಪುರದಿ ಶೂನ್ಯ ಸಿಂಹಾಸನ ಸ್ಥ ಗೋಸಲ
ಚನ್ನಬಸವರಾಜೇಂದ್ರರು ಒಪ್ಪುತ್ತ ಇರ್ದ ಕಾಲದಲ್ಲಿ ಪಂಪಾಕ್ಷೇತ್ರದಿ
ವಿದ್ಯಾನಗರಿಯನ್ನಾಳಿದ ಪ್ರೌಢರಾಯನು ಸಾಂಬಲೋಕಕ್ಕೆ ಹೋದ
ನಂತರ ಕೆಲವು ದಿವಸದಿ ಆ ರಾಜ್ಯದಲ್ಲಿ ಅನಾಚಾರವು ಹೆಚ್ಚಾಗಿ ಶಿವಾ
ಚಾರವಡಗಿ ಮೇಲಾಧರಣಿಯೊಳು ವೀರಶೈವಾಚಾರವಿಲ್ಲದೆ ಪರವಾದಿ
ಗಳು ಘನವಾಗಲು ಕೈಲಾಸಕ್ಕೆ ನಾರದನು ಪೋಗಿ ಪರಮೇಶ್ವರನು
ಓಲಗಂಗೊಟ್ಟಿಪ್ಪ ಸಮಯದೊಳು ಕಂಡು ಸಲ್ಲೀಲೆಯಿಂದೆರಗಿ ಮಗು
ಳ್ದಿಪ್ಪ ಬಿನ್ನೈಸಿದಂ ಭಯಭಕ್ತಿಯಿಂದ ಧರೆಯೊಳಗೆ ವೀರಶೈವಾಚಾರ
ವಡಗಿತ್ತು, ಕರುಣದಿಂ ನೀವೆ ಚಿತ್ತೈಸಿ ಷಟ್‌ಸ್ಥಲವನುದ್ಧರಿಸೆಂದು ನಾರದಂ
ಬಿನ್ನೈಸಲೀಶಂ ನಿರಂಜನ ಗಣೇಶ್ವರನೊಡನೆ ಪರ ಗಣೇಶ್ವರರೇಳ್ನೂ
ರ್ವರಂ ಕೂಡಿಕೊಂಡಿರದೆ ಭೂಮಿಯೊಳುದಯಿಸಿ ಜಂಗಮಸ್ಥಲವಾಂತು
ಪರಷಟ್‌ಸ್ಥಲವನುದ್ಧರಿಸೆಂದು ಕಳುಹಲವರೊಡಗೂಡಿ ಭೂಮಿಗಿಳಿದನು.
ಈ ನಿರಂಜನ ಜಂಗಮವೆ ಎಂಟು ವರುಷದ ಶಿಸುರೂಪವಂ ತಾಳ್ದು
ಆ ಶಿಸುವು ಭಸ್ಮರುದ್ರಾಕ್ಷ ಲಿಂಗಧಾರಣ ಸಮೇತವಾಗಿ ಆ ವಾಣಿಜ್ಯ
ಪುರಗೋಸಲ ಚನ್ನಬಸವಸ್ವಾಮಿಗಳವರ ಸನ್ನಿಧಾನಕ್ಕೆ ದರ್ಶನಾರ್ಥವಾಗಿ
ಆ ನಿರಂಜನ ಗಣೇಶನು ಕೈಲಾಸದಿಂ ಅಂತರಿಕ್ಷ ಮಾರ್ಗದಿ ಶಿಸು ರೂಪ
ವಾಗಿ ಪುರಜನರು ಕಾಣ್ಬಂತೆ ಕೋಟಿ ಸೂರ್ಯ ಪ್ರಕಾಶವಾಗಿ
ಬರುವ ಕಾಲದಿ ಜನರು ಕೇಳ್ವಂತೆ ನೋಳ್ಪಂತೆ ಅಂತರಿಕ್ಷದಿ ಜಯ
ದುಂದುಭಿ ವಾದ್ಯಗಳಾದವು. ಪುಷ್ಪದ ಮಳೆ ಸುರಿಯಿತು. ಇದ ಕಂಡು
ಚನ್ನಬಸವರಾಜೇಂದ್ರರು ಮುಂತಾದ ಆ ಪುರಜನರು ಅಂತರಿಕ್ಷದಿ ಕೋಟಿ
ಚಂದ್ರಸೂರ್ಯ ಪ್ರಕಾಶಮಾನರಾದ ದಿವ್ಯಮೂರ್ತಿಯು ಬರುವುದಂ ಕಂಡು
ಈತನು ಶಿವನಲ್ಲದೆ ಬೇರೆ ಅಲ್ಲವೆಂದು ಸಕಲರು ಕೊಂಡಾಡಿ ಶರಣಾಗತ
ರಾದರು. ಆ ವೇಳೆಯೊಳು ಅಷ್ಟ ವರುಷದ ಶಿಸುರೂಪವಾದ ಮೂರ್ತಿಯು
ಚನ್ನಬಸವರಾಜೇಂದ್ರರೆಂಬ ಗುರುಗಳಿಗೆ ಸಾಷ್ಟಾಂಗವೆರಗಲು ಇದಕಂಡು
ಗುರುವರನು ಶಿರದಡಹಿ ಎಬ್ಬಿಸಿ ನೀನಾರೆಂದು ವಿಚಾರಿಸಲು ತಾನು



ಶಿವಲೋಕದಿಂ ಬಂದ ಹದನವಂ ಪೇಳಿ ಅಲ್ಲಿರುವ ದೇವಭಕ್ತರ ಸಮಕ್ಷಮ
ದೊಳು ನೀನೆನಗೆ ಗುರುವಾಗಿ ನಿರಾಭಾರ ವೀರಶೈವ ದೀಕ್ಷೆಯನಿತ್ತು
ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಪೊರೆವುದೆಂದು ಬಿನ್ನೈಸಿಕೊ
ಳ್ಳಲು ಅದಕ್ಕೆ ಗುರುವರನು ನೀನಾದಿ ಪರವಸ್ತುವು ಆದ ಕಾರಣ ಗುರು
ವಾಗಲೊಲ್ಲೆನೆನಲು ಅದಕ್ಕೆ ಆ ಮೂರ್ತಿಯು ನೀನಾದಿಯಲ್ಲಿ ಪರಶಿವನೆ
ರೂಪಾಗಿ ಮರ್ತ್ಯರುಗಳಿಗೆ ಗುರುವಾಗಿ ಷಟ್‌ಸ್ಥಲ ಮಾರ್ಗವಂ ತೋರಿ
ಮೋಕ್ಷವಂಸಿತ್ತು ಸಲಹುವದಕ್ಕೋಸುಗ ಬಂದಿರುವುದಂ ನಾನು ತಿಳಿದು
ಬಿನ್ನೈಸಿಕೊಳ್ಳುವೆನೆಂದು ಗುರುವರನಿಗೆ ಶರಣಾಗತನಾಗಲು ಅದಕ್ಕೆ
ಒಪ್ಪಿಕೊಂಡು ತಮ್ಮಯ ಮಠದಿ ಸಕಲಭಕ್ತ ಗಣವರರಂ ಕರಿಸಿಕೊಂಡು
ಮಠದಿ ಹಂದರ ದೀಕ್ಷಾಮಂಟಪವಂ ರಚಿಸಿ ತಮ್ಮಯ ಶೂನ್ಯ ಸಿಂಹಾ
ಸನಕ್ಕೆ ಗುರುಗಳಾದ ಅಲ್ಲಮಪ್ರಭುಸ್ವಾಮಿಗಳವರ ನಿರಂಜನ.ಸೂತ್ರ ಏಕೋ
ತ್ತರ ಬಗಿ ಮೂಲಪ್ರಣಮಪೆ ಬೀಜ ಚಿತ್ಶಕ್ತಿ ಅಜಪವೇದ ಪರಶಿವನ
ಗೋಪ್ಯಮುಖದಿ ಉದ್ಭವವಾದ ಎಳೆಮಿಂಚಿನ ಶೂನ್ಯ ಕಲಶ ನಿರಂಜನ
ಗೋತ್ರ ಮಹಾ ಮೇರುಪರ್ವತ ಗುಹೇಶ್ವರ ಲಿಂಗ ಕಲ್ಯಾಣಪುರ ಶೂನ್ಯ
ಸಿಂಹಾಸನ ನಾಗಬೆತ್ತದ ದಂಡಾಗ್ರ ಸಹಸ್ರದಳದಲ್ಲಿರುವ ಗುರುಪಾದೋದಕ
ಗಂಗೆ ಬಿಲ್ವವೃಕ್ಷ ಅಕಲ್ಪಿತ ಭಿಕ್ಷಾಂದೇಹಿ ಎಂಬ ಶಬ್ದ ಚಿತ್ರಕಂಬಳಾ
ಸನ ಶ್ರೀಶೈಲದ ಕದಳಿ ಬನವೆಂಬ ಕ್ಷೇತ್ರ ಊರ್ಧ್ವದಿಕ್ಕು ಭಾವಲಿಂಗೈಕ್ಯ
ಪದ ಈಪ್ರಕಾರ ಸುಪ್ರಭೇದಾಗಮದ ಸೂತ್ರವಿಡಿದು ಗಣಸಾಕ್ಷಿಯಾಗಿ
ಏಕೋತ್ತರ ಸೂತ್ರವಿಡಿದು ಶ್ರೀಚನ್ನಬಸವರಾಜೇಂದ್ರರು ತಮ್ಮಯ ಶಿಷ್ಯ
ನಾದ ಸಾಂಬಲೋಕದಿಂ ಬಂದ ಮೂರ್ತಿಗೆ ನಿರಾಭಾರ ವೀರಶೈವ
ದೀಕ್ಷೆಯನ್ನಿತ್ತು ಷಟ್‌ಸ್ಥಲ ಬ್ರಹ್ಮೋಪದೇಶವಂ ಮಾಡಿ ಅನಾದಿ ಸಿದ್ಧ
ಲಿಂಗೇಶನೆಂಬ ನಾಮವಂ ಕೊಟ್ಟು ರಕ್ಷಿಸಿದರು. ಈ ಸಿದ್ಧಲಿಂಗ ದೇಶಿ
ಕೇಂದ್ರರು ಮಹಿಮಾಪುರುಷರಾಗಿ ತಮ್ಮಯ ಗುರುಗಳಾದ ಚನ್ನಬಸ
ವೇಶನ ಸೇವೆಯೊಳು ಕೆಲವು ದಿವಸವಿರ್ದು ವಾಣಿಜ್ಯಪುರವೆಂಬ ಹರ
ದನಹಳ್ಳಿಯಲ್ಲಿ ಕಲ್ಲಬಸವಗೆ ಉಣಿಸಿ ಗುರುಗಳ ಶಿವಪೂಜೆ ವೇಳೆಯಲ್ಲಿ
ದೀಪಕ್ಕೆ ತೈಲವಿಲ್ಲದಿರೆ ಆ ದೀಪದ ಪ್ರಣತಿಗೆ ಉದಕವಂ ನೀಡಿ ದೀಪ
ಉರಿವಂತೆ ಮಾಡಲು ಇದ ಗುರುಗಳು ಕಂಡು ಈ ಶಿಷ್ಯನು ಅಪಾರ
ಮಹಿಮನು ಈತನಿಂದೆ ಸೇವೆಯಂ ಕೈಕೊಳ್ಳಕೂಡದೆಂದು ನಿಶ್ಚಯಿಸಿ
ಶಿವಪೂಜೆ ಶಿವಾರ್ಪಣವಾದ ನಂತರ ಆ ಪುರದ ಭಕ್ತಗಣಂಗಳಂ ಕರೆ

ತರಿಸಿ ಅವರ ಸಮ್ಮುಖದಿ ತಮ್ಮಯ ಶಿವಾನುಭವ ಚರಂತಿಗೆ ಪಟ್ಟವನು ಸಿದ್ಧಲಿಂಗಯತಿವರಗೆ ಕೊಟ್ಟು ತಾವು ಆ ಪುರವಂ ಬಿಟ್ಟು ತಮ್ಮಯ ಪರಮಗುರುಗಳಾದ ಗೋಸಲಿಯ ಸಿದ್ಧೇಶ್ವರ ಸ್ವಾಮಿಗಳವರು ತಮ್ಮ ಮಹಿಮೆಯಲಿ ಗಂಗೆಯಂ ತರಿಸಿದ ಕಾರಣದಿಂದ ಅವರ ಹೆಸರಾದ ಬೆಂಗಳೂರು ಪ್ರಾಂತವಲ್ಲಿರುವ ತುಮಕೂರ ಸಮೀಪವಾದ ಸಿದ್ಧಗಂಗೆಯ ಬೆಟ್ಟಕ್ಕೆ ಚಿತ್ತೈಸಿ ಅಲ್ಲಿಯು ಗಣಪರ್ವವಂ ಮಾಡಿ ಅಲ್ಲಿ ಲಿಂಗಪೂಜಾ ಜಂಗಮದಾಸೋಹದಿಂದ ಗಣಸಮೂಹದೊಡನೆ ಇರಲು ತುಮಕೂರು ಸೀಮೆಯಲ್ಲಿರುವ ಗುಬ್ಬಿ ಎಂಬ ಪುರದಿ ಪ್ರಸಿದ್ಧ ಕವೀಶ್ವರನಾದ ಮಲ್ಲಣಾಚಾರ್ಯನೆಂಬ ಗಣವರನು ಸಿದ್ಧಗಂಗೆಯ ಬೆಟ್ಟದಲ್ಲಿರುವ ಸ್ವಾಮಿಗಳವರ ಸನ್ನಿಧಿಗೆ ಬಂದು ಭಯಭಕ್ತಿಯಿಂ ಸಾಷ್ಟಾಂಗವೆರಗಿ ಬಿನ್ನಹಂ ಮಾಡಿ ಸ್ವಾಮಿಗಳವರ ೭೨ ಬಿರುದುಗಳಿಂದ ಗಣಸಮೂಹದೊಡನೆ ಗುಬ್ಬಿಯ ಪುರಕ್ಕೆ ಕರಕೊಂಡು ಪೋಗಿ ಉತ್ಸಹಂ ಗೊಳಿಸಿ ತಮ್ಮಯ ಮಠದಿ ಗಣಪರ್ವವಂ ಮಾಡಿ ಆ ಬಳಿಕ ಅಲ್ಲಿಯ ಮಲ್ಲಣಾಚಾರ್ಯರು ಮುಂತಾದ ಭಕ್ತಗಣಂಗಳು ಸ್ವಾಮಿಗಳವರಿಂದ ಷಟ್‌ಸ್ಥಲ ಜ್ಞಾನೋಪದೇಶವಂ ಪಡೆದರು. ಇವರು ಮುಂತಾಗಿ ಅಲ್ಲಿಯ ಭಕ್ತಗಣಂಗಳನ್ನು ಸ್ವಾಮಿಗಳವರು ಕರಿಸಿಕೊಂಡು ಇವರಿಗೆ ತಾವು ಸಾಂಬಲೋಕಕ್ಕೆ ಚಿತ್ತೈಸುವುದನ್ನು ಸೂಚಿಸಿ ಅಲ್ಲಿಯೇ ನಿರ್ವಯಲಾದರು. ಇವರ ತೋರಗದ್ದಿಗೆಯು ಗುಬ್ಬಿಯಪುರದಲ್ಲಿ ಇರುತ್ತದೆ. ಈ ಗದ್ದಿಗೆಯು ಪ್ರಸಿದ್ಧವಾಗಿ ಈಗಲೂ ಪೂಜಾರಥೋತ್ಸಹಂಗಳು ಆಗುತ್ತವೆ. ಈಗಲೂ ಆ ಗದ್ದಿಗೆಗೆ ಆ ಸೀಮೆಯ ಶಿವಭಕ್ತರಾದ ಪ್ರಜೆಗಳಲ್ಲಿ ಮಕ್ಕಳಿಲ್ಲದವರು ಬ್ರಹ್ಮರಾಕ್ಷಸ ಪಿಶಾಚ ಗ್ರಹಪೀಡಿತರು ಕುಷ್ಠರೋಗ ಮುಂತಾದ ಅನೇಕ ರೋಗ ಪೀಡಿತರು ಮುಂತಾದ ಜನರು ಪ್ರಾರ್ಥನೆಯಂ ಮಾಡಿಕೊಂಡಿದ್ದರಿಂದ ಪರಾಭವವಾಗಲು ಇವೊತ್ತಿಗೂ ಆ ಚನ್ನಬಸವರಾಜೇಂದ್ರರ ಮಠದಲ್ಲಿ ಪ್ರಸ್ತಗಳ ಮಾಡುತ್ತಾರೆ. ಇದಕ್ಕೆ ಅವರ ಸ್ಥಲಪುರಾಣವೇ ಸಾಕ್ಷಿಯು.

---



# ತೋಂಟದ ಸಿದ್ಧಲಿಂಗ

ಶ್ರೀ ತೋಂಟದ ಸಿದ್ಧಲಿಂಗ ದೇಶಿಕೇಂದ್ರರು ಮುಂತಾದ ಗುರುಗಳ ವಂಶಪರಂಪರವು ಅಹುದು ಎಂಬುದಕ್ಕೆ ಸಿದ್ಧೇಶ್ವರ ಪುರಾಣ ಚನ್ನಬಸವ ಪುರಾಣ ಮುಂತಾದ ಪುರಾತನರ ವಚನಗಳೇ ಸಾಕ್ಷಿಯು. ಪಂಪಾ ವಿರುಪಾಕ್ಷನ ಕ್ಷೇತ್ರದ ವಿದ್ಯಾನಗರದ ಪ್ರೌಢರಾಯನ ಆಳಿಕೆಯಲ್ಲಿ ನೂರೊಂದು ವಿರಕ್ತರು ಭೂಮಿಯಲ್ಲಿ ಮಹಿಮೆರೆನಿಸಿ ಮಹತ್ವಗಳ ಮಾಡಿ ಶಿವಮತವನುದ್ಧರಿಸಿ ಶಿವಲೋಕಕ್ಕೆ ಹೋದ ಬಳಿಕ ಪ್ರೌಢರಾಯನ ಪಟ್ಟಣವ ಆ ರಾಜನು ಸಾಂಬಲೋಕಕ್ಕೆ ಹೋದನಂತರ ನರಸಣ್ಣರಾಯನಾಳಿಕೆಯಲ್ಲಿ ಆ ಸೀಮೆಯಲ್ಲಿ ಶಿವಮತವಳಿದು ಅನ್ಯಮತವು ಹೆಚ್ಚಿದ ಕಾರಣ ನಾರದನು ಶಿವನಿಗೆ ಸೂಚಿಸಿದರಿಂದ ನಿರಂಜನ ಗಣವರನು ಶಿವನ ಪ್ಪಣೆಯಿಂದ ಏಳು ನೂರು ಗಣವರರು ಸಹಿತವಾಗಿ ಮರ್ತ್ಯಲೋಕದಿ ಈ ವಿರತರು ಅವತರಿಸಿದರೆಂಬುದಕ್ಕೆ ಆ ಪುರಾಣಗಳೇ ಸಾಕ್ಷಿಯು. ಈ ತೋಂಟದಾರ್ಯರಾದ ನಿರಂಜನಗಣವರನ ಸಂಗಡ ಸಾಂಬಲೋಕದಿಂದ ಬಂದ ವಿರತರೇಳುನೂರು ಗಣವರರು ಮರ್ತ್ಯದಿ ಅವತರಿಸಿದವರಾರೆಂದರೆ ಸಿದ್ಧಲಿಂಗೇಶ್ವರ ಕಂಬಳಿಯ ದೇವರು ಸಿದ್ಧ ನಂಜೇಶ್ವರ ಚನ್ನದೇವರು ದೊಡ್ಡ ಸಿದ್ಧಲಿಂಗೇಶ್ವರ ಕಂಕಣದದೇವರು ಲಂಬಕರ್ಣದದೇವರು ಸಿದ್ಧಮಲ್ಲೇಶ್ವರ, ಗುಮ್ಮಳಾಪುರ ವರದ ಸಿದ್ಧಲಿಂಗೇಶ್ವರ, ಎಡೆತೊರೆಯಪುರದ ಗುರುಸಿದ್ಧ ವೀರಣ್ಣೊಡೆಯರು ಶಿವಘನಲಿಂಗ ದೇವರು ಚಿಕ್ಕ ಮಲ್ಲೇಶ್ವರನು, ಮರುಳಸಿದ್ಧೇಶ್ವರ, ಚಂದ್ರಶೇಖರನು ಶಿವಸುರಗಿಯಾರ್ಯ, ಶಾಂತಮಲ್ಲಿಕಾರ್ಜುನದೇವರಿರದೆ ಬೆಡಗಿನ ಪರ್ವತೇಶ್ವರಂ ಪಟ್ಟಣದ ದೇವರು ಜಗುನಿಯ ಮರುಳದೇವರು, ಮಳೆಯದೇವರು ಬತ್ತಲೆಯಲಿರುವ ದೇವರು ಸಂಪಿಗೆಯ ರಾಚವಟ್ಟಿ ದೇವರು ಸಪ್ಪೆಯಾರ್ಯ ಉಪ್ಪಿನಹಳ್ಳಿಯಾರ್ಯನು ಜೋಲಿಯಾ ಬಸವೇಶ್ವರನು ರಾಚವಟ್ಟಿಯ ಕೋರಿಯ ಸಿದ್ಧಬಸವೇಶ್ವರನು ಹಿರಣ್ಯಾರ್ಯನು ಶಿವಪೂಜೆಯಾರ್ಯನೆಂದೆನಿಪ ಬೋಳ ಬಸವೇಶ್ವರನಂದು ಕಿತ್ತಾವರದಿ ನಿಂದು ರಾಜಿಸುವ ಚನ್ನಮಲ್ಲೇಶ್ವರಾದಿ ಪರಿಪರಿಯಲ್ಲಿ ಪೆಸರು ಪಡೆದ ವಿರತರೇಳ್ನೂರ್ವರು ತೋಂಟದಯತೀಶನಂ ಕೂಡಿರ್ಪರು. ಇಂತಿವರು ಮೊದಲಾದ ವಿರತರೇಳ್ನೂರ್ವರಂ ಸಂತತಂ ಗೂಡಿ ಷಟ್‌ಸ್ತಲಮಾರ್ಗವಂ ಧರೆಯೊಳಂತರಿಸಿದಂತೆ ನೆಲೆಗೊಳಿಸುತ್ತೆ ಪೂಜೆಗೊಳುತಿರದೆ ನಿಜಮುಕ್ತರಹರು.

ಈ ಪ್ರಕಾರ ಏಳ್ನೂರು ವಿರಕ್ತಗಣವರರು ಸಕಲ ದೇಶಂಗಳಲ್ಲಿ ಅವತರಿಸಿ ತಮ್ಮಯ ಗುರುಗಳಾದ ವಾಣಿಜ್ಯ ಪುರದಲ್ಲಿರುವ ತೋಂಟದಾರ್ಯರೆನಿಪ ಸಿದ್ಧಲಿಂಗ ಸ್ವಾಮಿಗಳವರ ಸನ್ನಿಧಿಗೆ ಬಂದು ಫಲಪುಷ್ಪಂಗಳನಿಟ್ಟು ಸಾಷ್ಟಾಂಗವೆರಗಿ ನಿರಾಭಾರ ವೀರಶೈವ ದೀಕ್ಷೆಯಂ ಗುರುಗಳಿಂ ಪಡೆದು ಷಟ್‌ಸ್ಥಲ ಜ್ಞಾನೋಪದೇಶವಂ ಪತ್ತುಕೊಂಡು ತೋಂಟದಾರ್ಯ ಸ್ವಾಮಿಗಳವರ ಸೇವೆಯೊಳು ಇರ್ದರು. ಈ ಗಣವರರಲ್ಲಿ ಬೋಳ ಬಸವೇಶ್ವರನೆಂಬ ಗಣವರರಿಗೆ ಈತನು ಕುಕ್ಷಿ ಬಗೆದರೆ ಮೂರು ಅಕ್ಷರಗಳಿಲ್ಲೆಂದು ಕೆಲವು ಗಣವರರು ಅಂದ ಕಾರಣ ಇದನು ಮನಸಿಗೆ ಬೋಳಬಸವೇಶ್ವರನು ಹಚ್ಚಿಕೊಂಡು ತನ್ನಯ ಗುರು ತೋಂಟದ ಸಿದ್ಧಲಿಂಗಸ್ವಾಮಿಗಳವರ ಧ್ಯಾನದಿಂ ಇಪ್ಪತ್ತೊಂದು ದಿನ ಸ್ವಾಮಿಗಳವರಿಗೆ ಗಣವರರು ಅಂದುದಂ ತಿಳಿಸದೆ ಒಂದು ಬೆಟ್ಟಕ್ಕೆ ಹೋಗಿ ಲಿಂಗಪೂಜೆಯಲ್ಲಿ ಮೂರ್ತವ ಮಾಡಲು ಇವರಿಗೆ ತೋಂಟದ ಯತೀಶನ ಕೃಪೆಯಿಂದ ನಿರಕ್ಷರ ಬೋಳಬಸವೇಶನಿಗೆ ತರ್ಕ ವ್ಯಾಕರಣ ವೇದ ಶಾಸ್ತ್ರಾಗಮ ಪುರಾಣೋಪನಿಷತ್ತು ಮುಂತಾದವು ಬಂದವು ಈ ನಿರಕ್ಷರ ಬೋಳ ಬಸವೇಶ ಮುಂತಾದ ಗಣವರರ ೧೯ ನೆಯ ಪಟ್ಟದ ತೋಂಟದಾರ್ಯ ಸ್ವಾಮಿಗಳು ತಮ್ಮ ಸನ್ನಿಧಿಯಲ್ಲಿ ಇಟ್ಟುಕೊಂಡು ವಾಣಿಜ್ಯಪುರದಿ ಲಿಂಗ ಪೂಜಾ ಜಂಗಮದಾಸೋಹವಂ ಮಾಡುತ ಶಿವಾನುಭವ ಶಾಸ್ತ್ರವಂ ಪೇಳುತ ಅಲ್ಲಿರ್ದು ಆ ಗಣವರರಲ್ಲಿ ನಿರಕ್ಷರ ಬೋಳ ಬಸವೇಶನೆಂಬ ಗಣವರನೊಬ್ಬರಂ ಇಟ್ಟುಕೊಂಡು ಉಳಿದ ಗಣವರರಿಗೆ ಶಿವಾನುಭವ ಚರಂತಿಗೆಯಂ ಮಾಡಿ ನೀವು ಕಾಶಿ ಮುಂತಾದ ಸಕಲ ಶಿವ ಕ್ಷೇತ್ರನಿರ್ದ ಸಮಸ್ತದೇಶಂಗಳಿಗೆ ದಯಮಾಡಿಸಿ ಅಲ್ಲಿ ಅನೇಕ ಮಹಿಮೆಗಳಂ ಮಾಡಿ ಮಹಿಮಾ ಪುರುಷರೆಂದೆನಿಸಿಕೊಂಡು ದೇಶಾಟಣವಂ ಮಾಡುತ್ತ ದೇಶಂಗಳಲ್ಲಿ ಭಕ್ತಗಣಂಗಳಲ್ಲಿ ಕಾಣಿಕೆಯಂ ಎತ್ತಿ ಇಲ್ಲಿಯ ಮಠದ ದಾಸೋಹಕ್ಕೆ ಕಳಿಪುದೆಂದು ಸ್ವಾಮಿಗಳವರು ಅಪ್ಪಣೆಯಂ ಕೊಟ್ಟು ಆ ಬಳಿಕ ಈ ಏಳ್ನೂರು ಚರವರರಿಗೆ ಏಳ್ನೂರು ಬುಡಕಟ್ಟುಗಳಂ ಅವರವರ ಸ್ವಾಭಾವಿಕ ಗುಣಗಳ ಮೇಲಿಂದ ನಿಯಮಿಸಿದರು. ಎಂದರೆ ಆ ಚರಪತಿಗಳೊಳಗೆ ಒಬ್ಬರು ಪಂಚ ಶಿಖೆಯಂ ಬಿಟ್ಟ ಕಾರಣದಿಂ ಲೋಚನ ಬುಡಕಟ್ಟೆಂತಲು, ಮತ್ತೊಬ್ಬರು ಲಿಂಗನೈಷ್ಠಾಪರರಾದ ಕಾರಣದಿಂ ನೊಡ(?) ಬುಡಕಟ್ಟೆಂತಲು ಮತ್ತೊಬ್ಬರು ಶಿವಪೂಜಾನಿಷ್ಠರಾದ್ದರಿಂದ



ಶಿವಪೂಜೆ ಬುಡಕಟ್ಟೆಂತಲು, ಮತ್ತೊಬ್ಬರು ಹಸರು ಕಂಥೆಯಂ ಧರಿಸಿದ ಕಾರಣದಿಂ ಪಚ್ಚೆ ಕಂಥೆ ಬುಡಕಟ್ಟೆಂತಲು ಒಪ್ಪತ್ತೆ ಮಾಗಿನ ಕಾರಣದಿಂ ಒಪ್ಪತ್ತಿನ ಬುಡಕಟ್ಟೆಂತಲು ಮತ್ತೊಬ್ಬರು ಸ್ನಾನಕ್ಕೆ ಬಿಸಿ ಅಗ್ಗಣಿಯಲ್ಲದೆ ಉಳಿದ ತಣ್ಣೀರು ಒಲ್ಲದ ಕಾರಣದಿಂ ಬಿಸಿ ಅಗ್ಗಣಿ ಬುಡಕಟ್ಟು ಎಂತಲು ಈ ಪ್ರಕಾರದಿಂ ನಿಯಮಿಸಿ ಹೆಸರಿಟ್ಟು ಬುಡಕಟ್ಟಿನ ಮಠಸ್ಥರಾದ ಆ ಮೂರ್ತಿಗಳಲ್ಲಿ ಸ್ಥಲ ಕೂಡಿ ಶಾಸ್ತ್ರ ಸಂಪಾದನೆಯಂ ಮಾಡಿಕೊಂಡ ಗಣವರರು ಈ ಬುಡಕಟ್ಟಿನ ಚರಮೂರ್ತಿಗಳಿಂದ ಚರಂತಿಗೆ ಪುಸ್ತಕವೆಂದರೆ ಚನ್ನಬಸವ ಪುರಾಣ ಬಸವ ಪುರಾಣ ಮುಂತಾದ ಶಿವ ಪುರಾಣಗಳನ್ನು ತಮ್ಮಿಂದ ಷಟ್‌ಸ್ಥಲ ಜ್ಞಾನೋಪದೇಶವಂ ಪಡೆದು ಷಟ್‌ಸ್ಥಲಾಶ್ರಮವಂ ಹೊಂದಿದ ತಮ್ಮಯ ಶಿಷ್ಯೋತ್ತಮನಿಗೆ ಭಕ್ತಗಣವರರ ಮಧ್ಯದಿ ಆ ಪುಸ್ತಕಗಳಂ ಕೊಟ್ಟು ತಮ್ಮ ಸ್ವಯಾಸನವಂ ಕೊಟ್ಟರೆ ಪುರಾಣ ಚರಂತಿಗೆ ಎಂತಲು ಪಳ್ಳಿಚರಂತಿಗೆ ಎಂತಲು ಈ ಎರಡು ನಾಮಗಳು ಇವರಿಗೆ ಬರುತ್ತವೆ. ಈ ಚರ ಮೂರ್ತಿಗಳು ತಮ್ಮ ಮರಿಗಳಿಗೆ ಸ್ಥಲವಂ ಕೂಡಿಸಿ ಶಿವಾನುಭವ ಶಾಸ್ತ್ರವಂ ಸಂಪಾದಿಸಿ ವಿರಕ್ತರಂ ಮಾಡಿಕೊಳ್ಳುವುದಕ್ಕೆ ಬರುವದಿಲ್ಲವು. ಈ ಚರಮೂರ್ತಿಗಳು ಪೂಜೆಗೆ ವಂದನೆಗೆ ಬಾಧ್ಯರು. ಯಾರು ಬಾಧ್ಯರು ಎಂದರೆ ಪ್ರಭು ಚನ್ನಬಸವ ರಾಜೇಂದ್ರರು ಶಿವಮೂರ್ತಿಯಾದ ಸೊನ್ನಲಿಗೆಯ ಸಿದ್ಧರಾಮೇಶಂಗೆ ನಿರೂಪಿಸಿದ ಗೊಹೇಶ್ವರನ ವಚನ, ಕರಣ ಹಸಿಗೆ, ಮಿಶ್ರಾರ್ಪಣ, ಸಿದ್ಧರಾಮೇಶ್ವರ ಮಂತ್ರಗೋಪ್ಯ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ಸಿದ್ಧೇಶ್ವರನ ವಚನ, ಹಿರಿಯ ಮಂತ್ರಗೋಪ್ಯ, ಶೂನ್ಯ ಸಂಪಾದನೆ ಮುಂತಾದವುಗಳ ಸಂಗ್ರಹಿಸಿದ ಪುಸ್ತಕವ ಸಭಾ ಮಧ್ಯದಲ್ಲಿ ಆ ಶಿವಾನುಭವ ಚರಂತಿಗೆ ತೆಗೆದುಕೊಂಡ ಗುರುವರನ ಕಡೆಯಿಂದ ಆ ಶಾಸ್ತ್ರವಂ ಶಿಷ್ಯೋತ್ತಮನು ಶಿವಮಂತ್ರ ಗುರುಪ್ರಸಾದ ಮುಖನಾದ ಅಂಗಲಿಂಗ ಸಾಮರಸ್ಯ ಮುಂತಾಗಿ ಅಂಗತತ್ವ ೨೫ ಲಿಂಗತತ್ವ ೧೧ ಅಂತು ಕೂಡಿ ೩೬ ತತ್ವಂಗಳಂ ತಿಳಿದಾತನು ಶಾಸ್ತ್ರವಂ ಗುರುಗಳಿಂ ಶ್ರವಣಗೊಂಡಾತನಾದ ಈ ವಿರಕ್ತನೆ ಶಾಸ್ತ್ರದ ಕಟ್ಟು ಹಿಡಿಯಬೇಕು. ಈ ಶಿವಾನುಭವ ಚರಮೂರ್ತಿಗಳು ಆ ಶಿಷ್ಯೋತ್ತಮನಿಗೆ ಶಿವಾನುಭವ ಶಾಸ್ತ್ರವಂ ಶ್ರವಣಗೊಳಿಸಬೇಕು. ಆ ವೇಳೆಯಲಿ ಶ್ರವಣಗೊಳಿಸುವ ಗುರುಗಳು ಆ ಶಾಸ್ತ್ರದ ಕಟ್ಟು ಹಿಡಿವ ವಿರಕ್ತನು ಕೇಳುವ ಶಿಷ್ಯನು ಈ

ನಿರೂಪಿಸಿ ಆ
ಮೂವರಲ್ಲದೆ ಎರಡನೆಯವರು ಅಲ್ಲಿ ಇರಕೂಡದೆಂದು ನಿರೂಪಿಸಿ ಆ
ಮೇಲೆ ಆ ಶಾಸ್ತ್ರವಂ ಶ್ರವಣಗೊಂಡ ಶಿಷ್ಯನಂ ಸಭಾಮಧ್ಯದಿ ಗಣಪರ್ವ
ದಲ್ಲಿ ಆ ಗುರುವರನು ಶಾಸ್ತ್ರದ ಕಟ್ಟು ಹಿಡಿದ ಷಟ್‌ಸ್ಥಲ ಬ್ರಹ್ಮಿಯಾದ
ವಿರಕ್ತನು ಮುಂತಾದ ಸಕಲ ಭಕ್ತಗಣರ ಸಾಕ್ಷಿಯಾಗಿ ಗೋತ್ರವಂ
ಕೂಡಿಸಿಕೊಂಡು ಆ ಬಳಿಕ ಆ ಶಿಷ್ಯೋತ್ತಮನಲ್ಲಿ ಸಾಮರಸ್ಯವಂ ಮಾಡು
ವುದು. ಈ ಪ್ರಕಾರ ಪಡೆದಾತನು ವಿರಕ್ತನಹನು. ಈತನಿಗೆ ಶಿವಾ
ನುಭವ ಪುಸ್ತಕವೆ ಆಗಲಿ ಅಥವಾ ಪುರಾಣ ಪುಸ್ತಕವೆ ಆಗಲಿ ಇವುಗ
ಳನ್ನು ಗುರುಗಳಾದ ಚರಮೂರ್ತಿಗಳು ಸಭೆಯಲ್ಲಿ ಕೊಟ್ಟು ತಮ್ಮಾಸ
ನದಲ್ಲಿ ಕುಳ್ಳಿರಿಸಿಕೊಳ್ಳಲು ಆ ಗಣವರನೆ ಚರಮೂರ್ತಿ ಎನಿಸುವನು.
ಈ ಶಿವಾನುಭವ ಚರಮೂರ್ತಿಯು ತಮ್ಮ ಶಿಷ್ಯರಾದ ಬ್ರಹ್ಮಚಾರಿಗ
ಳಾದ ಮರಿಗಳು ಗುರು ಉಪದೇಶವಂ ಪಡೆದರೂ ಆ ಮರಿಗಳು ಕರಣ
ಹಸಿಗೆ ಮುಂತಾದ ಶಿವಾನುಭವ ಶಾಸ್ತ್ರದ ನುಡಿಕಟ್ಟುಗಳು ನೂರೊಂದು
ಸ್ಥಲದ ವಿಚಾರಗಳು ಗುರುಗಳಿಂದ ಆ ಶಾಸ್ತ್ರವಂ ಸಂಪಾದನವ ಮಾಡಿ
ಕೊಳ್ಳದವರಿಗೆ ಆ ಶಾಸ್ತ್ರದ ನುಡಿಗಳಂ ಹೇಳಕೂಡದು. ಈ ಐದು ಶಾಸ್ತ್ರ
ಬಾರದ ನಿರಕ್ಷರಿಗಳಿಗೆ ಶಿವಾನುಭವ ಚರಂತಿಗೆಯಂ ಕೊಡಕೂಡದು.
ಅಥವಾ ಅವರಿಗೆ ಕೊಡಬೇಕಾದರೆ ಪುರಾಣ ಚರಂತಿಗೆ ಪೂಜ್ಯದ
ಪೂರ್ತಿ ಕೊಡುವುದು. ಈ ಬುಡಕಟ್ಟಿನ ಚರಮೂರ್ತಿಗಳೇ ಆಗಲಿ ವಿರ
ಕ್ತರೇ ಆಗಲಿ ಇವರ ಮಠಮಾನ್ಯ ಇವರ ಸ್ಥಾವರ ಚರ ಜಿಂದಿಗೆಗಳನ್ನು
ಇವರ ಶಿಷ್ಯರುಗಳು ಇಲ್ಲದ ಪಕ್ಷದಲ್ಲಿ ಇವರ ಈ ಜಿಂದಿಗೆಗಳನ್ನು ಇವರ
ಬುಡಕಟ್ಟಿನ ಮಠಸ್ಥರು ತೆಗೆದುಕೊಳ್ಳಬಹುದು. ಎರಡನೆಯ ಬುಡಕಟ್ಟಿನ
ಮಠಸ್ಥರು ತೆಗೆದುಕೊಳ್ಳಬಾರದು ಎಂಬ ಕಾರಣದಿಂದ ಮುಂದಿನ ವಿಚಾ
ರಗಳನರಿತು ಈ ಚರವರರಲ್ಲಿ ಬುಡಕಟ್ಟೆಂಬ ನಾಮಗಳನ್ನು ಏರ್ಪಡಿಸಿ
ಇರುತ್ತದೆ. ಈ ಗಣವರರ ಮಠಗಳಲ್ಲಿ ಆ ಮಠದ ಚರಮೂರ್ತಿಗಳು
ತಮ್ಮಂತ್ಯಭಾಗದಲ್ಲಿ ತಮಗೆ ಮರಿಗಳು ದೊರೆದ ಪಕ್ಷದಲ್ಲಿ ತಮ್ಮ
ಚರಂತಿಗೆ ಕೊಡದೆ ಶಿವಾಧೀನರಾದಲ್ಲಿ ಅವರ ಮರಿಗಳಿಗು ಶಿವಾನುಭವ
ಶಾಸ್ತ್ರದ ನುಡಿಗಳ ಕಟ್ಟುಗಳನ್ನು ಸಂಪಾದಿಸಿಕೊಡಬೇಕಾದರೂ ಅವರಿಗೆ
ಚರಂತಿಗೆ ಪುಸ್ತಕವಂ ಕೊಟ್ಟು ಚರಮೂರ್ತಿಗಳ ಮಾಡಬೇಕಾದರೂ
ಅವರ ಬುಡಕಟ್ಟಿನ ಚರಮೂರ್ತಿಗಳಿಂದಾದರೆ ವಿಹಿತವು. ಇಲ್ಲದ ಪಕ್ಷ
ದಲ್ಲಿ ಒಂದು ಬುಡಕಟ್ಟಿನ ಮಠಸ್ಥರಾದ ಮರಿಗಳಿಗೆ ಮತ್ತೊಂದು ಎರ



ಡನೆಯ ಬುಡಕಟ್ಟಿನ ಶಿವಾನುಭವ ಚರಮೂರ್ತಿಗಳಾದವರ ಕಡೆಯಿಂದ
ಲಾದರೂ ವಿರಕ್ತಾಶ್ರಮ ಮುಂತಾದ ಚರಂತಿಗೆಯನ್ನಾದರೂ ಮಾಡಿಸ
ಬಹುದೆಂದು ಆ ಗಣವರರಿಗೆ ನಿರೂಪಿಸಿ ಆಶೀರ್ವಾದವಂ ಮಾಡಿ ಅಪ್ಪ
ಣೆಯಂ ಕೊಟ್ಟು ದೇಶಾಟಣಕ್ಕೆ ಕಳುಹಿದರು. ಆ ನಂತರ ಆ ಚರವರರು
ದೇಶಾಂತರವಂ ಮಾಡುತ್ತ ಗ್ರಾಮ ಪೇಟೆ ಮನೆಗೆ ದಯಮಾಡಿಸಿ
ಅಲ್ಲಿಯ ಭಕ್ತಗಣಂಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡುತ್ತ
ಅನ್ಯ ಮತಸ್ತರಾದ ಪರವಾದಿಗಳಂ ಮಹತ್ವದಿಂ ಶಾಸ್ತ್ರಮುಖದಿಂ ಗೆಲಿ
ವುತ್ತ ಶಿವಭಕ್ತಿಯನ್ನುಂಟು ಮಾಡುತ್ತ ಆ ಭಕ್ತರ ಭಕ್ತಿಯಿಂ ದೇಶ
ಮಧ್ಯದಿ ತಮ್ಮ ಮಠಮಾನ್ಯ ಕಾಣಿಕೆ ವರ್ಷಾಶನಗಳಂ ಪಡೆದು ಆ
ಮಠಗಳಲ್ಲಿ ತಮ್ಮ ಸೂತ್ರಿಕರಾದ ಮರಿಗಳಂ ಇಡುತ್ತ ದೇಶಂಗಳಲ್ಲಿ
ಭಕ್ತರಿಂ ಕಾಣಿಕೆಯಂ ಎತ್ತಿ ತಮ್ಮಯ ಗುರುಸನ್ನಿಧಿಗೆ ವಾಣಿಜ್ಯಪುರದ
ಶೂನ್ಯ ಸಿಂಹಾಸನಕ್ಕೆ ಕಾರಣಕರ್ತರಾದ ತೋಂಟದಾರ್ಯ ಸ್ವಾಮಿಗಳ
ವರ ದಾಸೋಹಕ್ಕೆ ಕಳುಹಿಸುತ್ತಲಿದ್ದರು.

ಆ ಏಳನೂರು ಬುಡಕಟ್ಟಿನ ಚರಮೂರ್ತಿಗಳ ಹಸ್ತಾಬ್ಜದಿಂದ ಸಂಜ
ನಿತರಾದ ವಿರಕ್ತರು ಮೂರುಸಾವಿರವಾದರು. ಅಂತು ಕೂಡಿ ಏಳ್ನೂರು
ಚರಮೂರ್ತಿಗಳಿಗೆ ಮೂರುಸಾವಿರ ವಿರಕ್ತ ಮಹೇಶ್ವರರಿಗೆ ತೋಂಟ
ದಾರ್ಯ ಸ್ವಾಮಿಗಳವರೆ ಜಗದ್ಗುರುಗಳೆಂದೆನಿಸಿದರು. ಈ ತೋಂಟದಾ
ರ್ಯ ಸ್ವಾಮಿಗಳಿಂದ ಸಂಜನಿತವಾದ ಬುಡಕಟ್ಟಿನ ಮಠಂಗಳು ಲೋಪ
ವಾದರೂ ಈಗ ಇರುವ ಕೆಲವು ಬುಡಕಟ್ಟಿನ ಮಠಂಗಳು ಆ ಮಠಂಗ
ಳಿಗೆ ಸೇರಿದ ಚರಮೂರ್ತಿಗಳು ವಿರಕ್ತರು ಇರುವುದೇ ಸಾಕ್ಷಿಯು. ಈ
ಚರಮೂರ್ತಿಗಳವರ ಗುರುಗಳಾದ ಕೆಲವು ಚರಮೂರ್ತಿಗಳಲ್ಲಿ ಏನಾ
ದರೂ ಒಂದು ಕಾರಣದಿಂದ ಒಬ್ಬರಿಗೊಬ್ಬರು ಮನಸ್ತಾಪವನ್ನು ಮಾಡಿ
ಕೊಂಡು ಸಮಯಗಳ ಬೇರೆ ಮಾಡಿಕೊಂಡು ಅವರವರೊಳಗೆ ಬೇರೆ
ಬೇರೆ ಬುಡಕಟ್ಟಿನ ಮಠಗಳನ್ನು ಮಾಡಿಕೊಂಡು ತಮ್ಮೊಳಗೆ ಇಪ್ಪತ್ತು
ಚರಂತಿಕೆ ವಿರಕ್ತ ಮೂರ್ತಿಗಳು ಎಂದು ಬೇರೆ ಮಾಡಿಕೊಂಡಾಗ್ಯೂ
ತೋಂಟದಾರ್ಯ ಸ್ವಾಮಿಗಳವರ ಬಳಿವಿಡಿದು ಶಿಷ್ಯ ಪರಂಪರೆಯಾಗಿ
ಬಂದ ಶಿವಾನುಭವ ಚರಂತಿಗೆ ಪಟ್ಟದ ಸೂತ್ರವುಳ್ಳ ಕಟ್ಟಿಗೆಹಳ್ಳಿ ಸ್ವಾಮಿ
ಗಳವರಿಂದ ನಡೆದ ಮೂಲಸೂತ್ರದ ಮಠ ಒಂದೇ ಗುರುಪೀಠವು.
ಇದರ ಹೊರ್ತು ನಿರಾಭಾರಿ ವೀರಶೈವರಾದ ವಿರಕ್ತ ಆಶ್ರಮದವರಿಗೆ
ಬೇರೆ ಇಲ್ಲವು.

ಮೂಲಸೂತ್ರವೆಂದರೆ ಒಂದು ವೃಕ್ಷಕ್ಕೆ ಮೂಲಬುಡದಿಂದ ಅನೇಕ
ಉಪಶಾಖೆಗಳಿದ್ದಂತೆ ಮೂಲ ತೋಂಟದಾರ್ಯರಿಂದಾದ ಅನೇಕ ಉಪ
ಸೂತ್ರವಾದ ಏಳ್ನೂರು ಬುಡಕಟ್ಟಿನ ಚರಂತಿಕೆಗಳುಳ್ಳ ಚರಮೂರ್ತಿಗ
ಳೆಂದು ತಿಳಿಯಬೇಕು. ಈ ತೋಂಟದಾರ್ಯ ಸ್ವಾಮಿಗಳವರ ಶಿವಾನು
ಭವ ಚರಂತಿಗೆ ಪಟ್ಟದ ಮೂಲಸೂತ್ರವು ಶಿಷ್ಯಪರಂಪರೆಯಾಗಿ ಗಗನ
ದಾರ್ಯರು ಮುಂತಾದ ಕಟ್ಟಿಗೆಹಳ್ಳಿ ಸಿದ್ಧವೀರ ಸ್ವಾಮಿಗಳವರ ಬಳಿವಿ
ಡಿದು ಆ ಶಿವಾನುಭವ ಪಟ್ಟವೆಂತಲು ಈ ಸೂತ್ರವಲ್ಲದೆ ಬೇರೆ ಮಧ್ಯ
ವಲ್ಲಿ ಶೀಲಾಪಟ್ಟವೆಂತಲೂ ಈ ಎರಡು ಪ್ರಕಾರ ದೇಶಮಧ್ಯದಲ್ಲಿರುವ
ಗುರುಚರಮೂರ್ತಿಗಳಲ್ಲಿ ಸಮಯಭೇದಗಳಾಗಿದಾಗ್ಯೂ ಆ ಮೂಲಸೂತ್ರವು
ಉಳ್ಳ ಮಠಗಳು ಈಗ ಇದ್ದು ಆ ಮಠಗಳಲ್ಲಿ ಗುರುಪಾರಂಪರ್ಯವಾಗಿ
ನಡೆದುಬಂದ ಗುರುಸೂತ್ರಿಕರಾದ ಶೂನ್ಯಸಿಂಹಾಸನಾರೂಢರಾದ ಗುರು
ಗಳೇ ಜಗದ್ಗುರುಗಳೆಂದು ನಿಶ್ಚಯಿಸಿಕೊಳ್ಳುವುದು.

ತೋಂಟದಾರ್ಯ ಸ್ವಾಮಿಗಳವರು ಕೆಲವು ದಿವಸವು ವಾಣಿಜ್ಯ
ಪುರದ ಬೃಹನ್ಮಠದಿ ಆ ಗಣವರರ ಕಡೆಯಿಂದ ದೇಶಗಳಲ್ಲಿ ಇದ್ದ ಭಕ್ತ
ಮಾಹೇಶ್ವರರಿಂದ ಕಾಣಿಕೆಯಂ ತರಿಸಿಕೊಳ್ಳುತ್ತ ತಿರುಗಿಬಿದ್ದ ಜನರಿಗೆ
ಬಹಿಷ್ಕಾರವಂ ಸ್ಥಾಪಿಸುತ್ತ ಶರಣಾಗತರಾದವರ ಕಡೆಯಿಂದ ಅಪರಾ
ಧಗಾಣಿಕೆಯಂ ಕೈಕೊಳ್ಳುತ್ತ ದುಷ್ಟರಂ ಶಿಕ್ಷಿಸುತ್ತ ಸಾಧುಗಳಂ ರಕ್ಷಿ
ಸುತ್ತ ಅಲ್ಲಿಯ ಭಕ್ತಮಾಹೇಶ್ವರರಿಂ ಪೂಜೋತ್ಸಹಂಗಳಿಂ ೭೨ ಬಿರುದು
ಗಳೊಡನೆ ನಿತ್ಯೋತ್ಸಹಂಗೊಳ್ಳುತ್ತ ಇರ್ದು ಆ ಬಳಿಕ ಅಲ್ಲಿಯ ಭಕ್ತ
ಗಣಂಗಳಿಗೆ ಕ್ರಿಯಾ ಕಟ್ಟಳೆಗಳು ನಡೆಯುವ ಬಗ್ಗೆ ತಮ್ಮ ಮಠದಲ್ಲಿ
ಚರಮೂರ್ತಿಗಳನಿಟ್ಟು ತಮ್ಮಯ ಆಂದೋಳಿಕ ಮುಂತಾದ ೭೨ ಬಿರು
ದುಗಳೊಡನೆ ಗಣಸಮೂಹಗಳಿಂದ ವಾಣಿಜ್ಯಪುರವಂ ಬಿಟ್ಟು ದೇಶ
ದೇಶಗಳಲ್ಲಿ ಉತ್ಸಹಂಗೊಳ್ಳುತ್ತ ಅಲ್ಲಿರುವ ಜೋಗಿನಾಥರು, ಸಿದ್ಧರು
ವೈಷ್ಣವ, ಬೌದ್ಧ, ಜೈನ, ಚಾರ್ವಾಕ, ಕಾಳಾಮುಖ ಮುಂತಾದವರಂ
ಶಾಸ್ತ್ರಮುಖದಿಂ ಮಹತ್ವದಿಂ ಗೆಲಿದು, ಅವರಿಗೆ ಶಿವಭಕ್ತಿಯನುಂಟು
ಮಾಡುತ್ತ ಕೆಲವು ಜನರಿಗೆ ಲಿಂಗಧಾರಣವಂ ಮಾಡಿಸಿ ವೀರಶೈವವಂ
ಉದ್ಧರಿಸುತ್ತ ಸತ್ತವರಿಗೆ ಪ್ರಾಣವಂ ಕೊಡುತ್ತ ಬಂಜೆಯರಿಗೆ ಮಕ್ಕಳ
ಫಲಂಗಳಂ ಕೊಡುತ್ತ ಕುಷ್ಠರೋಗ ಮುಂತಾದ ಅನೇಕ ವ್ಯಾಧಿಪೀಡಿ
ತರು ಬ್ರಹ್ಮರಾಕ್ಷಸ ಪಿಶಾಚ ಭೂತ ಪ್ರೇತ ಮುಂತಾದ ಪೀಡಿತರು ಬಂದು



ಶರಣಾಗತರಾದಲ್ಲಿ ಅವುಗಳನು ದೂರಮಾಡುತ್ತ ಶರಣಗಣಂಗೆ ಷಟ್
ಸ್ಥಲಜ್ಞಾನೋಪದೇಶವಂ ಮಾಡಿ ಮೋಕ್ಷ ಮಾರ್ಗವನೀವುತ ಸಕಲ
ದೇಶಂಗಳ ಸಂಚರಿಸಿ ಆ ಬಳಿಕ ಚೋಳದೇಶದಲ್ಲಿ ಕಂಚಿ ಕಾಳ
ಹಸ್ತಿ ಚಿದಂಬರ ಮುಂತಾದ ಸಕಲ ಕ್ಷೇತ್ರಂಗಳಿಗೆ ಚಿತ್ತೈಸಿ ಅಲ್ಲಿ
ಯೂ ಅನೇಕ ಮಹಿಮೆಗಳಂ ತೋರುತ್ತ ತಿರುಣಾಮಾಲೆಗೆ ದಯ
ಮಾಡಿಸಿ ಆ ಕ್ಷೇತ್ರದಲ್ಲಿಯು ತಮ್ಮ ಮಠದಲ್ಲಿ ಲಿಂಗಪೂಜಾ ದಾಸೋಹವಂ
ಮಾಡುತ್ತಿರಲು ಆ ಕ್ಷೇತ್ರಕ್ಕೆ ಅಧಿಪತಿಯಾದ ಅರುಣಾಚಲೇಶ್ವರಲಿಂಗವು
ತನ್ನರ್ಚಕನಾದ ದೀಕ್ಷಿತನ ಸ್ವಪ್ನದಿ ತನಗೆ ಹಿಂದೆ ಚೋಳರಾಯನು
ಒಪ್ಪಿಸಿದ ನವರತ್ನ ಹಾರ ಪದಕ ಸಹಿತವಾಗಿ ನಮ್ಮ ಕ್ಷೇತ್ರದಲ್ಲಿರುವ
ತೋಂಟದ ಯತೀಶನಿಗೆ ಕಾಣಿಕೆಯಂ ಕೊಡುವುದೆಂದು ಅಪ್ಪಣೆ ಆದ
ಪ್ರಕಾರ ಆ ದೀಕ್ಷಿತನು ಆಹಾರಪದಕವಂ ಸ್ವಾಮಿಗಳವರಿಗೆ ಒಪ್ಪಿಸಲು
ಈ ಪದಕವುಳ್ಳ ರತ್ನಹಾರವನು ಸ್ವಾಮಿಗಳವರು ತಮ್ಮಯ ಶಿಷ್ಯರುಗ
ಳಲ್ಲಿ ಒಬ್ಬ ಗಣವರನ ಕೊರಳೊಳಗೆ ಹಾಕಲು ಆ ಗಣವರರ ಸಕಲರು
ಕಂಡು ಸಹಿಸಲಾರದೆ ಸ್ವಾಮಿಗಳವರು ತನಗೆ ಕೊಡಲಿಲ್ಲ ನನಗೆ ಕೊಡ
ಲಿಲ್ಲವೆಂದು ತಮ್ಮ ತಮ್ಮೊಳಗೆ ಕಲಹಂಗಳ ಮಾಡಿರ್ದುದಂ ಸ್ವಾಮಿಗ
ಳವರಿಗೆ ತಿಳಿದು ಸ್ವಾಮಿಗಳವರು ಈ ಪಟ್ಟವೆಂಬ ಲಂಪಟವು ತಮಗೆ
ಇದ್ದ ಕಾರಣದಿಂ ಈ ರಾಜಾಂಗವಾದ ಆಂದೋಳಿಕ ಮುಂತಾದ ೭೨ ಬಿರು
ದುಗಳು ಇವಕ್ಕೆ ತಕ್ಕ ಆನೆ ಕುದುರೆ ಒಂಟೆ ಕಾಲಾಳುಗಳು ಮುಂತಾದ
ಗಣಸಂದಣಿ ಇರುವುದನು ಸಹಿಸಬೇಕಾಯಿತು. ಈ ಪಟ್ಟದಿಂ ಕಾರಣ
ವಿಲ್ಲವೆಂದು ತಿಳಿದು ಆ ತಿರುಣಾಮಾಲೆಯಲ್ಲಿರುವ ಭಕ್ತಗಣರು ಮುಂತಾದ
ಸಕಲ ಪ್ರಜಂಗಳಂ ಕರೆತರಿಸಿ ಅವರ ಮುಂತಿಟ್ಟುಕೊಂಡು ತಮ್ಮಯ
ಶಿವಾನುಭವ ಚರಂತಿಗೆ ಪಟ್ಟವಂ ನಿರಕ್ಷರ ಬೋಳಬಸವೇಶ್ವರ ಸ್ವಾಮಿ
ಗಳವರಿಗೆ ಮಾಡಿ ತಮ್ಮಯ ಬಳಿಯಲ್ಲಿರ್ದ ಗಣ ಸಮೂಹ ಮುಂತಾದ
೭೨ ಬಿರುದುಗಳುಳ್ಳ ಸಕಲ ಸಂಭ್ರಮವನೊಪ್ಪಿಸಿ ಆ ನಿರಕ್ಷರ ಬೋಳ
ಬಸವರಾಜೇಂದ್ರ ಸ್ವಾಮಿಗಳವರು ಮುಂತಾದ ಗಣಸಮೂಹವನ್ನು ದೇಶಾ
ಟಣಕ್ಕೆ ಕಳುಹಿಸಿಕೊಟ್ಟು ಆ ಮೇಲೆ ತೋಂಟದಾರ್ಯ ಸ್ವಾಮಿಗಳ
ವರು ಕೆಲವು ಗಣವರರು ಸಹಿತವಾಗಿ ದೇಶಾಂತರವಂ ಮಾಡುತ್ತ
ಕರ್ನಾಟಕ ದೇಶವಾದ ಮೈಸೂರು ಸೀಮೆಯಲಿ ತಮ್ಮ ಗುರುಗಳಾದ
ಗೋಸಲಸಿದ್ಧೇಶ್ವರ ಸ್ವಾಮಿಗಳು ವಾಸಿಸಿದ ಸ್ಥಳ ಸಿದ್ಧಗಂಗೆಬೆಟ್ಟಕ್ಕೆ

ದಯಮಾಡಿಸಿ ಅಲ್ಲಿ ಶಿವಯೋಗಾನಂದದಿಂದ ಸ್ವಲ್ಪ ದಿವಸವಿರ್ದು ಆ
ಸೀಮೆಯನ್ನು ದೇಶಾಂತರವಂ ಮಾಡುತ್ತ ಇರುವಲ್ಲಿ ಆ ಸೀಮೆಯಲ್ಲಿ
ರುವ ಕಗ್ಗೇರಿ ಎಂಬ ಗ್ರಾಮದಲ್ಲಿರುವ ನಿಂಬೆಣ್ಣನೆಂಬ ಶೆಟ್ಟಿಯು ಆ
ಗೌಡರು ಮುಂತಾದ ಸಕಲ ಭಕ್ತರಂ ಕರೆದುಕೊಂಡು ಸ್ವಾಮಿಗಳವರ
ಸನ್ನಿಧಿಗೆ ಫಲಪುಷ್ಪವಂ ನಿರಿಸಿ ಸಾಷ್ಟಾಂಗವೆರಗಿ ಭಯಭಕ್ತಿ ಕಿಂಕರ
ತ್ವದಿಂ ಬಿನ್ನಹಂ ಮಾಡಲು ಸ್ವಾಮಿಗಳವರು ನಿಂಬೆಣ್ಣ ಮುಂತಾದ
ಸಕಲ ಭಕ್ತರುಗಳಿಗೆ ನಿಮ್ಮಯ ಬಿನ್ನಹಂ ಒಪ್ಪಿ ನಿಮ್ಮ ಗ್ರಾಮಕ್ಕೆ
ಬರುವುದಿಲ್ಲವು. ಕಾರಣವೇನೆಂದರೆ ನಿಮ್ಮ ಗ್ರಾಮದಲ್ಲಿ ನೀವು ಸಹಿತ
ವಾಗಿ ದಂಡಿನ ಹಾವಳಿಯಿಂದ ಸಕಲ ಪ್ರಜೆಗಳು ಗೂಳೆಯಂ ಮುಂದೆ
ತೆಗೆಯುವದು ಇದೆ. ಅದರಿಂದ ಬೇಡವೆನಲು ಅದಕ್ಕೆ ನಿಂಬೆಣ್ಣ ಶೆಟ್ಟಿಯು
ಸ್ವಾಮಿಗಳವರಿಗೆ ಬಿನ್ನೈಸಿಕೊಂಡುದೇನೆಂದರೆ ತಾವು ದಯಮಾಡಿಸುವಿ
ರೆಂದು ಪಾಕ ಪ್ರಯತ್ನವಂ ಮಾಡಿಸಿ ಪಾದ ಸನ್ನಿಧಿಗೆ ಬಂದು ಬಿನ್ನಹಂ
ಮಾಡಿ ಇದ್ದೇನೆ, ಬಡ ಭಕ್ತನ ಮೇಲೆ ಕರುಣವಿಟ್ಟು ಚಿತ್ತೈಸುವುದು
ಮುಂದಿನ ದಂಡಿನ ಉಪದ್ರವವಿದ್ದರೆ ಆಗ್ಗೆ ನೋಡಿಕೊಳ್ಳಬಹುದೆಂದು
ಬಹುತೆರನಾಗಿ ಅರಿಕೆಮಾಡಿಕೊಂಡ ಕಾರಣದಿಂ ಸ್ವಾಮಿಗಳವರ ಚಿತ್ತ
ದಲ್ಲಿ ಕರುಣ ಹುಟ್ಟಿ ಆ ಭಕ್ತರ ಸಂಗಡ ಕಗ್ಗೇರಿಗೆ ದಯಮಾಡಿಸಲು
ನಿಂಬೆಣ್ಣಶೆಟ್ಟಿಯು ಆ ಊರ ತೋಟದಲ್ಲಿರ್ಪ ಒಂದು ಮಾವಿನ ಗಿಡದ
ನೆರಳಿನಲ್ಲಿ ಗದ್ದಿಗೆಯಂ ಹಾಕಿ ಅವರ ಮೇಲೆ ಸ್ವಾಮಿಗಳವರನ್ನು ಮೂರ್ತವಂ
ಮಾಡಿಸಿ ತಾನು ಊರ ಒಳಿಯಕ್ಕೆ ಹೋಗಿ ವಾದ್ಯಗಳಿಂದ ಉತ್ಸಹ
ದೊಡನೆ ಮನೆಗೆ ಕರೆದುಕೊಂಡು ಪೋಗುವೆನೆಂದು ಅಪ್ಪಣೆಯಂ ತೆಗೆ
ದುಕೊಂಡು ಪೋದನು. ಅಷ್ಟರೊಳಗಾಗಿ ವಾಲ್ಮೀಕಿಯ ಕುಲದರಸ
ನಾದ ರತ್ನಗಿರಿಯ ದೊರೆಯು ತನ್ನಯ ದಂಡನು ತೆಗೆದುಕೊಂಡು
ಬಂದು ಆ ಊರನ್ನು ಸೆರೆ ಸೂರೆಯಂ ಮಾಡಿ ಸುಲಿಗೆಯಂ ಮಾಡಲು
ಈ ದಂಡಿಗಂಜಿ ನಿಂಬೆಣ್ಣ ಶಟ್ಟಿಯು ಮಾಡಿಸಿದ ಪಾಕವಂ ಒಂದು ಹಗೆ
ಯದ ಬಾಯ ತೆಗಿಸಿ ಅದರೊಳಗಿಟ್ಟು, ಬಾಯ ಮುಚ್ಚಿಸಿ ಕುಟುಂಬ
ಸಹಿತವಾಗಿ ಆ ಊರ ಗೌಡ ಮುಂತಾದ ಸಕಲ ಪ್ರಜೆಗಳು ಆ ಊರ
ಬಿಟ್ಟು ಪೋಗಲು ಆ ದಂಡಿನವರು ಆ ಗೌಡ ಮುಂತಾದವರ ಹಿಡಿ
ಯಬೇಕೆಂದು ಪೋಗಲು ಆ ಗೌಡ ಮುಂತಾದ ಸಕಲ ಪ್ರಜೆಗಳು
ನಿಡುಗಲ್ಲರಸನ ಸೀಮೆಗೆ ಪೋಗಲು ಆ ದಂಡಿನವರು ಕಗ್ಗೇರಿಗೆ ಬಂದು



ಆ ಊರಲ್ಲಿರುವ ಮನೆಗಳನು ಸುಟ್ಟು ದನಕರುಗಳೆಲ್ಲವನು ಹೊಡೆದುಕೊಂಡು
ಹೋಗಲು ಆ ಊರು ಹಾಳು ಬಿತ್ತು. ಆ ದಂಡಿನ ಭಯದಿಂದ ಸ್ವಾಮಿ
ಗಳವರ ಸನ್ನಿಧಿಯಲ್ಲಿ ಇದ್ದ ಶಿಷ್ಯರು ಪೋಗಲು ಸ್ವಾಮಿಗಳವರು
ಒಬ್ಬರೇ ಆದರು. ಆ ಬಳಿಕ ಸ್ವಾಮಿಗಳವರು ಆ ಕಗ್ಗೇರಿಶೆಟ್ಟಿಯ
ಬಿನ್ನಹದಲ್ಲಿ ಸಿಲ್ಕಿದ ಕಾರಣ ಅವನು ಬರುವ ತನಕ ಅದೇ ಗ್ರಾಮದ
ಲ್ಲಿರಬೇಕಾಯಿತು. ವಿರಕ್ತಮೂರ್ತಿಗಳು ಕಾಲವ್ಯತ್ಯವಾಯಿ ಕಾವು
ಇವುಗಳಿಗೆ ಸಿಲ್ಕಿದವರಲ್ಲ. ಭಕ್ತಿ ಎಂಬ ಕಟ್ಟು ಒಂದಕ್ಕೆ ಶಿಲ್ಕಿದವರಾದ
ಕಾರಣ ಕಗ್ಗೇರಿ ತೋಟದ ಮಾವಿನ ವೃಕ್ಷದ ನೆರಳಿನಲ್ಲಿ ಆ ತೋಟದ
ಕೂಪದಲ್ಲಿ ಸ್ನಾನವಂ ಮಾಡಿ ಆ ವೃಕ್ಷದಡಿಯಲ್ಲಿ ಶಿವಪೂಜೆ ಗದ್ದಿ
ಗೆಯಂ ಹಾಕಿಕೊಂಡು ಪೂಜಾಸಂಗ್ರಹವಾದ ಉದಕ, ಪತ್ರೆ, ಪುಷ್ಪ,
ಭಸಿತ, ಗಂಧಾಕ್ಷತೆ ಮುಂತಾದವಂ ಇಟ್ಟುಕೊಂಡು ಸ್ಥಿರಮಾನಸರಾಗಿ
ಪದ್ಮಾಸನದಿಂ ಮೂರ್ತವಂ ಮಾಡಿ ಸ್ನಾನ ಧೂಳನ ಧಾರಣಪೂರ್ವಕ
ವಾಗಿ ಭಸ್ಮವಂ ಧರಿಸಿ ರೇಚಕ, ಪೂರಕ, ಕುಂಭಕವೆಂಬ ಶಿವಯೋ
ಗವಂ ಪಿಡಿದು ಹೃದಯ ಶುದ್ಧ ಪರಿಪೂರ್ಣ ಭಾವದಿಂದೀಕ್ಷಿಸುತ್ತ ಶ್ರೀ ಇಷ್ಟ
ಲಿಂಗಮೂರ್ತಿಗೆ ಶ್ರೀ ರುದ್ರ ಪಂಚಬ್ರಹ್ಮ ಮಂತ್ರದಿಂದಭಿಷೇಕವಂ ಮಾಡಿ
ಆ ಲಿಂಗಮೂರ್ತಿಗೆ ಭಸಿತ, ಗಂಧಾಕ್ಷತೆ, ಪತ್ರೆ, ಪುಷ್ಪ ಮೊದಲಾದ
ಷೋಡಶೋಪಚಾರ ನವವಿಧ ಭಕ್ತಿಯಿಂದ ಇಷ್ಟ ಪ್ರಾಣ ಭಾವಲಿಂಗ
ಪೂಜಾನುಷ್ಠಾನದೊಡನೆ ಚಿತ್ರದೊಳಗಿನ ಬೊಂಬೆಯಂತೆ ಸ್ಥಿರದೃಷ್ಟಿಯಿಂ
ದೇಹವಂ ಮರೆದು ಕರಮನಭಾವ ಏಕಾಗ್ರಚಿತ್ತರಾಗಿ ಈ ಲೋಕವಂ
ಮರೆದು ಹಸಿವು, ತೃಷೆ, ನಿದ್ರೆ ಮುಂತಾದವುಗಳಂ ದೂರ ಮಾಡಿ
ಮೂರ್ತವಂ ಮಾಡಿರಲು ಆ ಸ್ವಾಮಿಗಳವರು ಮೂರ್ತ ಮಾಡಿದ
ಗದ್ದಿಗೆಗೆ ಗೆದ್ದಲಿಯು ಏರಿ ಸ್ವಾಮಿಗಳವರು ಕಾಣದಂತೆ ಗುಡಿಯ
ಮುಂದಣ ಗೋಪುರದಂತೆ ಹುತ್ತವು ಬೆಳೆದು ಆ ಹುತ್ತದೊಳಗೆ ಅನೇಕ
ಸರ್ಪ ವೃಶ್ಚಿಕ ಹವಳ ಜರಿ ಮುಂತಾದ ಸಕಲ ಪ್ರಾಣಿಗಳು ಸೇರಿ
ಕೊಂಡವು.

ಇತ್ತ ಕಗ್ಗೇರಿಯ ಗಿರಿಗೌಡ ನಿಂಬೆಣ್ಣಶೆಟ್ಟಿ ಮುಂತಾದ ಸಕಲ
ಪ್ರಜೆಗಳು ದಂಡಿನ ಹಾವಳಿಯಿಂದ ಊರ ಬಿಟ್ಟು ಹೋದವರು ಏಳು
ಎಂಟು ವರುಷದ ಮೇಲೆ ತಮ್ಮ ಗ್ರಾಮವಾದ ಕಗ್ಗೇರಿಗೆ ಬಂದು
ತಮ್ಮ ತಮ್ಮ ಮನೆಗಳಂ ಕಟ್ಟಿಸಿಕೊಂಡು ಆ ಮನೆಗಳಲ್ಲಿ ತಮ್ಮ ಕುಟುಂ

ಬಗಳೊಡನೆ ಹೊಂದಿಕೊಂಡರು. ಆ ಸ್ವಾಮಿಗಳವರು ಆ ಊರ ಭೂಮಿಯಲ್ಲಿದ್ದ ಕಾರಣ ಆ ಊರ ತೋಟ ಹೊಲ ಭೂಮಿಗಳಲ್ಲಿ ಬಿತ್ತಿದ ಪೈರುಗಳು ಬೆಳೆದವು. ಎಂದರೆ ಮಳೆಯಿಂದ ಬೆಳೆಯಿಂದ ಸಕಲ ಪೈರುಗಳಿಂದ ಧನಧಾನ್ಯಗಳಿಂದ ದನಕರಗಳಿಂದ ಕೊರಡು ಚಿಗಿತವು. ಬರಡು ಹಯನಾದವು. ಬಂಜೆಯರು ಹಡೆದರು. ಮತ್ತು ಆ ಊರು ಮುಂತಾದ ಆ ಸೀಮೆಯ ದನಕರು ಸಕಲ ಪ್ರಜೆಗಳಿಗೆ ರೋಗ ಕಷ್ಟ, ದಾರಿದ್ರ್ಯ, ದುಃಖ, ಸಂಕಟ, ಕಂಟಕಗಳು ಕಾರ್ಯಹಾನಿಗಳು ಮುಂತಾದವುಗಳು ಒಂದು ಇಲ್ಲದೆ ಇರುವುದರಿಂದ ಸಂತೋಷಮಾನಸರಾಗಿ ಇರುವ ಕಾರಣ ಆ ಭಕ್ತರು ಆ ಸ್ವಾಮಿಗಳವರಿಗೆ ಬಿನ್ನಹವಂ ಮಾಡಿ ಕರೆತಂದಿದ್ದುದನು ಮರೆದು ಸುಖರೂಪದಿಂದ ಇದ್ದರು.

ಇತ್ತ ನಿಂಬೆಣ್ಣ ಶೆಟ್ಟಿಯ ಮನೆಗೋವು ದಿನಚರಿ ಆ ಊರ ತೋಟದಲ್ಲಿರುವ ಮಾವಿನ ಗಿಡದ ಕೆಳಗಿನ ಹುತ್ತದ ಮೇಲೆ ನಿಂತು ಕ್ಷೀರವನು ಕರೆದು ಒಬ್ಬರಿಗೆ ತಿಳಿಯದಂತೆ ತನ್ನ ಒಡೆಯನಾದ ಶೆಟ್ಟಿಯ ಮನೆಗೆ ಬರುತ್ತಿತ್ತು. ಇದನು ಆ ಶೆಟ್ಟಿ ಮನೆಯ ಹೆಣ್ಣುಮಕ್ಕಳು ತಿಳಿಯದೆ ಆ ಗೋವಿನ ಕರವನ್ನು ಹಾಲ ಕುಡಿಯಲು ಬಿಟ್ಟು ಹಾಲು ಹಿಂಡಲು ಹೋಗಲು ಆಕಳ ಕರ ಮುಂತಾದಾರಿಗೂ ಕೊಡಲಿಲ್ಲವಾದ ಕಾರಣ ಈ ವರ್ತಮಾನವನು ಯಜಮಾನನಾದ ಶೆಟ್ಟಿಗೆ ಹೇಳಿದರು. ಇದು ಶೆಟ್ಟಿಗೆ ತಿಳಿದ ನಂತರ ಶೆಟ್ಟಿಯೇ ಆಕಳವನ್ನು ಕಾಯಿದು ಅಡವಿಯಲ್ಲಿ ಮೇಯಿಸಲಿಕ್ಕೆ ಹೋದನು. ಈ ಶೆಟ್ಟಿಯು ಆಕಳ ಕೂಡ ಇದ್ದರೂ ಇವನಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗಿ ಹಾಲು ಕರೆದು ಬಂದಿತು. ಇದನು ಈ ಪ್ರಕಾರ ಆ ಶೆಟ್ಟಿಯು ನೋಡಿ ಸಂಶಯವುಳ್ಳವನಾಗಿ ಆ ಅಡವಿಯಲ್ಲಿ ಆ ಎರಡನೆಯ ಗ್ರಾಮದ ಕಿರಾತರಾದ ಬೇಟಿಕಾರರು ಹೋಗುವುದನ್ನು ಕಂಡು ಅವರ ಕರೆದು ಅವರ ಮುಂದೆ ಶೆಟ್ಟಿಯು ನನ್ನ ಮನೆಯ ಆಕಳವು ಇಲ್ಲಿಂದ ಅಡವಿಯಲ್ಲಿ ಮೇಯಿದು ರಾತ್ರೆ ಕಾಲಕ್ಕೆ ಮನೆಗೆ ಹೋಗುವಾಗ್ಗೆ ಈ ಆಕಳ ಕೆಚ್ಚಲಲ್ಲಿ ಹಾಲು ಇರುವದಿಲ್ಲ. ಕರವಿಗೂ ಕೊಡುವುದಿಲ್ಲ. ಆ ಕರುವಿಗೆ ಎರಡನೆಯ ದನದ ಹಾಲು ಕುಡಿಸುತ್ತೇವೆ. ಮುಂಜಾವು ಆಕಳವು ಅಡವಿಗೆ ಮೇಯಲಿಕ್ಕೆ ಹೋಗುವಾಗ್ಗೆ ಕೆಚ್ಚಲಲ್ಲಿ ಹಾಲು ಇರುತ್ತವೆ. ಇದನೆ ನಾನು ನೋಡಬೇಕೆಂದು ಆಕಳನ್ನು ಮೇಯಿಸಲಿಕ್ಕೆ ಬಂದರೂ ನನಗೆ ತಿಳಿಯದಂತೆ



ಹೋಗಿ ಹಾಲು ಕರೆದು ಬರುತ್ತಿದೆ. ಇದನು ತಿಳಿಯದೆ ಸುಮ್ಮನೆ ನಮ್ಮ ಮನೆ ದನಗಳ ಕಾಯುವ ಮನುಷ್ಯನು ಈ ಆಕಳ ಹಾಲು ಕರೆದುಕೊಂಡು ಕುಡಿಯುತ್ತಾನೆಂದು ಅವನ ಬಡಿದೆನು. ಈ ಆಕಳ ಮಾಡುವ ಕೃತ್ಯವನು ಅವನು ಹೇಳಿದರು ನಂಬಿಗೆ ಇಲ್ಲದೆ ನಾನೇ ಕಾಯ್ದರೂ ಎನಗೆ ಟಕ್ಕು ಹಚ್ಚಿ ಈ ಆಕಳು ಹಾಲು ಕರೆದು ಬರುತ್ತಿದೆ ಎಂದು ಆ ಬೇಂಟಿಗಾರರ ಮುಂದೆ ಹೇಳಲು ಅವರು ಈಗ ನೀವು ಈ ಊರ ಬಿಟ್ಟು ೧೦—೧೨ ವರುಷವಾದೀತು ಅಂದಿನಿಂದ ನಿಮ್ಮೂರು ಹಾಳಾಗಿ ಆ ಊರಲ್ಲಿ ಮೃಗಜಾತಿಗಳು ಸೇರಿಕೊಂಡು ಇದ್ದು ನಿಮ್ಮೂರ ತೋಟ ಮುಂತಾದ ಸ್ಥಳಗಳಲ್ಲಿ ಎರಡು ತಿಂಗಳಿಗೊಮ್ಮೆ ಬಂದು ಬೇಂಟಿಯಾಡುವದುಂಟು. ಈ ಊರ ಹಾಳ ತೋಟದಲ್ಲಿರುವ ಬಾವಿಯ ದಡದಲ್ಲಿದ್ದ ಮಾವಿನ ಮರದ ಕೆಳಗೆ ಒಂದು ಎರಡು ಆಳ ಪ್ರಮಾಣದುದ್ದ ಒಂದು ದೊಡ್ಡ ಹುತ್ತವಿದೆ. ಅದರ ಮೇಲೆ ಅವ ಆಕಳೋ ಅದು ನಮಗೆ ತಿಳಿಯದು ಅದು ಬಂದು ಹಾಲು ಕರೆವುದುಂಟು. ಅದನು ಆವಾಗಾದರೂ ಒಂದು ವೇಳೆ ನಾವು ಕಾಣುವುದುಂಟು. ಇದು ಏನೋ ಮಹಿಮಾ ಸ್ಥಳವೆಂದು ತಿಳಿದುಕೊಂಡು ಇದ್ದೆವು. ಈಗ ನೀವು ನಿಮ್ಮೂರಿಗೆ ಪ್ರಜೆಗಳು ಬಂದು ತೋಟ ಮೊದಲಾದವು ಸಾಗುವಾದ ಮೇಲೆ ಈಗ ನಾಲ್ಕೈದು ವರುಷದಿಂದ ನಿಮ್ಮಲ್ಲಿಯ ತೋಟಗಳಿಗೆ ನಾವು ಬಂದಿಲ್ಲ. ಆದರೆ ನೀವು ನಿಮ್ಮೂರಿಗೆ ಬಂದ ಬಳಿಕ ನಿಮ್ಮಾಕಳು ಅದೇ ಹುತ್ತದ ಮೇಲೆ ಮೊದಲಿನಾಕಳಂತೆ ಹಾಲು ಕರೆದು ಬರುತ್ತಿದ್ದೀತು. ಇದನು ನೀವು ನೋಡುವುದೆಂದು ಆ ಬೇಂಟಿಗಾರರು ಶೆಟ್ಟಿಗೆ ಹೇಳಿಹೋಗಲು ಆ ಬೇಂಟಿಗಾರರ ಮಾತಿನ ಮೇಲಿಂದ ಹಿಂದೆ ತೋಂಟದಾರ್ಯ ಸ್ವಾಮಿಗಳವರಿಗೆ ಈ ಊರ ಗೌಡ ಮೊದಲಾದವರ ಕರೆದುಕೊಂಡು ಹೋಗಿ ಬಿನ್ನಹವಂ ಮಾಡಿ ನಮ್ಮೂರಿಗೆ ಕರೆತಂದು ತೋಟದಲ್ಲಿರುವ ಮಾವಿನ ಮರದಡಿಯಲ್ಲಿ ಮೂರ್ತವ ಮಾಡಿಸಿದ್ದುಂಟು ಎಂದು ತನ್ನೂರ ಗೌಡ ಮುಂತಾದ ಸಕಲ ಪ್ರಜೆಗಳನ್ನು ನಿಂಬೆಣ್ಣ ಶೆಟ್ಟಿಯು ಈ ವಿಚಾರವನ್ನು ತಿಳಿಸಿ ಇವರೆಲ್ಲರನು ಕರೆದುಕೊಂಡು ತಮ್ಮೂರ ತೋಟದಲ್ಲಿ ಆ ಬೇಟಿಗಾರರು ಹೇಳಿದ ಪ್ರಕಾರ ಹುಡುಕುವಲ್ಲಿ ಆ ಸ್ಥಳವು ದೊರೆತು ಆ ಹುತ್ತದ ಮೇಲೆ ಗೋವಿನ ನಾಲ್ಕು ಪಾದಗಳು ಮೂಡಿದ್ದು ನೋಡಿ ಸ್ವಾಮಿಗಳವರು ಇಲ್ಲೇ ಮೂರ್ತವ ಮಾಡಿದ್ದು ನಿಜವು. ಅವರ ಮೇಲೆ ಹುತ್ತು ಬೆಳೆದು ಇರುವುದರಿಂದ ಅವರಿಗೆ ಸಾಂಬನೆ ಈ ಗೋವು

ಗಳ ಮುಖದಿಂದ ಲಿಂಗಾರ್ಪಿತವ ಮಾಡಿಸುತ್ತಾನಲ್ಲದೆ ಬೇರಲ್ಲವೆಂದು
ಸಕಲರು ಮಾತನಾಡಿ ಈ ವಿರಕ್ತರಿಗೆ ಭಕ್ತಿಕಟ್ಟು ಒಂದು ಇರುವುವ
ರಿಂದ ಆಶ್ರಮದ ಗುರುಗಳಾದ ಕಾರಣ ಸ್ವಾಮಿಗಳಹುದೆಂದು ತಿಳಿದು
ನಾವು ಇವೊತ್ತಿಗೆ ನಮ್ಮೂರ ಬಿಟ್ಟು ಹೋಗಿಬಂದದ್ದು ಹಿಡಿದರೆ ೧೨
ವರುಷವಾಗುತ್ತದೆ. ಅಯ್ಯೋ ಶಿವಶಿವ, ನಮಗೇಕೆ ಈ ಸ್ವಾಮಿಗಳವರಿಗೆ
ಬಿನ್ನಹವಂ ಮಾಡಿ ಕರೆತಂದಾಗ್ಗೆ ದಂಡಿನವಾಂತರ ಬಂದು ನಾವು ತಿಳಿ
ಯದೆ ಹೋದೆವು, ಈಗ ನಾಲ್ಕೈದು ವರುಷ ಈ ಊರಿಗೆ ಬಂದಾದರೂ
ನಮ್ಮೆಲ್ಲರೊಳಗು ಒಬ್ಬರಿಗು ನೆನಪಿಗೆ ಬರಲಿಲ್ಲವಲ್ಲ! ನಾವು ಇಷ್ಟು
ದಿವಸ ಈ ವಿಚಾರವಿಲ್ಲದುದು ನಮ್ಮದು ಅನ್ಯಾಯವೆಂದು ದುಃಖವನು
ಮಾಡಿ ನಾವು ಇಲ್ಲಿದ್ದರೆ ಗೋವು ಬಂದು ಹಾಲು ಕರೆಯಲಿಕ್ಕೆ ಇಲ್ಲ
ವೆಂದು ಎಲ್ಲವರು ಪಶ್ಚಾತ್ತಾಪದಿಂದ ಊರಿಗೆ ಹೋಗಿ ಸ್ವಾಮಿಗಳವರ
ಧ್ಯಾನದಿಂದ ತಮ್ಮ ಮನೆಗಳಲ್ಲಿ ಆವೊತ್ತಿನ ದಿವಸ ಊರಲ್ಲಿದ್ದು ಮರು
ದಿವಸ ಊರಲ್ಲಿರುವ ಗೌಡರೊಬ್ಬರನ್ನು ಕರೆದುಕೊಂಡು ಉಳಿದ ಗೃಹಸ್ಥರಂ
ಬಿಟ್ಟು ತಾವಿಬ್ಬರು ಆ ಹುತ್ತವಿರುವ ತೋಂಟಕ್ಕೆ ಹೋಗಿ ಆ ಹುತ್ತ
ತಮಗೆ ಕಾಣುವಂತೆ ಒಂದು ಮರದ ಮೇಲೆ ಕುಳಿತುಕೊಂಡು ನೋಡು
ತ್ತಿರಲು ಆ ಶೆಟ್ಟಿಯ ಆಕಳು ಅಡವಿಗೆ ಹೋಗಿ ತನ್ನಾಹಾರವಂ ತೀರಿ
ಸಿಕೊಂಡು ಬಂದು ಆ ತೋಟದ ಬಾವಿಯಲ್ಲಿ ಮುಳುಗಿ ಬಂದು ಹುತ್ತದ
ಮೇಲೆ ನಿಂತು ಹಾಲು ಕರೆದು ಹೋಯಿತು. ಆ ಬಳಿಕ ಇಬ್ಬರು
ಮರವಿಳಿದು ಆ ಬಾವಿಯಲ್ಲಿ ಸ್ನಾನವಂ ಮಾಡಿ ಆ ಹುತ್ತವನು ಪ್ರದ
ಕ್ಷಿಣಂ ಗೈದು ನಮಸ್ಕರಿಸಿ ಆ ಮೇಲೆ ಆ ಹುತ್ತದಲ್ಲಿರುವ ರಂಧ್ರಗಳಲ್ಲಿ
ನೋಡಲು ಅದರೊಳಗೆ ಸೂರ್ಯನ ಬೆಳಗಿನಂತೆ ಬೆಳಕು ಕಂಡು ಬಹ
ಳವಾಗಿ ನೋಡಲು ಸ್ವಾಮಿಗಳವರಾಕೃತಿ ತೋರಿತು. ಅಷ್ಟರೊಳಗೆ ಆ
ಹುತ್ತದೊಳಗೆ ಇರುವ ನಾಗರ ಸರ್ಪಗಳು ಬುಸುಗರೆವುತ್ತ ಅನೇಕ
ಸರ್ಪಗಳು ಈ ಮನುಷ್ಯರ ಸುಳಹಂ ಕಾಣುತ್ತ ಬೋರ್ಗರೆವುತ್ತ
ಹೊರಗೆ ಬರಲು ಇವುಗಳ ಕಂಡು ಭಯಸ್ತರಾಗಿ ಆ ಮೇಲೆ ಊರಿಗೆ
ಬಂದು ತಾವು ಕಂಡುದನ್ನು ಊರೊಳಗಿನ ಗೃಹಸ್ಥರಿಗೆ ಸವಿಸ್ತಾರವಾಗಿ
ಪೇಳಲು ಇದನು ಸಕಲ ಭಕ್ತಗಣಂಗಳು ಕೇಳಿ ಈ ಸ್ವಾಮಿಗಳವರು
ಸಾಕ್ಷಾತ್ ಅಲ್ಲಮ ಪ್ರಭುಸ್ವಾಮಿಗಳಾದ ಪರಶಿವಮೂರ್ತಿ ಎಂದು ಕೊಂ
ಡಾಡಿ ಆಶ್ಚರ್ಯವಂ ಪಟ್ಟು ಈ ವರ್ತಮಾನವನು ಆ ಪೇಟೆ ಮನೆ



ಗ್ರಾಮ ಗ್ರಾಮದ ಭಕ್ತಮಹೇಶ್ವರರಿಗೆ ಇಂತಹ ದಿವಸ ಸ್ವಾಮಿಗಳಿರುವ
ಹುತ್ತವನ್ನು ಬಯಲು ಮಾಡಿ ಸ್ವಾಮಿಗಳವರ ದರ್ಶನಾಶೀರ್ವಾದವನು
ತೆಗೆದುಕೊಂಡು ಹಿಂದಿನ ನಮ್ಮ ಬಿನ್ನಹದ ಪ್ರಸ್ತವ ತೀರಿಸಬೇಕಾಗು
ತ್ತಿದೆ, ಇಂತಹ ವಾರದಲಿ ಸಕಲರು ಬರಬೇಕೆಂದು ಪತ್ರವಂ ಬರೆ
ಯಲು ಈ ಪತ್ರದ ವರ್ತಮಾನದಿಂದ ಆ ಊರ ಮುಂದೆ ಅನೇಕ
ವ್ಯಾಪಾರಿಗಳು ಬಂದು ಅನೇಕ ಗೂಡಾರಗಳನು ಹೊಡೆದರು. ಆಗ
ಲಕ್ಷೋಪಲಕ್ಷ ಪರಿಸೆ ಕೂಡಲು ಅವೊತ್ತಿನ ದಿವಸವು ಆ ಊರಲ್ಲಿರುವ
ನಿಂಬೆಣ್ಣ ಶೆಟ್ಟಿ ಗಿರಿಗೌಡ ಮುಂತಾದ ಸ್ಥಲ ಪರಸ್ಥಲದ ದೇವಭಕ್ತರು ಆ
ತೋಂಟದ ಭೂಮಿಯನು ಕಸ ಹೊಡೆದು ಚಳಿಯಂ ಗೊಟ್ಟು ಸಾರಣೆಯಂ
ಮಾಡಿ ಹುತ್ತದ ಸಮೀಪದಲ್ಲಿ ಅನೇಕ ಕರ್ಪೂರ ಲೋಭಾನ ಗುಗ್ಗುಳ
ಹಾಲಮಡ್ಡಿ ಮೊದಲಾದ ಧೂಪವಂ ಸುಡಲು ಈ ಧೂಪದ ಹೊಗೆಗ
ಳಿಂದ ಆ ಹುತ್ತದಲ್ಲಿರುವ ಅನೇಕ ಸರ್ಪ ವೃಶ್ಚಿಕ ಮುಂತಾದವುಗಳು
ಹೊರಟು ಹೋಗಲು ಆ ಕೂಡಲೆ ಗುದ್ದಲಿ, ಸಲಿಕೆ, ಕುರಿಪೆ ಮುಂ
ತಾದವುಗಳಿಂದ ಆ ಹುತ್ತದಲ್ಲಿರುವ ಒಂದು ಪ್ರಾಣಿಯು ಸಾಯದಂತೆ
ಸೂಕ್ಷ್ಮರೀತಿಯಿಂದ ಆ ಹುತ್ತವಂ ಬಿಡಿಸುವುದರೊಳಗಾಗಿ ಬಂದ ಭಕ್ತ
ಗಣಂಗಳು ಹುತ್ತವಂ ಬಿಡಿಸುವರಿಗೆ ಹೇಳಿದ್ದೇನೆಂದರೆ ಸ್ವಾಮಿಗಳ
ವರು ಊರ್ಧ್ವದೃಷ್ಟಿಯಿಂದ ಲಿಂಗನಿಷ್ಠಾ ಪರರಾಗಿ ನಿಜಸಮಾಧಿಯಲ್ಲಿ
ಹೊಂದಿದ್ದಾರೆ. ಅವರು ಕಾಣಿಸುವ ವರೆಗೂ ಈ ಆಯುಧಗಳು ಇವು
ಗಳಿಂದ ಒಡೆದ ಹೆಂಟೆಗಳು ಒಂದು ಅವರಿಗೆ ತಗುಲದಂತೆ ತೆಗೆಯ
ಬೇಕು. ಅವರು ಸ್ವಲ್ಪ ಕಾಣಲು ಸಮ್ಮುಖವಿ ಇರಬಾರದು. ಅಥವಾ ಇದ್ದರೆ
ಆ ವೇಳೆ ಸ್ವಾಮಿಗಳವರು ಇದು ಏನೋ ಎಂದು ಕಣ್ದೆರೆದರೆ ನೀವು ದಹನ
ವಾದೀರಿ. ಅವರ ಇದಿರಿನಲ್ಲಿ ಗಂಧವ ಕಾಷ್ಠ, ಲೋಭಾನ, ಕರ್ಪೂರ
ಒಟ್ಟುವುದೆಂದು ಹೇಳಲು ನಿಂಬೆಣ್ಣ ಶೆಟ್ಟಿ ಗೌಡ ಮುಂತಾದವರು ಹುತ್ತವಂ
ಬಿಡಿಸುವ ಸಕಲ ಶಿವಭಕ್ತರು ಹೆದರುತ್ತ ಮೆಲ್ಲಮೆಲ್ಲನೆ ಹುತ್ತವಂ ಬಿಡಿ
ಸುತ್ತಿರಲು ಉಳಿದ ಉರಗ ವೃಶ್ಚಿಕಗಳು ಬಿಟ್ಟು ಹೋದವು. ಅಷ್ಟರೊ
ಳಗಾಗಿ ಹುತ್ತವೆಲ್ಲ ಕಿತ್ತಾಗಲು ಸ್ವಾಮಿಗಳವರ ಮುಂದೆಸೆಯಲ್ಲಿ ಪರಿಸೆ
ಬಂದ ಸಕಲ ದೇವಭಕ್ತರು ತಮ್ಮ ಭಕ್ತಿಯಿಂದ ಗಂಧದ ಕಾಷ್ಠ ಕರ್ಪೂರ,
ಗುಗ್ಗುಳ ಲೋಭಾನ ಮುಂತಾದವನು ರಾಶಿಯಂ ಹಾಕಿ, ಕಾಯಿ, ಹಣ್ಣು
ಕಾರೀಕುಗಳನ್ನು ಇಟ್ಟು ಭೇರಿ ನಗಾರಿ ಡೊಳ್ಳು ಡಮಾಮಿ ಹಲಗೆ ತಾಸೆ

ಸೋನಾಯಿ, ಕರಡಿ, ಸಮ್ಮೇಳ ಕರ್ನಿ, ಕಾಳೆ, ಮುಂತಾದ ಅನೇಕ ವಾದ್ಯ
ಗಳನು ಮಾಡಲು, ಈ ಅದ್ಭುತವಾದ ಭೂಮಿ ಇಬ್ಭಾಗವಾಗುವಂತೆ
ಆಗುವ ವಾದ್ಯಗಳ ಸ್ವಾಮಿಗಳು ಕರ್ಣದಿಂ ಕೇಳಿ, ಇದೇನು ಕಾರಣ ಇಲ್ಲಿ
ವಾದ್ಯಗಳಾಗುತ್ತವೆ, ಎಂದು ಮುಚ್ಚಿದ ಕಣ್ಣುಗಳ ತೆರೆಯಲು ಆ ದೃಷ್ಟಿಯು
ಇದಿರಿಗೆ ಇದ್ದ ಆ ಗಂಧವ ಕಾಷ್ಠ ಮೊದಲಾದ ಕರ್ಪೂರದ ರಾಶಿಯ
ಮೇಲೆ ಬೀಳಲು ದಹನವಾಯಿತು. ಇದ ಕಂಡು ಸಕಲರು ಬೆದರಿ ಬಂದ
ದೇವಭಕ್ತರು ಸಾಷ್ಟಾಂಗವೆರಗಿ ಸ್ವಾಮಿಪಾದವು ನಮ್ಮ ಬಿನ್ನಹವ ಒಪ್ಪಿ
ಕೊಂಡು ಇಲ್ಲಿಗೆ ಚಿತ್ತೈಸಲು ದಂಡಿನ ಹಾವಳಿಯಿಂದ ನಾವು ಪೋದೆವು,
ಅದು ಕಾರಣ ಸೇವೆ ಎಮಗೆ ದೊರೆಯಲಿಲ್ಲ, ನಾವು ಇಂದಿನತನಕ ಸನ್ನಿ
ಧಿಗೆ ಬಾರದುದು ಶತಾಪರಾಧವಾಯಿತು, ಕ್ಷಮಿಸಿ, ನಮ್ಮಯ ಬಿನ್ನಹವಂ
ತೀರಿಸಿ ಎಮ್ಮ ಪೊರೆವುದೆಂದು ಅನೇಕ ಸ್ತೋತ್ರಂಗಳಂ ಮಾಡಿ ಅರಿಕೆ
ಮಾಡಿಕೊಳಲು ಇದ ಕಂಡು ಸ್ವಾಮಿಗಳವರ ಚಿತ್ತದಲಿ ಕರುಣ ಹುಟ್ಟಿ
ನಿಮ್ಮಯ ಬಿನ್ನಹವಂ ತೀರಿಸಿ ಕೊಡುವೆವು. ಆದರೆ ನಮ್ಮ ಮಸ್ತಕದ ಜಡೆ
ಗಳಲಿ ಗಡ್ಡದ ಕೇಶಗಳಲಿ ಉರಗಗಳು ತತ್ತಿಯಂ ಮಾಡಿಕೊಂಡು ಇವೆ,
ಅವು ಮರಿಗಳನ್ನು ಮಾಡಿಕೊಂಡು ಹೋಗಲು ನಿಮ್ಮ ಮನೆಗೆ ಇಂದಿಗೆ
೧೫ ದಿನಗಳಲ್ಲಿ ಚಿತ್ತೈಸುವೆವು ಎನಲು, ಅಪ್ಪಣೆಯಂ ಕೇಳಿಕೊಂಡು
ನಿಂಬೆಣ್ಣಶೆಟ್ಟಿಯು ಸ್ವಾಮಿ ಪಾದವು ಇಂದಿನ ತನಕ ಹುತ್ತದಲ್ಲಿ ಇರು
ವಾಗ್ಗೆ ದಿನಚರಿ ಗೋವು ಬಂದು ಹುತ್ತದ ಮೇಲೆ ಹಾಲು ಕರೆದ ಕಾರ
ಣದಿಂ ಲಿಂಗಾರ್ಪಿತವಾಗುತ್ತಿತ್ತು. ಈಗ ಆ ಹುತ್ತವು ಹೋಯಿತು.
ಇಲ್ಲಿಯ ತನಕ ಲಿಂಗಾರ್ಪಿತವು ಆಗುವ ಪರಿ ಹೇಗೆ ಎಂದು ಸಾಷ್ಟಾಂ
ಗವಂ ಹಾಕಿ ಭಯಭಕ್ತಿಯಿಂದ ಅರಿಕೆಯಂ ಮಾಡಿಕೊಳಲು ಸ್ವಾಮಿ
ಗಳವರು ನಾವು ಹುತ್ತದಲ್ಲಿ ಇದ್ದಾಗ್ಗೆ ನಮ್ಮಾಶ್ರಯವನ್ನು ಹುತ್ತ
ದಲ್ಲಿ ಮಾಡಿಕೊಂಡಿರ್ದ ಸರ್ಪಗಳ ಆಹಾರ ನಿಮಿತ್ಯದಿಂದ ಗೋವು
ಗಳು ಹಾಲುಕರೆದು ಹೋಗುತ್ತಿದ್ದವಲ್ಲದೆ, ನಾವು ನಮ್ಮ ಸ್ನಾನ ಶಿವ
ಪೂಜೆ ನಿತ್ಯವಹಿಸಿ ತ್ರಿಕಾಲದಲ್ಲಿ ನಿತ್ಯನೇಮಗಳು ನಡೆಯದೆ ಲಿಂಗಾ
ರ್ಪಿತವು ಆಗುವುದು ಹೇಗೆ ಎಂದರೆ ನೀವು ಆ ಗೋವು ಮೆಯ್ಯ
ತೊಳೆದು ಹಾಲು ಕರೆದು ಒಂದು ಪಾತ್ರೆಯಲ್ಲಿ ಇವೊತ್ತಿಗೆ ೧೫ ದಿನದ
ತನಕ ಇಡುವುದೆಂದು ಅಪ್ಪಣೆಯಂ ಕೊಟ್ಟು ಅಲ್ಲಿ ತನಕ ಇಲ್ಲಿ ಜನ
ಗೋಷ್ಠಿ ಆಗಕೂಡದೆಂದಾಜ್ಞಾಪಿಸಿ ಮತ್ತೆ ಪುನಃ ಸ್ವಾಮಿಗಳವರು ತಮ್ಮ
ಇಷ್ಟಲಿಂಗದಲ್ಲಿ ದೃಷ್ಟಿಯಂ ಬಲಿದು ಶಿವಯೋಗದೊಡನೆ ಪರವಶರಾಗಿ



ಮೂರ್ತವಂ ಮಾಡಿದರು. ಆ ಬಳಿಕ ಹೋದ ಸರ್ಪಗಳು ದಿನಚರಿ
ಬರುತ್ತ ಇದಿರಿನಲ್ಲಿರುವ ಪಾತ್ರದೊಳಗಿನ ಹಾಲನ್ನು ಸೇವಿಸುತ್ತ ೧೫
ದಿನಗಳೊಳಗೆ ತಮ್ಮ ತತ್ತಿಗಳಂ ಒಡೆದು ಮರಿಗಳಂ ಮಾಡಿಕೊಂಡು
ಹೋದವು. ಅಷ್ಟರೊಳಗಾಗಿ ನಿಂಬೆಣ್ಣ ಶೆಟ್ಟಿ ಗಿರಿಗೌಡ ಮುಂತಾದ ಸಕಲ
ಪ್ರಜೆಗಳು ತಮ್ಮ ಗ್ರಾಮವನು ಸಾರಣೆ ಕಾರಣೆ ತೋರಣಗಳಿಂದ ಶೃಂಗ
ರಿಸಿ ಪುಷ್ಪದ ತೇರನು ಕಟ್ಟಿಸಿ ಆ ಬಂದ ಸ್ಥಲ ಪರಸ್ಥಲ ದೇವಭಕ್ತ
ರಿರಲು ಅವರನು ಇಟ್ಟು ಕೊಂಡು ಆ ಪ್ರಕಾರ ೧೫ ದಿವಸವಾಗಲು
ನಿಂಬೆಣ್ಣ ಶೆಟ್ಟಿ ಮುಂತಾದ ಸಕಲ ದೇವಭಕ್ತರು ಸಕಲವಾದ್ಯಂಗಳಿಂದ
ಸ್ವಾಮಿಗಳವರ ಸನ್ನಿಧಾನಕ್ಕೆ ಪೋಗಿ ಶೆಟ್ಟರ ಬಿನ್ನಹವಂ ತೀರಿದ ಮರು
ದಿವಸೆ ನಮ್ಮೆಲ್ಲರ ಬಿನ್ನಹವು ಎಂದು ಸಾಷ್ಟಾಂಗವಂ ಹಾಕಿ ತೀರಿನ
ಮೇಲೆ ಸ್ವಾಮಿಗಳವರ ಮೂರ್ತವಂ ಮಾಡಿಸಿಕೊಂಡು ಸಕಲ ಸಂಭ್ರ
ಮದಿಂ ಉತ್ಸವದಿಂ ಕರೆದುಕೊಂಡು ಪೋಗಿ ನಿಂಬೆಣ್ಣಸೆಟ್ಟಿಯು ತನ್ನ
ಮನೆಯಲ್ಲಿ ಸ್ವಾಮಿಗಳವರ ಶಿವಾರ್ಚನೆ, ಪಾದ ಪೂಜೆ ಕ್ರಿಯೆಯು
ಮುಗಿದ ಬಳಿಕ ಮಾಡಿದ ಶಾಕ ಪಾಕವಂ ಎಡೆಮಾಡುವುದಕ್ಕೆ ಸಾಷ್ಟಾಂಗ
ವಂ ಹಾಕಲು ಆಗ ಮಹಾಸ್ವಾಮಿಗಳವರ ಅಪ್ಪಣೆ ಅದುದು ಮುನ್ನ
ನಾವು ಇಲ್ಲಿಗೆ ಬಂದಾಗ್ಗೆ ನೀನು ದಂಡಿನವಾಂತರದಿಂದ ಎಮಗೆ ಮಾಡಿದ
ಶಾಕಪಾಕಗಳನ್ನು ನಿನ್ನ ಮನೆಯೊಳಗಿನ ಹಗೆಯದಲಿ ಇರಿಸಿ ಬಾಯ
ಮುಚ್ಚಿಸಿ ಹೋಗಿ ಇದ್ದಿ ಆ ಹಗೆಯದಲಿ ಇದ್ದ ಪದಾರ್ಥವನ್ನು ತೆಗಿಸಿ
ನಮಗೆ ಎಡೆ ಮಾಡಿದರೆ ಲಿಂಗಾರ್ಪಿತವನ್ನು ಮಾಡುವೆವು ಎಂದು
ಅಪ್ಪಣೆ ಆಗಲು ಅದನ್ನು ಶೆಟ್ಟಿಯು ನೆನಪಿಗೆ ತಂದುಕೊಂಡು ಆಗ
ತನ್ನ ಮನೆಯಲ್ಲಿರುವ ಹಗೆಯದ ಬಾಯ ತೆಗಿಸಿ, ಶೆಟ್ಟಿಯು ಆಗಿನ
ಪದಾರ್ಥವೇನಾಗಿದೆಯೋ ಈಗ ಅದನು ಇಡಿಸಿ ೧೭ ವರುಷವಾಯಿತು
ಎನ್ನ ಭಕ್ತಿಯನು ಈ ಗುರುವೆ ಕಾಯಬೇಕಲ್ಲದೆ ಬೇರೆ ಇಲ್ಲವೆಂದು
ಧೈರ್ಯವಂ ತಾಳಿ ತೆಗಿಸಲು ಆ ಪದಾರ್ಥಂಗಳು ಆಗ ಮಾಡಿದ ಪದಾ
ರ್ಥಗಳಿಗಿಂತ ಹೆಚ್ಚಾಗಿ ಬಿಸಿ ಪದಾರ್ಥವಾಗಿತ್ತು. ಇದ ಕಂಡು ಶೆಟ್ಟಿ
ಮುಂತಾದ ಬಂದ ಸಕಲ ದೇವಭಕ್ತರು ಈ ಗುರುವಿನ ಮಹಿಮೆಯನು
ಸಾವಿರ ಜಿಹ್ವೆವುಳ್ಳ ಮಹಾ ಶೇಷನಿಗೆ ತೀರದೆ ಸ್ವಾಮಿಗಳವರ ಸ್ತೋತ್ರವಂ
ಮಾಡಿ ಆ ಪದಾರ್ಥವಂ ಸ್ವಾಮಿಗಳವರು ಮುಂತಾದ ದೇವಭಕ್ತರಂ
ತೃಪ್ತಿಪಡಿಸಿದನು. ಈ ಶೆಟ್ಟಿ ಬಿನ್ನಹದ ಪ್ರಸ್ತವು ತೀರಿದ ಬಳಿಕ ಆ ಊರ

ಗಿರಿಗೌಡ ಮುಂತಾದ ಸಕಲು ಭಕ್ತರ ಬಿನ್ನಹನ ಪ್ರಸ್ತವಂ ಮರು
ದಿವಸ ತೀರಿಸಿ ಶೆಟ್ಟಿ ಮುಂತಾದ ಸಕಲ ಭಕ್ತರಿಗೆ ಆಶೀರ್ವಾದವಂ
ಮಾಡಿ ಆ ಬಳಿಕ ಸ್ವಾಮಿಗಳವರ ಅಪ್ಪಣೆಯಿಂ ದೇಶಾಟಣವ ಮಾಡಿ
ಕೊಂಡು ಬಂದ ಆ ನಿರಕ್ಷರ ಬೋಳ ಬಸವರಾಜೇಂದ್ರರು ಮುಂತಾದ
ಗಣಸಮೂಹದೊಡನೆ ತೋಂಟದ ಸಿದ್ಧಲಿಂಗ ಸ್ವಾಮಿಗಳವರು ಎಡೆಯೂ
ರಿಗೆ ದಯಮಾಡುವ ಮಾರ್ಗದಲಿ ಮಳೆ ಬಂದು ಹಳ್ಳಹರಿದು ಮಾರ್ಗವು
ಕಟ್ಟಾಗಲು ಆ ಹಳ್ಳದಲ್ಲಿ ಸ್ವಾಮಿಗಳವರು ಚಿತ್ತೈಸಲು ಹಳ್ಳದಲ್ಲಿ ಹರಿವ
ಉದಕವು ಮಾರ್ಗವನ್ನು ಕೊಟ್ಟಿತು. ಇಂತಹ ಅನೇಕ ಮಹಿಮೆಗಳಂ
ಮಾಡುತ್ತ ಎಡೆಯೂರಿಗೆ ದಯಮಾಡಿಸಿ ಆ ಊರ ದೇವಭಕ್ತರ ಭಕ್ತಿ
ಯಲ್ಲಿ ಕೆಲವು ದಿವಸವಿರ್ದು ಅಲ್ಲಿ ಅನೇಕ ಪವಾಡವುಳ್ಳ ಮಹಿಮೆಗ
ಳಿಂದ ಪರಮತವಂ ಗೆಲಿದು ಶಿವಮತವಂ ಉದ್ಧರಿಸಿ ಆ ಮೇಲೆ ಮಹಾ
ಸ್ವಾಮಿಗಳವರು ಅದೇ ಊರಲ್ಲಿ'.ಮಠವಂ ಕಟ್ಟಿಸಿ ಆ ಮಠದಲ್ಲಿ ಆಗಮ
ಕ್ರಮದಿಂ ಯೋಗಸಮಾಧಿಯಂ ಮಾಡಿಸಿ ಆ ಬಳಿಕ ಅಲ್ಲಿಯ ದೇವ
ಭಕ್ತರಂ ಕರೆತರಿಸಿ ತಮ್ಮ ಶಿಷ್ಯರಾದ ನಿರಕ್ಷರ ಬೋಳ ಬಸವರಾಜೇಂದ್ರ
ಸ್ವಾಮಿಗಳವರನ್ನು ನಮ್ಮಂತೆ ಕಂಡುಕೊಂಡು ಪೂಜೋತ್ಸಹಂಗಳಂ
ಮಾಡಬೇಕೆಂದಪ್ಪಣೆಯಂ ಕೊಟ್ಟು ಗಣಪರ್ವವಂ ಮಾಡಿಸಿ ಆ ಸಮಾ
ಧಿಯಲ್ಲಿ ಶಿವಯೋಗದೊಡನೆ ಮೂರ್ತವಂ ಮಾಡಿದರು. ಇವರ ತೋರ
ಗದ್ದಿಗೆ ಮೈಸೂರು ಸೀಮೆಯಲ್ಲಿರುವ ಎಡೆಯೂರಲ್ಲಿರುತ್ತದೆ. ಇವರ ಗದ್ದಿ
ಗೆಯ ಮಹಿಮೆಗಳಿಂದ ಇವೊತ್ತಿಗೂ ಪೂಜಾ ರಥೋತ್ಸಹಂಗಳು ಪ್ರತಿ
ವರುಷ ನಡೆಯುತ್ತವೆ. ಆ ಗದ್ದಿಗೆಗೆ ನಡೆದುಕೊಳ್ಳುವ ಭಕ್ತಗಣಂಗಳಿಗೆ
ಬ್ರಹ್ಮಹತ್ಯ ಪಿಶಾಚ ಸರ್ವ ರೋಗಂಗಳು ದೂರವಾಗಿ ಇವೊತ್ತಿಗೂ
ದಿನಚರಿಯಲ್ಲಿ ಮಹಾಪ್ರಸ್ತಗಳು ಆಗುತ್ತವೆ. ಇವರು ಮಹಿಮರು
ಎಂಬುದಕ್ಕೆ ಇವರ ಹೆಸರಿನ ಸಿದ್ಧೇಶ್ವರ ಪುರಾಣ ಆ ಎಡೆಯೂರ ಸ್ಥಲ
ಪುರಾಣ ಮುಂತಾದವುಗಳೇ ಸಾಕ್ಷಿಯು.

---



# ನಿರಕ್ಷರ ಬೋಳಬಸವೇಶ್ವರ.

ಈ ೧೯ನೆಯ ಪಟ್ಟದ ನಿರಕ್ಷರ ಬೋಳ ಬಸವೇಶ್ವರ ಸ್ವಾಮಿಗಳ
ವರು ಎಡೆಯೂರ ಭಕ್ತರ ಭಕ್ತಿಯಿಂ ಪೂಜೋತ್ಸಹಂಗಳಿಂದ ೭೨ಬಿರು
ದುಗಳಿಂದ ಉತ್ಸಹಂಗೊಳ್ಳುತ್ತ ಮೂರು ಸಾವಿರ ವಿರಕ್ತರಿಗು ಏಳುನೂರು
ಚರಮೂರ್ತಿಗಳಿಗು ಗುರುಗಳಾಗಿ ಷಟ್‌ಸ್ಥಲಕ್ಕೆ ಅಧಿಪತಿಗಳೆನಿಸಿ ಆ
ಸ್ಥಲದಲ್ಲಿ ಲಿಂಗಪೂಜೆ ಜಂಗಮದಾಸೋಹವಂ ಮಾಡುತ್ತ ತಮ್ಮಯ
ಚರವರರನ್ನು ಸಕಲ ದೇಶದಲ್ಲಿರುವ ರಾಜರು, ದೇಸಾಯಿ, ದೇಶಪಾಂಡೆ,
ನಾಡಗೌಡ, ನಾಡಕರಣಿ, ಶೆಟ್ಟರು, ಬುದ್ಧಿವಂತರು ಸಕಲ ಭಕ್ತಗಣಂ
ಗಳಿಗೆ ಆಶೀರ್ವಾದ ಪತ್ರಂಗಳಂ ದಯಪಾಲಿಸುತ್ತ ಅವರಿಂದ ಕಾಣಿ
ಕೆಯಂ ತರಿಸುತ್ತ ಕ್ವಚಿತ್ತು ತಿರುಗಿ ಬಿದ್ದ ಜನರಿಗೆ ಬಹಿಷ್ಕಾರವಂ
ಸ್ಥಾಪಿಸುತ್ತ ಇವರು ಶರಣಗತರಾದಲ್ಲಿ ಅಪರಾಧಗಾಣಿಕೆಯಂ ಸಲ್ಲಿಸಿ
ಕೊಳ್ಳುತ್ತ ಕ್ರೂರರಂ ಶಿಕ್ಷಿಸುತ್ತ ಶಿಷ್ಟರಂ ರಕ್ಷಿಸುತ್ತ ಅನೇಕ ಮಹಿಮೆ
ಗಳಿಂದ ಪರವಾದಿಗಳಂ ಗೆಲಿಯುತ್ತ ವೀರಶೈವ ಮತಸ್ಥಾಪನಾಚಾರ್ಯ
ರೆಂದೆನಿಸಿ ಶಿವಮತವನುದ್ಧರಿಸುತ್ತ ಕೆಲವು ದಿವಸ ಎಡೆಯೂರಲ್ಲಿ ಇದ್ದು
ಅಲ್ಲಿರುವ ತಮ್ಮ ಗುರುಗಳಾದ ತೋಂಟದಾರ್ಯ ಸ್ವಾಮಿಗಳವರ ಗದ್ದಿ
ಗೆಯ ಪೂಜೆಗೋಸ್ಕರ ಭಕ್ತಿ ಹಿಡಿದ ಗಣವರರಂ ನಿಯಮಿಸಿ ತಮ್ಮ
ಆಂದೋಳಿಕ ಮುಂತಾದ ೭೨ ಬಿರುದುಗಳಿಂದ ಉತ್ಸಹಂಗೊಳ್ಳುತ್ತ ತಮ್ಮ
ಸೂತ್ರಿಕರಾದ ಮೂರು ಸಾವಿರ ವಿರಕ್ತರು ಏಳುನೂರ ಚರಮೂರ್ತಿ
ಗಳಿಗು ಅಧಿಪತಿಗಳಾಗಿ ಶಾಸ್ತ್ರವಂ ಪೇಳುತ್ತ ವೈಷ್ಣವ ಮಾಯಾವಾದಿ
ಗಳಂ ಗೆಲಿಯುತ್ತ ವೀರಶೈವ ಮತೋದ್ಧಾರಕರಾಗಿ ದೇಶಂಗಳಂ ಸಂಚ
ರಿಸುತ್ತ ಮದಗಿರಿಗೆ ದಯಮಾಡಿಸಿ ಅಲ್ಲಿ ಅನೇಕ ಮಹಿಮೆಗಳನ್ನು ತೋರಿ
ಆ ಮೇಲೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಗಡ್ಡದ ಸಿದ್ಧ
ವೀರಣ್ಣ ಸ್ವಾಮಿಗಳವರಿಗೆ ಮಾಡಿ ಅದೇ ಸ್ಥಲದಲ್ಲೆ ನಿರ್ವಯಲಾದರು.
ಇವರ ತೋರಗದ್ದಿಗೆ ಮದಗಿರಿಯಲ್ಲಿ ಇರುತ್ತದೆ. ಇವರು ತೊಂಭತ್ತಾರು
ವರುಷ ವಯಸ್ಸುಳ್ಳವರಾಗಿ ಚಿತ್ತೈಸಿದರು.

---

## ಸಿದ್ಧವೀರೇಶ ಸ್ವಾಮಿಗಳು.

ಆ ನಂತರ ೨ನೆಯ ಪಟ್ಟದ ಸಿದ್ಧವೀರೇಶ ಸ್ವಾಮಿಗಳವರು ೭೨ ಬಿರುದುಗಳಿಂದ ಸಕಲ ಗಣಸಮೂಹಗಳೊಡನೆ ದೇಶಂಗಳಂ ಸಂಚರಿಸುತ್ತ ವೈಷ್ಣವ, ಜೈನ, ಚಾರ್ವಾಕ, ಬೌದ್ಧ ಮತಂಗಳಂ ಜಯಿಸುತ್ತ ಇವರು ವಜೀರರನ್ನು ವಿವಾದದಲಿ ಗೆಲಿದು ಶಾಸ್ತ್ರಮುಖದಿಂದ ೧೨ಸಾವಿರ ಜನರಿಗೆ ಲಿಂಗಧಾರಣವಂ ಮಾಡಿಸಿ ಧೂಳಪಾವುಡ ಮುಂತಾದ ಶೀಲವಂತರಂ ಮಾಡಿಸಿ ಆ ಬಳಿಕ ಗುಮ್ಮಳಾಪುರಕ್ಕೆ ದಯ ಮಾಡಿಸಿ ಅಲ್ಲಿ ಅನೇಕ ಮಹಿಮೆಗಳನುಂಟುಮಾಡಿ ಆ ಮೇಲೆ ತಮ್ಮಯ ಶಿವಾನುಭವ ಚರಂತಿಗೆ ಪಟ್ಟವನ್ನು ಗೂಳೂರ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳವರಿಗೆ ಮಾಡಿ ಅದೆ ಸ್ಥಲದಲ್ಲಿ ನಿರ್ವಯಲಾದರು. ಇದರ ತೋರ ಗದ್ದಿಗೆ ಗುಮ್ಮಳಾಪುರದಲ್ಲಿ ಇರುತ್ತದೆ. ಇವರು ತೊಂಭತ್ತೆಂಟು ವರುಷ ವಯಸ್ಸುಳ್ಳವರಾಗಿ ಚಿತ್ತೈಸಿದರು.

---

## ಗುರುಸಿದ್ಧದೇಶಿಕೇಂದ್ರ ಸ್ವಾಮಿಗಳು.

ಈ ಗುಮ್ಮಳಾಪುರವು ಹಿಂದೆ ಬಸವೇಶ್ವರ ದೇವರು ಸಂಗಮನಾಥನಲ್ಲಿ ಐಕ್ಯವಾದ ಬಳಿಕ ಅರವತ್ತು ವರುಷವಾಳಿದ ಕಲ್ಯಾಣ ಪುರದರಸು ಅಳಿಯ ಬಿಜ್ಜಳ ತುರುಕ ರಾಕ್ಷಸರಿಂದಳಿಯಲು ಆ ಪುರವು ತುರುಕರಾಳಿಕೆಯಾಗಿ ಶಿವಾಚಾರದ ನಡತೆಗೆ ವಿರೋಧವಾಗಲು ಅಲ್ಲಿರ್ದ ಗುಮ್ಮಣ್ಣ ಸೆಮ್ಮಣ್ಣಯ್ಯಗಳೆಂಬ ಶಿವಶರಣರು ಕಲ್ಯಾಣವಂ ಬಿಟ್ಟು ದಕ್ಷಿಣ ಕಾಶಿ ಎನಿಸುವ ಶಿವಗಂಗೆ ಬೆಟ್ಟಕ್ಕೆ ಸಮೀಪವಾದ ಆ ದೇಶದಲ್ಲಿ ಆ ಗುಮ್ಮಳಪುರವಂ ವಿರಚಿಸಿ ಆ ಶರಣರು ಹಸಿಯ ಬಿಂದಿಗೆಯಲ್ಲಿ ಜಂಗಮದ ಧೂಳ ಪಾದೋದಕವಂ ತುಂಬಿ ಗ್ರಾಮವಂ ಪ್ರದಕ್ಷಿಣವಂ ಮಾಡಿ ಆ ಧೂಳಪಾದೋದಕದ ಬಿಂದಿಗೆಯನ್ನು ಆ ಗ್ರಾಮ ಮಧ್ಯದಿ ಸ್ಥಾಪನವಂ ಮಾಡಿ ಈ ಪುರದಿ ಲಿಂಗಾಂಗಿಗಳಾದ ವೀರಶೈವ ಮತಸ್ತರಲ್ಲದೆ ಭವಿಗಳು ಇದ್ದಲ್ಲಿ ಅವರು ನಾಶವಾಗಲಿ ಎಂದು ಕುರುಹು ಇಟ್ಟು ಆ



ಶರಣರು ಮುಕ್ತರಾದ ಮಹಿಮಾಸ್ಥಳ ಈ ಗುಮ್ಮಳಾಪುರವಾದ್ದರಿಂದ ತಮ್ಮಯ ಗುರುಗಳಾದ ಗಡ್ಡದ ಸಿದ್ಧವೀರಣ್ಣ ಸ್ವಾಮಿಗಳವರು ಈ ಪಟ್ಟಣವು ಹಾಳಾದದ್ದು ಆದರೂ ನೋಡದೆ ಈ ಸ್ಥಳದಿ ಮುಕ್ತರಾದರೆಂಬುದನು ೨೧ನೆಯ ಪಟ್ಟದ ಗೂಳೂರ ಗುರುಸಿದ್ಧ ಸ್ವಾಮಿಗಳವರು ತಿಳಿದುಕೊಂಡು ಆ ಸೀಮೆ ಅರಸನಾದ ಮೈಸೂರು ರಾಜರಿಂದ ಆ ಗ್ರಾಮದಲ್ಲಿ ಲಿಂಗವಿಲ್ಲದ ಭವಿಗಳು ಪ್ರವೇಶವನ್ನು ಮಾಡದಂತೆ ಸರಕಾರದ ಹುಕುಮನ್ನು ಪಡೆದು ಆ ಗ್ರಾಮದಲ್ಲಿ ತಮ್ಮ ಗುರುಗಳ ಗದ್ದಿಗೆ ಮಠವನ್ನು ಕಟ್ಟಿಸಿ ಆ ಗುಮ್ಮಳಾಪುರವನ್ನು ತುಂಬಿಸಿ ಆ ಗ್ರಾಮದ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಈ ನಾಲ್ಕು ದಿಕ್ಕಿಗು ಲಿಂಗಮುದ್ರೆ ಸ್ಥಾಪನವಂ ಮಾಡಿಸಿ ಆ ಗ್ರಾಮದಲ್ಲಿ ಇರುವ ಜನರು ಶಿವಭಕ್ತರಲ್ಲದೆ ಭವಿಜನರ ಊರ ಬಿಡಿಸಿ ಅಲ್ಲಿರುವ ಶಿವಭಕ್ತರಿಗೆ ಶಾಸ್ತ್ರಮುಖದಿಂದ ದೀಕ್ಷೆಯಂ ಮಾಡಿಸಿ ಶೀಲವಂತರಂ ಮಾಡಿಸಿ ಆ ಪುರದಲ್ಲಿ ಭಕ್ತರಲ್ಲದೆ ಭವಿ ಜನರು ಹೊಗದಂತೆ ತಮ್ಮ ಕಡೆಯಿಂದ ಆ ಊರ ಅಗುಸೆಗಳಲ್ಲಿ ಶಿವಭಕ್ತರಾದ ಜನಂಗಳನ್ನು ಪಹರೆ ಇಟ್ಟು ತಾವು ಪೂರ್ವದಲ್ಲಿ ಪಾಲ್ಕುರಿಕೆ ಸೋಮನಾರಾಧ್ಯರು ಆಚರಿಸಿದ ೬೬ ಶೀಲಗಳನ್ನು ಹಿಡಿದಾಚರಿಸುತ್ತ ಲಿಂಗಪೂಜಾ ಜಂಗಮದಾಸೋಹದೊಡನೆ ಷಟ್‌ಸ್ಥಲಕ್ಕೆ ಅಧಿಪತಿಗಳಾಗಿ ೭೨ಬಿರುದುಗಳಿಂದ ಗಣಸಮೂಹದೊಡನೆ ನಿತ್ಯೋತ್ಸಹಂಗೊಳ್ಳುತ್ತ ಅಲ್ಲಿಯ ಭಕ್ತರ ಭಕ್ತಿಯಿಂದ ಅಲ್ಲಿ ಇರ್ದು ತಮ್ಮ ಕಡೆಯಿಂದ ದೇಶಮಧ್ಯದಲ್ಲಿರುವ ಭಕ್ತಮಾಹೇಶ್ವರರಿಗೆ ಆಶೀರ್ವಾದ ಪತ್ರಗಳನ್ನು ಬರೆಯಿಸಿ ಚರಮೂರ್ತಿಗಳನ್ನು ಕಳಿಸಿ ಕಾಣಿಕೆಯಂ ತರಿಸುತ್ತ ತಿರುಗಿ ಬಿದ್ದ ಜನರಿಗೆ ಬಹಿಷ್ಕಾರವಂ ಸ್ಥಾಪಿಸುತ್ತ ಅವರು ಶರಣಾಗತರಾದಲ್ಲಿ ಅಪರಾಧಗಾಣಿಕೆಯಂ ಕೈಕೊಳ್ಳುತ್ತ ಕೆಲವು ದಿವಸ ಗುಮ್ಮಳಾಪುರದಲ್ಲಿ ವಾಸಿಸಿ ಆ ಬಳಿಕ ಸ್ವಾಮಿಗಳವರು ದೇಶದಲ್ಲಿ ಸಂಚರಿಸುತ್ತ ಭಕ್ತಗಣಂಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಕೃತಾರ್ಥರಂ ಮಾಡುತ್ತ ಗೂಳೂರಿಗೆ ದಯಮಾಡಿಸಿ ಅಲ್ಲಿಯ ಭಕ್ತರ ಭಕ್ತಿಯಿಂದ ಪೂಜೋತ್ಸಹಂಗೊಳ್ಳುತ್ತ ಇರುವಲ್ಲಿ ಸ್ವಾಮಿಗಳವರು ಅಲ್ಲಿರ್ದ ಭಕ್ತಗಣಂಗಳನ್ನು ಕರೆಯಿಸಿ ಅವರ ಮುಂತಿಟ್ಟುಕೊಂಡು ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಗಗನದಾರ್ಯ ಸ್ವಾಮಿಗಳವರಿಗೆ ಮಾಡಿ ಅದೆ ಸ್ಥಲದಲ್ಲಿ ನಿರ್ವಯಲಾದರು. ಇವರ ತೋರಗದ್ದಿಗಿ ಗೂಳೂರಲ್ಲಿ ಇರುತ್ತದೆ. ಇವರು

ನೂರು ವರುಷ ವಯಸ್ಸುಳ್ಳವರಾಗಿ ಇದ್ದು ಅನೇಕ ಮಹಿಮೆಗಳನ್ನುಂಟು ಮಾಡಿದ್ದಾರೆಂಬುದಕ್ಕೆ ಇವರ ಸ್ಥಲಪುರಾಣವೆ ಸಾಕ್ಷಿಯು.

---

## ಗಗನದಾರ್ಯ.

೨೨ನೆಯ ಪಟ್ಟದ ಗಗನದಾರ್ಯ ಸ್ವಾಮಿಗಳವರು ಗೂಳೂರಲ್ಲಿ ೭೨ ಬಿರುದುಗಳೊಡನೆ ನಿತ್ಯೋತ್ಸಹಂಗೊಳ್ಳುತ್ತ ಲಿಂಗಪೂಜಾ ಜಂಗಮದಾಸೋಹವನ್ನು ಮಾಡಿಸುತ್ತ ಗಣಸಮೂಹದೊಡನೆ ಆ ಸ್ಥಲದ ಭಕ್ತರ ಭಕ್ತಿಯಲ್ಲಿ ಕೆಲವು ದಿವಸವಿರ್ದು ಆ ಬಳಿಕ ತಮ್ಮ ಘನ ಸಹಿತವಾಗಿ ದೇಶಂಗಳಂ ಸಂಚರಿಸುತ್ತ ಶಿವಗಂಗೆ ಪ್ರಾಂತದಲ್ಲಿ ಇರುವ ಮಾಗಡಿ ಪಟ್ಟಣಕೆ ಚಿತ್ತೈಸಿ ಆ ಊರ ಅರಸನಾದ ನಾಡಗೌಡನಿಗೆ ಶಾಸ್ತ್ರಮುಖದಿಂದ ಒಡಂಬಡಿಸಿ ಲಿಂಗಧಾರಣವಂ ಮಾಡಿಸಿ ಅವನ ಭಕ್ತನಂ ಮಾಡಿಕೊಂಡು ಇವರು ಆ ಪಟ್ಟಣದಲ್ಲಿ ೬೬ ವಿರಕ್ತ ಮಠಗಳನ್ನು ಆ ಊರ ಭಕ್ತರ ಭಕ್ತಿಯಿಂದ ಕಟ್ಟಿಸಿ ಅಲ್ಲಿಯ ಭಕ್ತಗಣಂಗಳೊಳಗೆ ಅನಾಚಾರದಲ್ಲಿ ನಡೆವಂತವರ ಆಚಾರ ಸನ್ಮಾರ್ಗಕ್ಕೆ ತಂದು ಕ್ವಚಿತ್ತು ತಿರುಗಿಬಿದ್ದ ಜನರಿಗೆ ಬಹಿಷ್ಕಾರವನ್ನು ಕೊಡಿಸಿ ಈ ಜನರು ಶರಣಾಗತರಾಗಲು ಅವರಿಂದ ಅಪರಾಧಗಾಣಿಕೆಯಂ ಒಪ್ಪಿಸಿಕೊಂಡು ಆ ಊರ ರಾಜನನ್ನು ಕೃತಾರ್ಥನಂ ಮಾಡಿ ಅವನ ಭಕ್ತಿಯೊಡನೆ ಆ ಪುರದಿ ಲಿಂಗಪೂಜಾಜಂಗಮದಾಸೋಹವನ್ನು ಮಾಡಿಸುತ್ತ ೭೨ ಬಿರುದುಗಳಿಂದ ಉತ್ಸಹಂಗೊಳ್ಳುತ್ತ ಅನೇಕ ಮಹಿಮೆಗಳನುಂಟು ಮಾಡುತ್ತ ಅಲ್ಲಿ ಇರ್ದು ಆ ತಾಲೂಕಿನಲ್ಲಿರುವ ಉತ್ತಮ ವರ್ಣದ ಜನಂಗಳಿಗೆ ಶಾಸ್ತ್ರಮುಖದಿಂದ ಒಡಂಬಡಿಸಿದಲ್ಲಿ ಅವರು ಭಕ್ತರಾಗಲು ಅವರಿಗೆ ಲಿಂಗಧಾರಣಮಂತ್ರೋಪದೇಶವಂ ಮಾಡಿಸಿ ವೀರಶೈವ ಮತೋದ್ಧಾರಕರಾಗಿ ಸಕಲ ಭಕ್ತರುಗಳಿಂದ ಸೇವೆಯಂ ಕೈಕೊಳ್ಳುತ್ತ ಅಲ್ಲಿ ಸ್ವಲ್ಪ ದಿವಸವಿರ್ದು ಬಳಿಕ ಭೈರನದುರ್ಗದ ಭಕ್ತರುಗಳ ಬಿನ್ನಹವನು ಒಪ್ಪಿಕೊಂಡು ಅಲ್ಲಿಗೆ ದಯಮಾಡಿಸಿ ಅಲ್ಲಿಯ ಭಕ್ತರುಗಳಿಂದ ಪೂಜೋತ್ಸಹಂಗಳಂ ಕೈಕೊಂಡು ಅವರ ಆರಾಧನೆಗಳನ್ನು ತೀರಿಸಿ ಆ ಬಳಿಕ ಅಲ್ಲಿಯ ಭಕ್ತಗಣಂಗಳನ್ನು ಕರೆತರಿಸಿ ಅವರ ಮುಂತಿಟ್ಟುಕೊಂಡು ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಕಟ್ಟಿಗೆಹಳ್ಳಿಯ ಸಿದ್ಧವೀರಸ್ವಾಮಿಗಳವರಿಗೆ ಮಾಡಿ



ಅದೆ ಸ್ಥಲದಲ್ಲಿ ನಿರ್ವಯಲಾದರು. ಇವರ ತೋರಗದ್ದಿಗೆ ಭೈರನದುರ್ಗದಲ್ಲಿ ಇರುತ್ತದೆ. ೯೯ ವರುಷ ವಯಸ್ಸುಳ್ಳವರಾಗಿ ದಯಮಾಡಿಸಿದರು.

---

## ಸಿದ್ಧವೀರ ಸ್ವಾಮಿಗಳು.

೨೩ ನೆಯ ಪಟ್ಟದ ಕಟ್ಟಿಗೆ ಹಳ್ಳಿ ಸಿದ್ಧವೀರ ಸ್ವಾಮಿಗಳವರು ತಮ್ಮ ಗಣಸಮೂಹ ಮುಂತಾದ ೭೨ ಬಿರುದುಗಳಿಂದ ಉತ್ಸಹಂಗೊಳ್ಳುತ್ತ ದೇಶಂಗಳನ್ನು ಸಂಚರಿಸುತ್ತಿರುವಲ್ಲಿ ಇವರ ಬಳಿಗೆ ಸಂಪಾದನೆ ಸಿದ್ಧವೀರಪ್ಪನವರೆಂಬ ಚರಮೂರ್ತಿಗಳು ಬಂದು ಸನ್ನಿಧಿಗೆ ಸಾಷ್ಟಾಂಗವಂ ಮಾಡಿ ಬಿನ್ನೈಸಿಕೊಂಡಿದ್ದೇನೆಂಧರೆ ತಮ್ಮ ಇಷ್ಟಲಿಂಗದ ಗೋಳಕ ಸಡಿಲಿ ಆಗಲಿತೆಂದು ಅರಿಕೆ ಮಾಡಿಕೊಂಡಿದ್ದರಿಂದ ಚಿಂತೆ ಇಲ್ಲ ಕಂಥೆ ಬಲಿಸಿ ಧರಿಸಿಕೊಳ್ಳುವಂತೆ : ಸನ್ನಿಧಿಯಿಂದ ಅಪ್ಪಣೆ ಆಗಲು ಆ ಪ್ರಕಾರ ಮೂರು ನಾಲ್ಕು ವೇಳೆ ಕಂಥೆ ಬಲಿಸಿ ಧರಿಸಿಕೊಂಡರೂ ನಿಲ್ಲದೆ ಸಡಿಲಿದ್ದರಿಂದ ಇವರಿಗೆ ಗುರುಲಿಂಗಜಂಗಮ ಮುಂತಾದ ಅಷ್ಟಾವರಣದಲ್ಲಿ ದೃಢವಿಲ್ಲದ ಕಾರಣ ಈ ಸಂಪಾದನೆ ಚರಮೂರ್ತಿಗಳಾದ ಸಿದ್ಧವೀರಪ್ಪನವರು ಇದು ತಮಗೆ ತಿಳಿಯದೆ ಗುರುಸನ್ನಿಧಿಯಲ್ಲಿ ಇದರಿಂದೆ ಪ್ರಾಣವನ್ನು ಕಳೆದುಕೊಳ್ಳುತ್ತೇನೆ ಎಂದು ಅರಿಕೆ ಮಾಡಿಕೊಂಡಿದ್ದರಿಂದ ಸನ್ನಿಧಿಗೆ ಆಗ್ರಹ ಹುಟ್ಟಿ ಅವರ ಕೊರಳಿಗೆ ಹಸ್ತಪಾವುಡವ ಉಚ್ಚಿಸಿ ಹೊರಗೆ ಹಾಕಿಸಿದರು. ಈ ಸಂಪಾದನೆಯ ಚರಮೂರ್ತಿಯು ಸನ್ನಿಧಿಯು ತನಗೆ ಅಪಮಾನವ ಮಾಡಿಸಿ ಹೊರಗೆ ತಳ್ಳಿಸಿತೆಂಬ ಸಿಟ್ಟು ಮುಂದುಗೊಂಡು ಅಹಂಕಾರದಿಂದ ಗುರುಸನ್ನಿಧಿ ಎಂದರಿಯದೆ ಸನ್ನಿಧಿಗೆ ಅವಮಾನವನು ಮಾಡಬೇಕೆಂದು ಮೈಸೂರು ಸೀಮೆಯಲ್ಲಿದ್ದ ಹಾಗು ಮೈಸೂರಲ್ಲಿ ಇದ್ದ ಪರಮತಸ್ತರಾದ ರಾಮಾನುಜರು ವೈಷ್ಣವರು ಹತ್ತಿಬಣಜಿಗರು ಕೆಲವು ಜೊಳಿವಳ್ಳಾಳರು ಸಹ ಕಟ್ಟಿಕೊಂಡು ಶಾಸ್ತ್ರಮುಖದಿಂದ ತರ್ಕವನ್ನು ಮಾಡಬೇಕೆಂದು ಸನ್ನಿಧಿಯ ಮೇಲೆ ತಿರುಗಿ ಬಿದ್ದದರಿಂದ ಈ ಸಂಗತಿಯು ಮೈಸೂರು ಸಂಸ್ಥಾನಿಕರಿಗೆ ತಿಳಿದು ತ್ರಿಮತಸ್ಥರಿಗು ಸನ್ನಿಧಿಯ ಕೂಡ ತರ್ಕ ನಡೆಯುವದರಲ್ಲಿ ಶಾಸ್ತ್ರಮುಖದಿಂದ ಮಹಾ ಸ್ವಾಮಿಗಳವರು ಗೆದ್ದಂತಾದ್ದಕ್ಕೆ ಆ ಸಂಸ್ಥಾನಿಕರು ಮಾನ

ಸನ್ಮಾನಗಳಿಂದ ೭೨ ಬಿರುದುಗಳ ಸಮೇತವಾಗಿ ಉತ್ಸಹಂಗೊಳಿಸಿ ಮಹಾಸ್ವಾಮಿಗಳವರಿಗೆ ಕಾಣಿಕೆಯಂ ಒಪ್ಪಿಸಿ ಕಳಿಸಿದರು. ಈ ಸನ್ನಿಧಿ ಮೇಲೆ ತಿರುಗಿ ಬಿದ್ದ ಜನಗಳಲಿ ಕೆಲವು ಜನಗಳು ಕಾಣಿಕೆಯಂ ಒಪ್ಪಿಸಿ ಗುರುಗಳಿಂದ ದಯವಂ ಪಡೆಕೊಂಡರು. ಕೆಲವರು ಸನ್ನಿಧಿಯ ದಯವ ಪಡೆಕೊಳ್ಳದೆ ಗುರುದ್ರೋಹಿಗಳಾಗಿ ಬಹಿಷ್ಕಾರದಲಿ ಇರುವುದರಿಂದ ಈ ಜನರು ಸನ್ನಿಧಿಗೆ ದ್ರೋಹ ಮಾಡಿದ ಕಾರಣ ಈ ಜನರುಗಳನು ಸಿಂಹಾಸನ ಮೊದಲು ಮಠಸ್ಥರು ಬಳಿಕೆಯಲ್ಲಿ ತಗೆದುಕೊಳ್ಳದ ಕಾರಣ ಈ ಜನಗಳು ತಮ್ಮ ಇಷ್ಟಲಿಂಗಮಂ ತೆಗೆದುಹಾಕಿ ಶಿವಾಚಾರವಂ ಬಿಟ್ಟು ವೈಷ್ಣವ ಮತವ ಹೊಂದಿದರು. ಕೆಲವು ಲಿಂಗವಂ ಬಿಟ್ಟ ಜನರು ತಮಗೆ ಗುರುದ್ರೋಹ ತಪ್ಪುವುದಿಲ್ಲವೆಂದು ತಿಳಿದು ಸನ್ನಿಧಿಗೆ ಬಂದು ತಪ್ಪುಕಾಣಿಕೆಯನಿಟ್ಟು ಶರಣಾಗತರಾಗಲು ಮಹಾಸ್ವಾಮಿಗಳವರ ಚಿತ್ತದಲ್ಲಿ ಕರುಣ ಹುಟ್ಟಿ ನೀವು ಲಿಂಗವಂ ಬಿಟ್ಟ ಕಾರಣದಿಂದ ನಿಮಗೆ ಲಿಂಗವಂ ಕೊಡುವುದಕ್ಕೆ ಬರುವದಿಲ್ಲವೆಂದು ಅಪ್ಪಣೆಯಂ ಕೊಟ್ಟು ಭಸ್ಮ, ರುದ್ರಾಕ್ಷ ಪಂಚಾಕ್ಷರ ಮಂತ್ರವಂ ಕೊಟ್ಟು ಉದ್ಧಾರವಂ ಮಾಡಿದರು. ಕೆಲವರಿಗೆ ಲಿಂಗವೀರರಾಗಿ ನಮ್ಮ ಸನ್ನಿಧಿಯಲ್ಲಿರುವುದೆಂದು ಅಪ್ಪಣೆಯಂ ಕೊಟ್ಟು ಬಿರುದುಗಳಂ ಕೊಟ್ಟರು. ಈ ಜನಂಗಳಿಗೆ ತೆಲುಗು ಬಣಜಿಗರೆಂತಲು ಹತ್ತಿಬಣಜಿಗರೆಂತಲು ತಿಗಳರೆಂತಲು ಈ ಹೆಸರುಳ್ಳ ಜನರ ವಂಶಸ್ಥರು ಮೈಸೂರ ಸೀಮೆ ಗಟ್ಟದ ಕೆಳಗೆ ಕಂಚಿ ಕಾಳಹಸ್ತಿ ಸೀಮೆ ಮೊದಲಾದ ಸಕಲ ದೇಶಗಳಲ್ಲಿ ಈಗ ಇದ್ದಾರೆ. ಆದು ಕಾರಣ ಲಿಂಗ ಬಣಜಿಗರು ತೆಲುಗು ಬಣಜಿಗರೆಂದು ಎರಡು ಪ್ರಕಾರ ಹೆಸರಾಗಿ ಇವೆ. ಸಂಪಾದನೆಯ ಚರಮೂರ್ತಿಯಾದ ಸಿದ್ಧವೀರಪ್ಪನವರು ಗುರುಸನ್ನಿಧಿಯ ದಯವ ಹಡೆಕೊಳ್ಳದೆ ಗುರುದ್ರೋಹಿಯಾಗಿ ತಮ್ಮ ಚರಸಹಿತವಾಗಿ ಹಾಗಲವಾಡಿಗೆ ಹೋಗಿ ಆ ರಾಜನ ಭಕ್ತನ ಮಾಡಿಕೊಂಡು ಆ ಊರ ರಾಜನ ಭಕ್ತಿಯಿಂದ ಮಠಮಾನ್ಯಗಳಂ ಪಡೆದು ತಮ್ಮಂತ್ಯ ಭಾಗದಿ ತಮ್ಮ ಚರಂತಿಗೆಯನ್ನು ತನ್ನ ಮರಿಗೆ ಮಾಡಿ ಶಿವಾಧೀನವಾದರು. ಇವರ ಗದ್ದಿಗೆ ಹಾಗಲವಾಡಿಯಲ್ಲಿ ಇರುತ್ತದೆ. ಇವರ ಸೂತ್ರಿಕರ ಮಠಗಳು ಬೆಂಗಳೂರು, ಹಾಗಲವಾಡಿ, ಹುಕ್ಕೇರಿನಾಡು, ಒಂಟಿಮುರಿ, ನರೇಂದ್ರ, ಬಾಗನಾಡಿ ಮುಂತಾದ ಸ್ಥಳಗಳಲ್ಲಿ ಈಗ ಇರುತ್ತವೆ. ಕಾರಣ ಈ ಸಂಪಾದನೆಯ ಸಮಯವೆಂದು ಶ್ರೀ ಕಟ್ಟಿಗೆಹಳ್ಳಿ ಸ್ವಾಮಿಗಳವರ ಕಾಲದಲ್ಲಿ ಭೇದವಾಯಿತು. ಕಟ್ಟಿಗೆಹಳ್ಳಿ ಸ್ವಾಮಿಗಳವರು



ಮಾಗಡಿ ಪಟ್ಟಣಕ್ಕೆ ದಯಮಾಡಿಸಿ ತಮ್ಮ ಬೃಹನ್ಮಠದಲ್ಲಿ ತಮ್ಮ ಗಣಸಮೂಹ ಸಹಿತವಾಗಿ ಲಿಂಗಪೂಜಾ ಜಂಗಮದಾಸೋಹದೊಡನೆ ಇರುವಲ್ಲಿ ತಮ್ಮ ಸೂತ್ರಿಕರಾದ ಸಕಲ ಗುರುಚರ ಮೂರ್ತಿಗಳು ಆ ಸ್ಥಲದ ದೇವಭಕ್ತರು ಮುಂತಾದ ಸಮಸ್ತರ ಕರಿಸಿಕೊಂಡು ಮಹಾಗಣಾರಾಧನೆಯಂ ಮಾಡಿಸಿ ತಾವು ಸಲಹಿದ ಮರಿಗಳಾದ ಇಬ್ಬರನು ಕರೆಸಿ ಇವರಲ್ಲಿ ಹಿರಿಯ ಮರಿಗಳು ಗುರುಸೇವೆ, ಜಂಗಮದಾಸೋಹ, ಲಿಂಗನೈಷ್ಠೆ ಉಳ್ಳವರಾದ ಕಾರಣ ಇವರಿಗೆ ಮುನ್ನವೆ ಶಾಸ್ತ್ರವಂ ಸಂಪಾದಿಸಿ ಸ್ಥಲ ಕೂಡಿಸಿದ್ದರಿಂದ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಮಾಡಿ ಇವರ ಕಡೆಯಿಂದ ಚಿಕ್ಕವರಾದ ಮರಿಗೆ ರುದ್ರಸ್ವಾಮಿಗಳಿಗೆ ಅನುಗ್ರಹವಂ ಕೊಡಿಸಿ ಶಾಸ್ತ್ರವಂ ಸಂಪಾದಿಸಿ ಸ್ಥಲವ ಕೂಡಿಸಿದ ನಂತರ ಅವರಿಗೆ ತಮ್ಮ ಗುರುಗಳಾದ ತೋಂಟದ ಸಿದ್ಧಲಿಂಗ ದೇಶಿಕೇಂದ್ರರ ನಾಮವಾದ ನೊಡಸಿದ್ಧಲಿಂಗ ಸ್ವಾಮಿಗಳೆಂಬಭಿದಾನವನು ಕೊಟ್ಟು ಇವರ ಕಡೆಯಿಂದ ವಚನವನ್ನು ಮಹಾಸ್ವಾಮಿಗಳು ತಗೆದುಕೊಂಡಿದ್ದೇನಂದರೆ, ನೀವು ಈ ಮುರಿಗಾರಾಜೇಂದ್ರ ಸ್ವಾಮಿಗಳವರನ್ನು ಡಿಳ್ಳಿಗೆ ಕರೆದುಕೊಂಡು ಹೋಗಿ ಆ ಪಾಚ್ಛಾನಲ್ಲಿರುವ ನಮ್ಮ ಪರಮ ಗುರುಗಳಾದ ಪ್ರಭುಸ್ವಾಮಿಗಳವರ ಸುವರ್ಣದ ಶೂನ್ಯಪೀಠ ಪ್ರಣವ ಶಿಖಾಶೈಲ ಇವುಗಳನು ಕಲ್ಯಾಣಪುರದಿ ಶ್ರೀ ಚನ್ನಬಸವರಾಜೇಂದ್ರರು ಡಿಳ್ಳಿ ಸಂಸ್ಥಾನದ ವಜೀರ ಮಲ್ಲೂಖಾನನೆಂಬವನಿಗೆ ಕೊಟ್ಟು ನಿನಗೆ ಆ ದವಲತ್ತು ಆಗುವದು. ಮುಂದೆ ನಮ್ಮ ವಂಶೀಯರಾದ ಗಣವರರೀರ್ವರು ಡಿಳ್ಳಿಗೆ ಬಂದಲ್ಲಿ ನಿನ್ನ ಸಂಸ್ಥಾನದ ಪಟ್ಟದಾನೆ ಸತ್ತುದನು ನೋಡಿ ಪ್ರಾಣವಂ ಕೊಟ್ಟು ಪವಾಡವಂ ಮಾಡುವರು. ಇವರಿಗೆ ಆ ವಸ್ತುಗಳನು ಕೊಡುವಂತೆ ಅವನ ಕಡೆಯಿಂದ ಈ ಪ್ರಕಾರ ಲೇಖಗಳನ್ನು ಅವನ ಸಂಸ್ಥಾನದಲ್ಲಿ ಬರಿಸಿ ಇಡಿಸಿದ್ದಾರೆ. ನೀವು ಇರ್ವರು ಅಲ್ಲಿಗೆ ಹೋದಲ್ಲಿ ಆ ಪ್ರಕಾರ ಪವಾಡವಂ ಮಾಡಿ ಆ ವಸ್ತುಗಳನ್ನು ತಿರುವಿರಿ. ಆ ವಸ್ತುಗಳು ನಿಮಗೆ ದೊರೆಯಲು ಈ ಮುರಿಗಾರಾಜೇಂದ್ರರಿಗೆ ಶಿಖಾಪಟ್ಟವನು ಮಾಡಿ ನೀವು ಉಭಯತರು ನಮ್ಮಂತೆ ಮೂರುಸಾವಿರ ವಿರಕ್ತರಿಗು ಏಳನೂರ ಚರಮೂರ್ತಿಗಳಿಗು ಗುರುಗಳಾಗಿರುವುದೆಂದಪ್ಪಣೆಯಂ ಕೊಟ್ಟು ಆ ಪ್ರಕಾರ ಗುರುವಿನಾಜ್ಞೆಯಂತೆ ಮಾಡುವೆನೆಂದು ನೊಡಸಿದ್ಧಲಿಂಗ ರಾಜೇಂದ್ರ ಸ್ವಾಮಿಗಳವರ ಕಡೆಯಿಂದ ವಚನವನು ತೆಗೆದುಕೊಂಡು ಅವರಿಗೆ ಆಶೀರ್ವಾದವನ್ನು ಮಾಡಿ ತಮ್ಮ ೭೨ ಬಿರುದುಗಳು

ಮುಂತಾದ ಗಣಸಮೂಹವನು ಒಪ್ಪಿಸಿ ತಮ್ಮಲ್ಲಿರುವ ಶೂನ್ಯಸಿಂಹಾಸನ ಶಿಖಾಶೈಲ ಡಿಳ್ಳಿಯವರಿಗೆ ಶ್ರೀ ಚನ್ನಬಸವರಾಜೇಂದ್ರರು ಕೊಟ ಲೇಖಗಳಾದ ಶಾಸನವನು ಕೊಟ್ಟು ಕಳುಹಿಸಿ ಇತ್ತ ಕೆಲವು ಗಣಸಮೂಹದೊಡನೆ ಸಂಚಾರವನ್ನು ಮಾಡುತ್ತ ವಿರಾಟನಗರವಾದ ಹಾನಗಲ್ಲು ಸೀಮೆಯಲ್ಲಿರುವ ವರದಾ ನದೀ ಸಮೀಪವಾದ ತಿಳವಳ್ಳಿ ಎಂಬ ಗ್ರಾಮಕ್ಕೆ ದಯಮಾಡಿಸಿ ಅಲ್ಲಿಯೇ ನಿರ್ವಯಲಾದರು. ಇವರ ತೊರಗದ್ದಿಗೆ ತಿಳವಳ್ಳಿಯಲ್ಲಿರುತ್ತದೆ. ಇವರು ೯೦ ವರುಷ ವಯಸ್ಸುಳ್ಳವರಾಗಿ ಚಿತ್ತೈಸಿದರು.

---

## ನೊಡಸಿದ್ಧಲಿಂಗ ದೇಶಿಕೇಂದ್ರ.

೨೪ನೆಯ ಪಟ್ಟದ ನೊಡಸಿದ್ಧಲಿಂಗ ದೇಶಿಕೇಂದ್ರ ಸ್ವಾಮಿಗಳವರು ಆಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಮುರಿಗಾ ಸ್ವಾಮಿಗಳು ಸಹಿತವಾಗಿ ಗಣಸಮೂಹಗಳಿಂದ ದೇಶಂಗಳನು ಸಂಚರಿಸುತ್ತ ಕಲ್ಯಾಣಕ್ಕೆ ದಯಮಾಡಿಸಿ ಅಲ್ಲಿರುವ ಪ್ರಭು ಸ್ವಾಮಿಗಳ ಮಠದಲ್ಲಿ ಮಹಾಗಣಾರಾಧನೆಯಂ ಮಾಡಿಸಿ ತಮ್ಮಲ್ಲಿರುವ ಆಂದೊಳಿಕ ಮುಂತಾದ ೭೨ಬಿರುದುಗಳನ್ನು ತಮ್ಮಲ್ಲಿರುವ ಗಣಸಮೂಹವನ್ನು ಅಲ್ಲಿರುವ ಪ್ರಭುಸ್ವಾಮಿಗಳವರ ಮಠದಲ್ಲಿ ಇಟ್ಟು ತಾವು ಈರ್ವರು ತೋಳಿಗಾಧಾರ ಜೋಳಮಸ್ತಕ ಅಡ್ಡಜಾಡಿ ದಂಡ ಕಮಂಡಲು ಮುಂತಾದ ವಿರಕ್ತರೂಪಂಗಳಂ ತಾಳ್ದು ಕೆಲವು ಸೇವಕರನೊಡಗೊಂಡು ದೇಶಂಗಳ ಸಂಚರಿಸುತ್ತ ಡಿಳ್ಳಿ ಪಟ್ಟಣಕ್ಕೆ ದಯಮಾಡಿಸಿ ಅಲ್ಲಿರುವ ಮುದಿ ಮಲ್ಲಪ್ಪನೆಂಬ ಶಿವಭಕ್ತನ ಅರಮನೆಯಲ್ಲಿ ಕೆಲವು ದಿವಸ ಅವನ ಭಕ್ತಿಯಿಂದ ಅವನ ಗ್ರಹದಲ್ಲಿ ಇರುವಾಗ್ಗೆ ಪಾಚ್ಛಾನ ಪಟ್ಟದಾನೆ ರೋಗದಿಂದ ಸತ್ತು ಬಿದ್ದಿರುವುದನು ಆ ಪಟ್ಟಣದಲ್ಲಿರುವ ಜನರು ಉಭಯ ಸ್ವಾಮಿಗಳವರ ಸಮ್ಮುಖದಿ ಮುದಿಮಲ್ಲಪ್ಪನಿಗೆ ಹೇಳಲು ಇದು ಸ್ವಾಮಿಗಳವರಿಗೆ ತಿಳಿದು ಉಭಯ ಸ್ವಾಮಿಗಳವರು ಆ ಮನೆಯ ಮುದಿಮಲ್ಲಪ್ಪನ ಸಂಗಡ ಧೂಳಪಾದೋದಕವಂ ತೆಗಿಸಿಕೊಂಡು ಆನೆಯ ಬಳಿಗೆ ದಯಮಾಡಿಸಿ ಆನೆಯ ಮೇಲೆ ಧೂಳಪಾದೋದಕವಂ ಹಾಕಿಸಿ ಉಭಯರು ಚಿತ್ತದಿಂದ ಹೊ



ಡೆದು ಕರುಣದೃಷ್ಟಿಯಿಂದ ನೋಡಲು ಸತ್ತ ಗಜವು ಎದ್ದು ನಿಂತಿತು. ಇದ ಕಂಡು ಆ ಪುರಜನರು ಉಭಯ ಸ್ವಾಮಿಗಳವರನ್ನು ಕೊಂಡಾಡಿ ಶರಣಾಗತರಾದರು. ಈ ವರ್ತಮಾನವು ಪಾಚ್ಛಾನಿಗೆ ತಿಳಿದು ತನ್ನ ಚತುರಂಗ ಮಾರ್ಬಲ ಸಹಿತವಾಗಿ ಸಕಲ ವಿಭವದಿಂದ ಪಟ್ಟಣ ಮುಂತಾದ ತನ್ನ ಅರಮನೆಯ ಶೃಂಗರಿಸಿ ಆಂದೋಳಿಕ ಮುಂತಾದ ೭೨ಬಿರುದುಗಳನ್ನು ಪಾಚ್ಛಾನು ಬಂದು ಉಭಯ ಸ್ವಾಮಿಗಳವರಿಗೆ ಒಪ್ಪಿಸಿ ಸಕಲ ವಿಭವದಿಂದ ಉತ್ಸವದೊಡನೆ ಅರಮನೆಗೆ ಕರಕೊಂಡು ಹೋಗಿ ಉಭಯ ಸ್ವಾಮಿಗಳವರನ್ನು ಸಿಂಹಾಸನದ ಮೇಲೆ ಮೂರ್ತವನ್ನು ಮಾಡಿಸಿ ಪೂಜೆಯಂ ಮಾಡಿ ಸಾಷ್ಟಾಂಗವಂ ಹಾಕಿ ಎದ್ದು ಭಯಭಕ್ತಿಯಿಂದ ಮುಂದೇನಪ್ಪಣೆಯಾಗುತ್ತದೆ ಅದರಂತೆ ನಡೆದುಕೊಳ್ಳುತ್ತೇನೆ ಎಂದು ಕಿಂಕರತ್ವದಿಂದ ವಿನಂತಿ ಮಾಡಿಕೊಳ್ಳಲು ಆ ಪಾಚ್ಛಾನ ಕೈಯ್ಯಲಿ ಕಟ್ಟಿಗೆಹಳ್ಳಿ ಸ್ವಾಮಿಗಳವರು ಕೊಟ್ಟ ಶಾಸನದಲ್ಲಿದ್ದ ಪ್ರಕಾರ ಶಾಲಿವಾಹನ ಶಕ ಏಳನೂರು ಏಳನೆಯ ರಕ್ತಾಕ್ಷಿ ಸಂವತ್ಸರದ ಕಾರ್ತಿಕ ಶುದ್ಧ ಪಾಡ್ಯದಲ್ಲಿ ಡಿಳ್ಳಿ ಸಂಸ್ಥಾನದ ವಜೀರ ಮಲ್ಲುಖಾನನ ಕೈಯ್ಯಲ್ಲಿ ಶ್ರೀ ಚನ್ನಬಸವರಾಜೇಂದ್ರರು ಬಂಗಾರದ ಶೂನ್ಯಸಿಂಹಾಸನ ಶಿಖಾಶೈಲಗಳ ಕೊಟ್ಟ ಲೇಖಗಳನ್ನು ಹೇಳಿ ಆ ಶಾಸನವ ಪಾಚ್ಛಾನಿಗೆ ಕೊಡಲು ಅವನು ನೋಡಿಕೊಂಡು ತನ್ನ ಪೂರ್ವದ ದಪ್ತರದ ಕಚೇರಿಯಲ್ಲಿ ಆ ದಾಖಲೆಗಳನ್ನು ಹುಡುಕಿಸಲು ಸಿಕ್ಕಿದ್ದರಿಂದ ತನ್ನ ಸಂಸ್ಥಾನದಲ್ಲಿದ್ದ ಆ ಬಂಗಾರದ ಶೂನ್ಯ ಪೀಠ ೧, ಪ್ರಣವಶಿಖ ೧, ಶೈಲ ೧ ಇವಲ್ಲದೆ ತನ್ನ ಸ್ವಂತ ಲಾಲಶಿಖೆ ೧, ಹಸರಜುಷ್ಟಿ ೧, ಸವರಗುಂಡು ೧ ಇವುಗಳನ್ನು ಒಪ್ಪಿಸಿ ಪಾದಗಾಣಿಕೆಯಂ ಕೊಟ್ಟು ಉತ್ಸಾಹದಿಂದ ಉಭಯ ಸ್ವಾಮಿಗಳವರನ್ನು ಮುದಿಮಲ್ಲಪ್ಪನ ಮನೆಗೆ ಕಳುಹಿಸಿ ನಿತ್ಯ ಗಣಾರಾಧನೆ ಪೂಜೆ ನಿತ್ಯೋತ್ಸಹಂಗಳಿಂದ ಪಾಚ್ಛಾನು ತನ್ನ ಪಟ್ಟಣದಲ್ಲಿ ಇಟ್ಟುಕೊಂಡಿರಲು ಶಿವಾನುಭವ ಚರಂತಿಗೆ ಪಟ್ಟದ ನೊಡಸಿದ್ಧಲಿಂಗ ಸ್ವಾಮಿಗಳವರು ತಮ್ಮ ಗುರುವಾಜ್ಞೆ ಪ್ರಕಾರ ಶಿಖಾಪಟ್ಟವನ್ನು ಪಾಚ್ಛಾ ನೊದಲಾದವರ ಸಮಕ್ಷಮದಲ್ಲಿ ಮಾಡಲು ಆ ಪಾಚ್ಛಾನು ೭೨ ಬಿರುದುಗಳಿಂದ ಉತ್ಸಹಂ ಮಾಡಿಸಿ ಉಭಯ ಸ್ವಾಮಿಗಳವರಿಗೆ ತಾನು ಒಪ್ಪಿಸಿದ ೭೨ಬಿರುದುಗಳು ಸಕಲ ದೇಶಂಗಳಲ್ಲಿ ನಡೆಯಲಿಕ್ಕೆ ಆತಂಕ ಬಾರದಂತೆ ಸನದುಗಳನ್ನು ಬರೆಸಿಕೊಟ್ಟು ಆಹೇರು ಮುಂತಾದ ಕಾಣಿಕೆಯಂ ಒಪ್ಪಿಸಿ

ಜಂಗಮಜಿತಾ ಪಕೀರು ಮುರಿಗಾ ಸಿದ್ಧಲಿಂಗ ಪಾಚ್ಛಾರೆಂಬ ಕಿತಾಬನ್ನು ಕೊಟ್ಟು ಬೆಂಬಲವಾಗಿ ಒಂದು ಸಾವಿರ ದಂಡನ್ನು ಕೊಟ್ಟು ತನ್ನ ದೇಶದಲ್ಲಿ ಉಭಯ ಸ್ವಾಮಿಗಳವರು ಎಲ್ಲಿ ದಯಮಾಡಿಸಿದರೂ ಸರಬರಾಯಿ ನಡೆವಂತೆ ರಹದಾರಿಗಳನ್ನು ಕೊಟ್ಟು ತನ್ನ ಎರಡುನೂರು ಕುದುರೆ ಐದು ಆನೆ ಅಂಬಾರಿ ಶಿವಪೂಜೆ ಬಂಗಾರದ ನವರತ್ನ ಖಚಿತವಾದ ಮಂಟಪವು ಮುಂತಾದವುಗಳನ್ನು ಒಪ್ಪಿಸಿ ಉತ್ಸಹದಿಂದ ಉಭಯ ಸ್ವಾಮಿಗಳವರನ್ನು ಕಳುಹಿಸಿಕೊಡಲು ಅಲ್ಲಿಂದ ದೇಶಂಗಳನು ಸಂಚರಿಸುತ್ತ ಹೈದರಾಬಾದು ಶಹರಕ್ಕೆ ದಯಮಾಡಿಸಲು ಅಲ್ಲಿ ನವಾಬನು ಬಂದು ಶರಣಾಗತನಾಗಿ ೭೦ ಬಿರುದುಗಳೊಡನೆ ಉತ್ಸಹಂಗೊಳಿಸಿ ತನ್ನ ಭಕ್ತಿಯಿಂದ ಮತಮಾನ್ಯ ರುಸುಮು ಕಾಣಿಕೆಯಂ ಮಾಡಿಕೊಟ್ಟು ನಮಸ್ಕರಿಸಿ ಉಭಯ ಸ್ವಾಮಿಗಳನ್ನು ನಿತ್ಯ ಗಣಾರಾಧನೆ ಪೂಜೋತ್ಸಹಂಗಳಿಂದ ಇಟ್ಟುಕೊಂಡಿರುವಲ್ಲಿ ಆ ನಬಾಬನಾನೆ ಪಟ್ಟದ್ದು ಮೃತಪಡಲು ಆ ನಬಾಬನಿಗೆ ಡಿಳ್ಳಿಯಲ್ಲಿ ಉಭಯ ಸ್ವಾಮಿಗಳವರು ಸತ್ತ ಗಜವನ್ನು ಎಬ್ಬಿಸಿದ ವೃತ್ತಾಂತವನ್ನು ಕೇಳಿದ್ದರಿಂದ ಸ್ವಾಮಿಗಳವರ ಬಳಿಗೆ ಬಂದು ಸಾಷ್ಟಾಂಗವೆರಗಿ ತನ್ನ ಪಟ್ಟದಾನೆಗೆ ಪ್ರಾಣವನ್ನು ಕೊಡುವುದೆಂದು ಬಿನ್ನೈಸಿಕೊಳ್ಳಲು ಆ ಆನೆಗೆ ಪ್ರಾಣವನ್ನು ಕೊಟ್ಟದ್ದರಿಂದ ಆ ಪಟ್ಟಣದ ಸಮಸ್ತ ಪ್ರಜೆ ಪರಿವಾರ ಮುಂತಾದ ನಬಾಬನು ಉಭಯ ಸ್ವಾಮಿಗಳವರನ್ನು ಕೊಂಡಾಡಿ ತನ್ನ ದೇಶದಲ್ಲಿ ಕೆಲವು ರಾಜ್ಯವನ್ನು ಒಪ್ಪಿಸುತ್ತೇನೆ, ಉಭಯ ಸನ್ನಿಧಾನವು ತನ್ನ ಭಕ್ತಿಯಲ್ಲಿ ಇರುವುದೆಂದು ಬಿನ್ನೈಸಿಕೊಳ್ಳಲು ಅದಕ್ಕೆ ಒಪ್ಪದ ಕಾರಣ ಉಭಯ ಸ್ವಾಮಿಗಳವರಿಂದ ೪ ಶ್ವೇತಛತ್ರ ೩ ಆಂದೋಳಿಕ ಮುಂತಾದ ಅನೇಕ ಬಿರುದುಗಳನ್ನು ಒಪ್ಪಿಸಿ. ಪಾದಗಾಣಿಕೆಯಂ ಕೊಟ್ಟು ಉತ್ಸಹದಿಂದ ಕಳುಹಿಸಲು ಅಲ್ಲಿಂದ ಸಂಚರಿಸುತ್ತ ಸ್ವಾದೆ ಸೀಮೆಯಲ್ಲಿರುವ ಇಸಳೂರಿಗೆ ದಯಮಾಡಿಸಿದರು. ಇವರನ್ನು ಆ ಊರ ಭಕ್ತರು ೭೦ ಬಿರುದುಗಳೊಡನೆ ಉತ್ಸಹದಿಂದ ಕರೆದುಕೊಂಡು ಹೋಗಿ ತಮ್ಮ ಭಕ್ತಿಯಿಂದ ಉಭಯ ಸ್ವಾಮಿಗಳವರನ್ನು ತಮ್ಮೂರಲ್ಲಿ ಇಟ್ಟುಕೊಂಡಿರಲು ಆಷ್ಟರಲ್ಲೆ ಶ್ರೀ ನೊಡಸಿದ್ಧಲಿಂಗಪಾಚ್ಛಾರಿಗೆ ತಮ್ಮಂತ್ಯ ಭಾಗವನ್ನು ತಮ್ಮ ದಿವ್ಯಜ್ಞಾನದಿಂದ ತಿಳಿದು ಆ ಊರಲ್ಲಿ ಇರುವ ಭಕ್ತಗಣಂಗಳು ಹಾಗು ಆ ಸೀಮೆ ಸೋದೆರಾಜರು ಮುಂತಾದ ಆ ಸೀಮೆ ದೇವಭಕ್ತರುಗಳನು ಕರೆತರಿಸಿ ಮುರಿಗಾ ಸ್ವಾಮಿಗಳವರ



ಮುತಿಂಟ್ಟುಕೊಂಡು ಅವರಿಗೆ ಅಪ್ಪಣೆ ಕೊಟ್ಟದ್ದೇನೆಂದರೆ ಶ್ರೀಮನ್ಮಹಾರಾಜ ನಿರಂಜನ ಶೂನ್ಯಸಿಂಹಾಸನಾಧೀಶ್ವರ ಜಗದ್ಗುರು ಅಲ್ಲಮಪ್ರಭು ಚನ್ನಬಸವರಾಜೇಂದ್ರ ಮಹಾಸ್ವಾಮಿಗಳವರ ಸೂತ್ರವಿಡಿದು ಶ್ರೀ ಚನ್ನಬಸವೇಶ್ವರನು ಸಿದ್ಧರಾಮಸ್ವಾಮಿಗಳವರಿಗೆ ಬೋಧಿಸಿದ ಶಿವಾನುಭವ ಪುಸ್ತಕದ ಸೂತ್ರವಿಡಿದು ಶಿಖಾಶೈಲವಿಲ್ಲದೆ ಸೊನ್ನಲಾಪುರದ ಸಿದ್ಧರಾಮಸ್ವಾಮಿಗಳವರ ಬಳಿವಿಡಿದು ಕಡೆಗೆ ನಮ್ಮ ತನಕ ಶಿವಾನುಭವ ಚರಂತಿಗೆ ಪಟ್ಟವು ಇಪ್ಪತ್ತುಮೂರು ಪಟ್ಟವಾದವು. ನಮ್ಮ ಗುರುನಾಜ್ಞೆ ಪ್ರಕಾರ ಡಿಳ್ಳಿಯಲ್ಲಿ ಈ ಮುರುಗಾರಾಜೇಂದ್ರ ಸ್ವಾಮಿಗಳವರಿಗೆ ಶಿಖಾಪಟ್ಟವ ಪ್ರಭುಚನ್ನಬಸವರಾಜೇಂದ್ರರ ತರುವಾಯದಲ್ಲಿ ಒಂದನೆಯ ಶಿಖಾಪಟ್ಟವನ್ನು ಮಾಡಿದ ನಂತರ ಕಟ್ಟಿಗೆಹಳ್ಳಿಸ್ವಾಮಿಗಳವರ ಈಜೆಗೆ ಆ ಮುರಿಗಾಸ್ವಾಮಿಗಳು ನಾವು ಉಭಯತರು ಷಟ್ಸ್ಥಲಕ್ಕೆ ಅಧಿಪತಿಗಳಾಗಿ ದೇಶ ಮಧ್ಯದಲ್ಲಿರುವ ಮೂರುಸಾವಿರ ವಿರಕ್ತರಿಗು ಏಳುನೂರು ಬುಡಕಟ್ಟಿನ ಚರಮೂರ್ತಿಗಳಿಗು ಗುರುಗಳಾಗಿ ಇವರುಗಳ ಕಡೆಯಿಂದ ಈ ವರೆವಿಗು ಕಾಣಿಕೆಗಳನ್ನು ತೆಗೆದುಕೊಂಡೆವು. ಇದಲ್ಲದೆ ಆ ಬುಡಕಟ್ಟಿನ ಚರಮೂರ್ತಿಗಳಲ್ಲಿಯೆ ಆಗಲಿ ಅಥವ ವಿರಕ್ತರಲ್ಲಿಯೆ ಆಗಲಿ ಇವರು ಚರಂತಿಗೆಯನ್ನು ಮಾಡಿದರೆ ಕಾಣಿಕೆ ನೂರು ರುಪಾಯಿ ತಕ್ಕೊಳ್ಳುವೆವು. ಶಾಸ್ತ್ರಸಂಪಾದಿಸಿ ಸ್ಥಲ ಕೂಡಿಸಿ ವಿರಕ್ತಾಶ್ರಮವನ್ನು ಕೊಟ್ಟಲ್ಲಿ ಐವತ್ತು ರುಪಾಯಿ ಕಾಣಿಕೆಯನ್ನು ತಗೆದುಕೊಳ್ಳುವೆವು. ಇದಲ್ಲದೆ ದೇಶಂಗಳಲ್ಲಿರುವ ಭಕ್ತಗಣಂಗಳಿಂದ ದೀಪಾರಾಧನೆ ಕಾಣಿಕೆ ಆಚಾರ ವಿಚಾರದಿಂದ ಬಂದ ಕಾಣಿಕೆ ಮುಂತಾದ ದ್ರವ್ಯಂಗಳಿಂದ ನಮ್ಮ ಸಂಸ್ಥಾನದ ವೆಚ್ಚ ಸರಿಯಾಗಿ ನಡಿಸುತ್ತ ಗಣಸಮೂಹದೊಡನೆ ಲಿಂಗಪೂಜೆ ಜಂಗಮದಾಸೋಹವನ್ನು ಮಾಡುತ್ತ, ಇತ್ತಲು ನಾವು ೧೧ ಚರಂತಿಗೆ ಕೊಟ್ಟು ಇದ್ದೇವೆ. ಈ ಮುರಿಗಾಸ್ವಾಮಿಗಳವರು ೪೦ ಚರಂತಿಗೆ ಕೊಟ್ಟು ಇದ್ದಾರೆ. ಅಂತು ಕೂಡಿ ನಮ್ಮ ಉಭಯತರಿಂದ ೫೧ ಚರಂತಿಗೆ ಕೊಟ್ಟು ಇದ್ದೇವೆ. ಹಿಂದೆ ನಮ್ಮ ಗುರುಗಳಾದ ತೋಂಟದಾರ್ಯ ಸ್ವಾಮಿಗಳವರು ಮಾಡಿದ ಏಳುನೂರು ಚರಂತಿಗೆ ನಮ್ಮ ಉಭಯತರಿಂದ ಆದ ಚರಂತಿಗೆ ೫೧ ಅಂತು ಕೂಡಿ ಏಳುನೂರು ಐವತ್ತೊಂದು ಚರಮೂರ್ತಿಗಳು ಗುರುಗಳಾಗಿ ಇಂದಿನ ವರೆಗೆ ನಮ್ಮ ಉಭಯತರೊಳಗೆ ಶಿಖಾಪಟ್ಟವೆಂತಲೂ ಶಿವಾನುಭವ ಚರಂತಿಗೆ ಪಟ್ಟವೆಂತಲು ಈ ಎರಡು ಪ್ರಕಾರವಿದ್ದರೂ ಭೇದವಿಲ್ಲದೆ ಇದ್ದ

ಕಾರಣ ಎಲ್ಲ ಮರ್ಯಾದೆಗಳಿಂದಲು ಸರಿಯಾಗಿ ನಡೆಯುತ್ತ ಬಂದಿತು. ಇನ್ನು ಮೇಲೆ ಎಲ್ಲ ಭಾರವು ಈ ಇಮ್ಮಡಿ ಮುರಿಗಾರಾಜೇಂದ್ರ ಸ್ವಾಮಿಗಳವರನ್ನೇ ಕೂಡಿ ಇದೆ. ನಮಗೆ ಸಾಂಬನ ಅಪ್ಪಣೆ ಆದ್ದರಿಂದ ಇವೊತ್ತಿಗೆ ೮ ದಿವಸದಲ್ಲಿ ಸೋಮವಾರ ಉದಯದಲ್ಲಿ ಕೈಲಾಸವಾಸಿಗಳಾಗುವೆವೆಂದು ಅಪ್ಪಣೆಯನ್ನು ಕೊಟ್ಟು ಅಲ್ಲಿಯ ತನಕ ಪ್ರಭುಲಿಂಗ ಲೀಲಾ ವಿಲಾಸವನ್ನು ಓದಿಸಿ ಶ್ರವಣ ಗೊಳಿಸುವುದು ಆ ಪರಿಯಂತರ ನಿತ್ಯ ಪೂಜಾಗಣಾರಾಧನೆ ಆಗುವುದೆಂದು ಮುರಿಗಾ ಸ್ವಾಮಿಗಳು ಮುಂತಾದ ಸಕಲರಿಗು ಸೂಚಿಸಲು ಸರ್ವರು ಅದನ್ನು ಕೇಳಿ ಮಹಾಸ್ವಾಮಿಗಳವರು ತಮ್ಮ ಇಚ್ಛೆ ಇದ್ದಂತೆ ನಡಿಸಿಕೊಡುತ್ತೇವೆ, ಮುಂದೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಮಾಡಿ ನಮ್ಮಗಳ ಕೈಯ್ಯಲ್ಲಿ ಕೊಟ್ಟು ದಯಮಾಡಿಸಿದಲ್ಲಿ ಆ ಸ್ವಾಮಿಗಳವರನ್ನು ತಮ್ಮಂತೆ ಕಂಡು ನಡೆದುಕೊಳ್ಳುತ್ತೇವೆ, ಎಂದು ಅವರು ಹೇಳಿಕೊಳ್ಳಲು ಆ ತತ್ಕ್ಷಣವೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಶ್ರೀ ನಾಚ್ಯದ ಕುಮಾರ ದೇಶಿಕೇಂದ್ರ ಸ್ವಾಮಿಗಳವರಿಗೆ ಮಾಡಿ ಅದೇ ಗ್ರಾಮದಲ್ಲಿ ನಿರ್ವಯಲಾದರು. ಇವರ ತೊರಗದ್ದಿಗೆ ಸೋದೆ ಸೀಮೆಯಲ್ಲಿ ಇರುವ ಇಸಳೂರು ಕೆರೆಯ ತಟಿಯಲ್ಲಿ ಧರ್ಮಾ ನದಿಯು ಉದ್ಭವವಾದ ಕೂಪದ ಹತ್ತಿರದಲ್ಲಿ ಇರುವ ಬ್ಯಾಣದ ಬೈಲು ಸ್ಥಳಕ್ಕೆ ಲಿಂಗ ಮುದ್ರೆ ಶಿಲೆಗಳನ್ನು ಸ್ಥಾಪನಂಗೈದು ಆ ಸ್ಥಳದಲ್ಲಿ ಸಮಾಧಿಯನ್ನು ಮಾಡಿಸಿ ಸ್ವಾಮಿಗಳವರನ್ನು ಉತ್ಸಹದೊಡನೆ ನೊರವಣಿಗೆಯಂ ಮಾಡಿ ಸಂಸ್ಕರಿಸಿ ಮಠವನ್ನು ಕಟ್ಟಿಸಿ ಗದ್ದಿಗೆಯನ್ನು ಸ್ಥಾಪನಂಗೈದರು. ಇವರ ತೋರಗದ್ದಿಗೆ ಇಸಳೂರಲ್ಲಿ ಇರುತ್ತದೆ. ಆ ಬಳಿಕ ಸಕಲ ಗುರು ಚರಮೂರ್ತಿಗಳು ಮುಂತಾದ ದೇವ ಭಕ್ತರು ಕೂಡಿ ಶ್ರೀ ಮುರಿಗಾರಾಜೇಂದ್ರ ಸ್ವಾಮಿಗಳವರು ಕಾರಣತ್ವಕ್ಕೆ ಗುರುಗಳು ಕಾರ್ಯತ್ವಕ್ಕೆ ಶ್ರೀ ಕುಮಾರ ದೇಶಿಕೇಂದ್ರ ಸ್ವಾಮಿಗಳವರೇ ಗುರುಗಳೆಂದು ಸ್ವಾದಿ ಧೊರೆಗಳು ಮುಂತಾದ ಸೀಮೆ ಗೌಡರು ಆ ಗುರು ಚರಮೂರ್ತಿಗಳು ಶೆಟ್ಟರು ದೈವದವರು ಸಹವಾಗಿ ನಿಯಮಿಸಿ ಕೊಟ್ಟು ಕುಮಾರ ಸ್ವಾಮಿಗಳವರಿಗೆ ಮುರಿಗಾಸ್ವಾಮಿಗಳು ಮುಂತಾದ ಸಕಲ ಗುರು ಚರಮೂರ್ತಿಗಳು ಆಹೇರು ಮುಂತಾದ ಸಕಲ ಮರ್ಯಾದೆಗಳಂ ಕೊಟ್ಟು ಶ್ರೀ ಮುರಿಗಾರಾಜೇಂದ್ರ ಸ್ವಾಮಿಗಳವರ ಸರಿಯಾಗಿ ಸಿಂಹಾಸನಾರೂಢರಂ



ಮಾಡಿಸಿ ಆಂದೋಳಿಕ ಮುಂತಾದ ೭೨ ಬಿರುದುಗಳ ಸಮೇತವಾಗಿ ಉತ್ಸಹಂಗೊಳಿಸಿ ಮಹಾಗಣಾರಾಧನೆಯಂ ಮಾಡಿಸಿದ ಬಳಿಕ ಸಕಲ ದೇವಭಕ್ತರು ಕಾಣಿಕೆಯಂ ಒಪ್ಪಿಸಿ ಉಭಯ.........................

ಸೂಚನೆ:— ನಮ್ಮ ಹತ್ತರವಿದ್ದ ಪ್ರತಿಯು ಇಲ್ಲಿಗೆ ಮುಗಿದದ್ದರಿಂದ ಇಷ್ಟನ್ನೇ ನಾವು ಇಲ್ಲಿ ಅಚ್ಚುಹಾಕಿದ್ದೇವೆ.